23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 294 | ನವದೆಹಲಿ | ಬೆಲೆ ₹10 | ಏಪ್ರಿಲ್ 30 2026, ಗುರುವಾರ



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ







**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

## ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್
(1916 ರಿಂದ)

# ಶತಮಾನದ ಸುಗಂಧ ಸಾಧನೆಯ ನವಯುಗ




ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಯು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಾಧಿಸಿದ ಪ್ರಗತಿ ಅಭೂತಪೂರ್ವವಾದುದು. ಉತ್ಪಾದನೆ, ಮಾರಾಟ ಮತ್ತು ಲಾಭದಲ್ಲಿ ಹೊಸ ದಾಖಲೆಗಳನ್ನು ಸೃಷ್ಟಿಸಿದೆ. ತನ್ನ ಜನಪ್ರಿಯ "ಮೈಸೂರು ಸ್ಯಾಂಡಲ್" ಉತ್ಪನ್ನಗಳ ಮೂಲಕ ಗ್ರಾಹಕರ ಮನಸ್ಸಿನಲ್ಲಿ ಅಚ್ಚೊತ್ತಿರುವ ಸಂಸ್ಥೆಯು ಮಾರುಕಟ್ಟೆ ವಿಸ್ತರಣೆಯೊಂದಿಗೆ ತನ್ನ ನೆಲೆಯನ್ನು ಇನ್ನಷ್ಟು ಭದ್ರಪಡಿಸುತ್ತಿದೆ. ಅಷ್ಟು ಮಾತ್ರವಲ್ಲದೆ ದಕ್ಷ ನಾಯಕತ್ವ ಮತ್ತು ಕಾರ್ಯತಂತ್ರದ ಯೋಜನೆ ಮೂಲಕ ನಿರಂತರ ಪ್ರಗತಿಯನ್ನು ಖಚಿತಗೊಳಿಸುತ್ತಿದೆ.







**ಶ್ರೀ ಎಂ.ಬಿ. ಪಾಟೀಲ**, ಮಾನ್ಯ ಬೃಹತ್ & ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಮತ್ತು **ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ**, ಮಾನ್ಯ ಶಾಸಕರು & ಅಧ್ಯಕ್ಷರು-ಕೆಎಸ್&ಡಿಎಲ್, ಇವರು ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ**ನವರಿಗೆ, ಮೈಸೂರ್ ಸ್ಯಾಂಡಲ್ ಉತ್ಪನ್ನಗಳನ್ನು ನೀಡುತ್ತಿರುವುದು.

## 2025-26ನೇ ಸಾಲಿನಲ್ಲಿ ಕೆಎಸ್&ಡಿಎಲ್ ಸಾರ್ವಕಾಲಿಕ ದಾಖಲೆ

**₹2,016 ಕೋಟಿ**
ವಹಿವಾಟು

**₹507 ಕೋಟಿ**
ನಿವ್ವಳ ಲಾಭ

**₹150 ಕೋಟಿ**
ಸರ್ಕಾರಕ್ಕೆ ಲಾಭಾಂಶ
ಸರ್ಕಾರಕ್ಕೆ ಲಾಭಾಂಶ ಪಾವತಿಯಲ್ಲಿ 21ನೇ ಸ್ಥಾನದಿಂದ 1ನೇ ಸ್ಥಾನಕ್ಕೆ

**47,494**
ಮೆಟ್ರಿಕ್ ಟನ್ ಉತ್ಪಾದನೆ

**57 ಹೊಸ** ಉತ್ಪನ್ನಗಳು

ರಫ್ತು ಹೆಚ್ಚಳ

ರಾಜ್ಯಾದ್ಯಂತ 'ಮೈಸೂರ್ ಸ್ಯಾಂಡಲ್ ಸೋಪ್ ಮೇಳ' ಆಯೋಜನೆ

ಶ್ರೀಗಂಧ ಸಾಗುವಳಿ ವಿಸ್ತರಣೆ
**700+ ಬೆಳೆಗಾರರು, 3,800+ ಎಕರೆಗಳು**

**ತನ್ನ 105 ವರ್ಷಗಳ ಇತಿಹಾಸದಲ್ಲಿ ₹1,000 ಕೋಟಿ ವಾರ್ಷಿಕ ವಹಿವಾಟು ದಾಟಿದ ಸಂಸ್ಥೆಯು ಕೇವಲ ನಾಲ್ಕು ವರ್ಷಗಳಲ್ಲಿ ಅದನ್ನು ₹2,000 ಕೋಟಿಗೆ ಏರಿಸುವ ಮೂಲಕ ಬೆಳವಣಿಗೆಯ ಚಿತ್ರಣವನ್ನು ಆಮೂಲಾಗ್ರವಾಗಿ ಬದಲಿಸಿದೆ.**

**ಕಳೆದ 5 ವರ್ಷಗಳಲ್ಲಿ ಕೆಎಸ್&ಡಿಎಲ್ ಲಾಭದ ಬೆಳವಣಿಗೆ: 35% ಸಿಎಜಿಆರ್**

ಉತ್ಪಾದನೆ, ವಹಿವಾಟು ಹಾಗೂ ಲಾಭದಲ್ಲಿನ ಈ ಐತಿಹಾಸಿಕ ದಾಖಲೆಯನ್ನು ಯಾವುದೇ ಹೆಚ್ಚುವರಿ ಯಂತ್ರೋಪಕರಣಗಳ ಬಳಕೆಯಿಲ್ಲದೆ ಹಾಗೂ ನೌಕರರ ಸಂಖ್ಯೆಯಲ್ಲಿ ಹೆಚ್ಚಳವಿಲ್ಲದೆ, ಕ್ಷಮತೆಯನ್ನು ಹೆಚ್ಚಿಸಿ ಸಾಧಿಸಲಾಗಿದೆ.

### ಸಂಸ್ಥೆಗೆ ಮಾನ್ಯ ಸಚಿವರಾದ ಶ್ರೀ ಎಂ.ಬಿ. ಪಾಟೀಲರ ಮುಂದಿನ ಮಹತ್ವಾಕಾಂಕ್ಷೆಯ ಗುರಿ

ವಹಿವಾಟನ್ನು **2028ರ ವೇಳೆಗೆ ₹3,000 ಕೋಟಿಗೆ** ಮತ್ತು **2030ರ ವೇಳೆಗೆ ₹5,000 ಕೋಟಿಗೆ** ಕೊಂಡೊಯ್ಯುವುದು.

### ಸಂಸ್ಥೆಗೆ ಸಂದಿರುವ ಪ್ರಶಸ್ತಿ-ಗೌರವಗಳು

- ಉತ್ತಮ ಆಡಳಿತಕ್ಕಾಗಿ ರಾಜ್ಯ ಸರ್ಕಾರದಿಂದ **"ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ 2025"**
- ಐ.ಐ.ಎಂ.ಎಂ. ವತಿಯಿಂದ **"ಬೆಸ್ಟ್ ಸಿ.ಇ.ಒ. 2025"** ಪ್ರಶಸ್ತಿ
- ನಿರ್ದೇಶಕರ ಸಲಹೆಗಾರರ ಒಕ್ಕೂಟದ (DAC) ವತಿಯಿಂದ **"ಎಕ್ಸೆಲೆನ್ಸ್ ಇನ್ ಸಿ.ಎಸ್.ಆರ್. 2025"** ಪ್ರಶಸ್ತಿ
- ನ್ಯೂಸ್ 18 ನೆಟ್ ವರ್ಕ್ ವತಿಯಿಂದ **"ಬೆಸ್ಟ್ ಎಮೆರ್ಜಿಂಗ್ ಸ್ಟೇಟ್ ಪಿ.ಎಸ್.ಯು. 2025"** ಪ್ರಶಸ್ತಿ






ಭಾರತ ಚಿತ್ರರಂಗದಲ್ಲಿ ಜನಪ್ರಿಯರಾಗಿರುವ ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಸುಮಾರು 3 ಕೋಟಿಗೂ ಅಧಿಕ ಅನುಯಾಯಿಗಳನ್ನು ಹೊಂದಿರುವ ಕು|| ತಮನ್ನಾ ಭಾಟಿಯಾ ಅವರನ್ನು ಮೈಸೂರ್ ಸ್ಯಾಂಡಲ್ ಸೋಪ್ ರಾಯಭಾರಿಯನ್ನಾಗಿ ನೇಮಿಸಲಾಗಿದೆ.

ಸಂಸ್ಥೆಯ ಈ ಅದ್ಭುತ ಸಾಧನೆಗೆ ಕಾರಣರಾದ ಕಾರ್ಮಿಕರು, ಸಿಬ್ಬಂದಿ ವರ್ಗ, ನೌಕರರ ಸಂಘ, ಅಧಿಕಾರಿ ವೃಂದ, ಪ್ರಧಾನ ವ್ಯವಸ್ಥಾಪಕರು-ಆಡಳಿತ, ಪ್ರಧಾನ ವ್ಯವಸ್ಥಾಪಕರು-ಹಣಕಾಸು, ಎಲ್ಲರಿಗೂ ಅವರ ಅಮೂಲ್ಯ ಕೊಡುಗೆಗಳಿಗೆ ಧನ್ಯವಾದಗಳು.




ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು. -ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

**ಡಾ. ಎಸ್. ಸೆಲ್ವಕುಮಾರ್**, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

**ಡಾ. ಪ್ರಶಾಂತ್ ಪಿಕೆಎಂ**, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು
**ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್**

## ನಿತ್ಯ ಪಂಚಾಂಗ 30.04.2026 ಗುರುವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ-ವಸಂತ ಋತು, ಚಾಂದ್ರಮಾನ, ಚೈತ್ರ-ವೈಶಾಖ ಮಾಸ

ವೈಶಾಖ ಶುದ್ಧ, ಚತುರ್ದಶಿ, ಚಿತ್ತ ನಕ್ಷತ್ರ, ಕಾನಂಗಿ ನೃಸಿಂಹ/ಶಂಬೂರು ಸುಬ್ರಹ್ಮಣ್ಯ ಉತ್ಸವ, ಚಾಂದ್ರ ನೃಸಿಂಹ ಜಯಂತಿ, ಕೊಳ್ಳೇಗಾಲ ವಿಶ್ವೇಶ್ವರ ರಥ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 –12.00 | 1.30 – 3.00 |
| ಮಂಗಳ | 3.00 – 4.30 | 9.00 –10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 –12.00 |
| ಗುರು | 1.30 – 3.00 | 6.00 – 7.30 | 9.00 –10.30 |
| ಶುಕ್ರ | 10.30 –12.00 | 3.00 – 4.30 | 7.30 – 9.00 |
| ಶನಿ | 9.00 –10.30 | 1.30 – 3.00 | 6.00 – 7.30 |

# ಬೆಂಗಳೂರು ನಗರದಲ್ಲಿ 10 ಕೋಟಿ ಮರಗಳನ್ನು ಬೆಳೆಸಲು ಕ್ರಮ



**ಬೆಂಗಳೂರು, ಏ.29:** ಬೆಂಗಳೂರಿನ ಹಸಿರು ಹೊದಿಕೆಯನ್ನು ಸುಧಾರಿಸಲು ಕನಿಷ್ಠ 10 ಕೋಟಿ ಮರಗಳು ಬೇಕಾಗುತ್ತವೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಂಗಳವಾರ ಹೇಳಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡೆಮಿ ಆಯೋಜಿಸಿದ್ದ "ಬೆಂಗಳೂರಿನ ಮೇಲೆ ವಿಪರೀತ ಶಾಖ ಮತ್ತು ಅದರ ಪರಿಣಾಮ" ಎಂಬ ವಿಚಾರ ಸಂಕಿರಣದಲ್ಲಿ ಮಾತನಾಡಿದ ಸಚಿವರು, ನಗರದಲ್ಲಿ ಹಸಿರು ಹೆಚ್ಚಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಿದರು. ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ 11 ಕೋಟಿ ಸಸಿಗಳನ್ನು ನೆಡಲಾಗಿದೆ ಎಂದು ಅವರು ಹೇಳಿದರು. ಈ ಸಸಿಗಳಲ್ಲಿ ಎಷ್ಟು ಉಳಿದಿವೆ ಎಂಬ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್ ಮೂಲಕ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

ಕೊತ್ತನೂರು, ಕಾಡುಗೋಡಿ, ಬಿ.ಎಂ. ಕಾವಲ್ ಮತ್ತು ತುರಹಳ್ಳಿಯಂತಹ ಪ್ರದೇಶಗಳಲ್ಲಿ ಅತಿಕ್ರಮಣಗೊಂಡಿದ್ದ 10,000 ಕೋಟಿ ರೂ. ಮೌಲ್ಯದ 250 ಎಕರೆ ಅರಣ್ಯ ಭೂಮಿಯನ್ನು ತೆರವುಗೊಳಿಸಲಾಗಿದೆ ಎಂದು ಖಂಡ್ರೆ ಹೇಳಿದರು. ಈ ಮರಳಿ ಪಡೆದ ಪ್ರದೇಶಗಳಲ್ಲಿ ಸಾವಿರಾರು ಸಸಿಗಳನ್ನು ನೆಟ್ಟು ಅವುಗಳನ್ನು ಹಸಿರು ವಲಯಗಳಾಗಿ ಅಭಿವೃದ್ಧಿಪಡಿಸಲಾಗಿದೆ.

ಪೀಣ್ಯ ತೋಟದಲ್ಲಿ ಕೈಗಾರಿಕಾ ಉದ್ದೇಶಗಳಿಗಾಗಿ 400 ಎಕರೆ ಅರಣ್ಯ ಭೂಮಿಯನ್ನು ಈ ಹಿಂದೆ ಎಚ್‌ಎಂಟಿಗೆ ನೀಡಲಾಗಿತ್ತು ಎಂದು ಅವರು ಹೇಳಿದರು. ಇದರಲ್ಲಿ 160 ಎಕರೆಗಳನ್ನು ಎಚ್‌ಎಂಟಿ ಮಾರಾಟ ಮಾಡಿದೆ. 280 ಎಕರೆ ಅರಣ್ಯಭೂಮಿ ಇನ್ನೂ ಉಳಿದಿದ್ದು, ಅದನ್ನು ಮರಳಿ ಪಡೆದು ಬೆಂಗಳೂರಿಗೆ ಹಸಿರು ಸ್ಥಳವಾಗಿ ಸಂರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಈ ವಿಷಯವು ಪ್ರಸ್ತುತ ಸುಪ್ರೀಂ ಕೋರ್ಟ್ ಮುಂದೆ ಬಾಕಿ ಇದೆ.


ಜಾರಕಬಂಡೆ ಪ್ರದೇಶದಲ್ಲಿ ಭಾರತೀಯ ವಾಯುಪಡೆಗೆ ನೀಡಲಾದ ಭೂಮಿಯನ್ನು ಉಲ್ಲೇಖಿಸಿ, ಅವರು ಈ ಹಿಂದೆ 444 ಎಕರೆಗಳನ್ನು ನೀಡಲಾಗಿತ್ತು ಎಂದು ಹೇಳಿದರು. 1980 ರ ಅರಣ್ಯ ಕಾಯ್ದೆಯ ಪ್ರಕಾರ, ಅರಣ್ಯ ಭೂಮಿಯನ್ನು ಮಂಜೂರು ಮಾಡಲು ಸಾಧ್ಯವಿಲ್ಲ. ಆದ್ದರಿಂದ, ಆಗಿನ ಉಪ ಆಯುಕ್ತರು 2017 ರಲ್ಲಿ ಹಂಚಿಕೆಯನ್ನು ರದ್ದುಗೊಳಿಸಿದರು. ಈಗ ಭೂಮಿಯನ್ನು ಮರಳಿ ಪಡೆದು ಹಸಿರು ಪ್ರದೇಶವಾಗಿ ರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಮತ್ತಷ್ಟು ಅತಿಕ್ರಮಣವನ್ನು ತಡೆಗಟ್ಟಲು, ಮರಳಿ ಪಡೆದ ಭೂಮಿಗೆ ತಕ್ಷಣವೇ ಬೇಲಿ ಹಾಕಲಾಗುವುದು ಮತ್ತು ಅವುಗಳನ್ನು ಅರಣ್ಯ ಪ್ರದೇಶಗಳಾಗಿ ಪರಿವರ್ತಿಸಲು ಸಾವಿರಾರು ಸಸಿಗಳನ್ನು ನೆಡಲಾಗುವುದು ಎಂದು ಸಚಿವರು ಹೇಳಿದರು.

ದ್ವೈವಾರ್ಷಿಕ ಅಂತರರಾಷ್ಟ್ರೀಯ ವಾಯುಪ್ರದರ್ಶನಕ್ಕಾಗಿ ಗಂಟಿಗಾನಹಳ್ಳಿಯ ಯಲಹಂಕ ವಾಯುಪಡೆ ನಿಲ್ದಾಣದಲ್ಲಿ ಬಳಸಲಾಗುವ ಭೂಮಿಯನ್ನು ಅರಣ್ಯ ಭೂಮಿ ಎಂದು ವರ್ಗೀಕರಿಸಲಾಗಿದೆ ಎಂದು ಅವರು ಹೇಳಿದರು. ಗಂಟಿಗಾನಹಳ್ಳಿ ಗ್ರಾಮದಲ್ಲಿ 159 ಎಕರೆಗಳನ್ನು ಮೀಸಲು ಅರಣ್ಯಭೂಮಿ ಎಂದು ದಾಖಲಿಸಲಾಗಿದೆ. ವಾಯುಪಡೆಯು ಪರ್ಯಾಯ ಭೂಮಿಯನ್ನು ಒದಗಿಸದಿದ್ದರೆ, ಆ ಪ್ರದೇಶವನ್ನು ಮರಳಿ ಪಡೆಯಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು.

ಪ್ರಸ್ತುತ, ವಾಯುಪಡೆಯು ಈ ಭೂಮಿಯನ್ನು ರನ್‌ವೇ ಆಗಿ ಬಳಸುತ್ತಿದೆ. ಆದಾಗ್ಯೂ, ಭೂ ದಾಖಲೆಗಳು ಮತ್ತು ರೂಪಾಂತರವು ಅರಣ್ಯ ಇಲಾಖೆಯ ಹೆಸರಿನಲ್ಲಿಯೇ ಉಳಿದಿದ್ದು, ಯಾವುದೇ ಭೂಪರಿವರ್ತನೆ ಮಾಡಲಾಗಿಲ್ಲ. ಅರಣ್ಯ ಭೂಮಿಯನ್ನು ಮರಳಿ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಮ್ ಮತ್ತಿತರರು ಉಪಸ್ಥಿತರಿದ್ದರು.

## ನಿಕೋಬಾರ್ ದ್ವೀಪದ ವೃಕ್ಷ ರಕ್ಷಣೆ: ರಾಹುಲ್ ಗಾಂಧಿ ಹೋರಾಟಕ್ಕೆ ಖಂಡ್ರೆ ಬೆಂಬಲ



ಬೀದರ್, ಏ.29: ಅಭಿವೃದ್ಧಿಯ ಹೆಸರಲ್ಲಿ ನಿಕೋಬಾರ್ ದ್ವೀಪದ ಲಕ್ಷಾಂತರ ವೃಕ್ಷಗಳಿಗೆ ಕೊಡಲಿ ಪೆಟ್ಟು ನೀಡಲು ಮುಂದಾಗಿರುವ ಕೇಂದ್ರ ಸರ್ಕಾರದ ವಿರುದ್ಧ ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧೀ ಧ್ವನಿ ಎತ್ತಿದ್ದು, ಈ ಹೋರಾಟಕ್ಕೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರ ಉದ್ಯಮಪತಿಗಳಿಗೆ ಅನುಕೂಲ ಮಾಡಿಕೊಡಲು ಲಕ್ಷಾಂತರ ಗಿಡಗಳ ಮಾರಣ ಹೋಮ ಮಾಡಲು, ಜೀವವೈವಿಧ್ಯ ನಾಶಪಡಿಸಲು ಮುಂದಾಗಿರುವುದು ದುರ್ದೈವ. ಈ ನಿಟ್ಟಿನಲ್ಲಿ ರಾಹುಲ್ ಗಾಂಧೀ ಅವರ ಪ್ರಕೃತಿ, ಪರಿಸರದ ಕಾಳಜಿಗೆ ಬೆಂಬಲ ನೀಡುವುದಾಗಿ ಹೇಳಿದ್ದಾರೆ. ಪ್ರಸ್ತುತ ಮಾನವಕುಲ ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಕಾಲಘಟ್ಟದಲ್ಲಿದ್ದು, ಹೆಚ್ಚುತ್ತಿರುವ ಬಿಸಿ ಮತ್ತು ಋತುಮಾನಗಳ ವ್ಯತ್ಯಯದಿಂದ ನಲುಗಿ ಹೋಗಿದೆ. ಪ್ರಕೃತಿಯೂ ಉಳಿಯಬೇಕು, ಅಭಿವೃದ್ಧಿಯೂ ಆಗಬೇಕು, ಸುಸ್ಥಿರಅಭಿವೃದ್ಧಿ ಆಗಬೇಕು. ಆದರೆ, ಯಾರದೋ ಹಿತಕಾಯಲು ಪ್ರಕೃತಿ, ಜೀವವೈವಿಧ್ಯದ ಸಂಪೂರ್ಣ ನಾಶ ಸರ್ವಥಾ ಸಲ್ಲ ಎಂದು ಈಶ್ವರ ಖಂಡ್ರೆ ಹೇಳಿದ್ದಾರೆ. ನಿಕೋಬಾರ್ ದ್ವೀಪದ 160 ಚದರ ಕಿಲೋ ಮೀಟರ್ ಅರಣ್ಯದಲ್ಲಿ ಲಕ್ಷಾಂತರ ಮರ, ಗಿಡ ಕಡಿದರೆ ಅದು ಪ್ರಕೃತಿ ವಿಕೋಪಕ್ಕೆ ನಾಂದಿ ಹಾಡುತ್ತದೆ, ಜೀವವೈವಿಧ್ಯದ ನಿರ್ನಾಮ ಆಗುತ್ತದೆ, ಸ್ಥಳೀಯರ ಬದುಕೂ ದುರ್ಭರವಾಗುತ್ತದೆ. ಈ ನಿಟ್ಟಿನಲ್ಲಿ ಧ್ವನಿ ಎತ್ತಿರುವ ರಾಹುಲ್ ಗಾಂಧೀ ಅವರೊಂದಿಗೆ ದೇಶದ ಎಲ್ಲ ಪರಿಸರ ಪ್ರೇಮಿಗಳೂ ನಿಲ್ಲುತ್ತಾರೆ ಎಂಬ ವಿಶ್ವಾಸವನ್ನು ಈಶ್ವರ ಖಂಡ್ರೆ ವ್ಯಕ್ತಪಡಿಸಿದ್ದಾರೆ.

## ಯುವಪೀಳಿಗೆ, ರಾಜಕಾರಣಿಗಳಿಗೆ ಬಿಎಸ್‌ವೈ ಹೋರಾಟ ಮಾದರಿ

# ಅಭಿಮಾನೋತ್ಸವದ ಮೂಲಕ ಎಲ್ಲ ಸಮುದಾಯದ ಪರ ಧ್ವನಿ ಎತ್ತಬೇಕಿದೆ: ಬಿ.ವೈ. ವಿಜಯೇಂದ್ರ



**ಬೆಂಗಳೂರು ಏ.29:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕಳೆದ 5 ದಶಕಗಳಿಂದ ಬಡವರು, ರೈತರ, ಶೋಷಿತರು, ಪೀಡಿತರ ಪರವಾಗಿ ಹೋರಾಟ ಮಾಡಿದವರು. ಇದು ಇಂದಿನ ಯುವಪೀಳಿಗೆ ಮತ್ತು ಎಲ್ಲ ರಾಜಕಾರಣಿಗಳಿಗೆ ಮಾದರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ವಿಜಯನಗರದಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಿಎಸ್‌ವೈ ಅಭಿಮಾನೋತ್ಸವದ ಮುಖೇನ ಮತ್ತೊಮ್ಮೆ ಆ ಹೋರಾಟದ ಕಿಚ್ಚು ರಾಜ್ಯದಲ್ಲಿ ಬರಬೇಕಿದೆ. ಪ್ರಾಮಾಣಿಕವಾಗಿ ಎಲ್ಲ ಸಮುದಾಯದ ಪರವಾಗಿ ಧ್ವನಿ ಎತ್ತುವ ಕೆಲಸ ಆಗಬೇಕಿದೆ ಎಂದು ನುಡಿದರು. ಅವರು ಒಂದು ಸಮುದಾಯದ ನಾಯಕರಲ್ಲ. ನಾಡಿನ ಎಲ್ಲ ಸಮುದಾಯದವರು ಅವರನ್ನು ತಮ್ಮ ನಾಯಕರೆಂದು ಗುರುತಿಸಿದ್ದಾರೆ ಎಂದು ಹೇಳಿದರು.

ಯಡಿಯೂರಪ್ಪನವರು ಪರಿಶ್ರಮದಿಂದ ರಾಜ್ಯದಲ್ಲಿ ಸಂಘಟನೆ ಮಾಡಿದವರು. ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಅವರು ಎಲ್ಲರಿಗೂ ಪ್ರೇರಣಾಶಕ್ತಿ ಎಂದು ವಿಶ್ಲೇಷಿಸಿದರು. ಯಡಿಯೂರಪ್ಪನವರ ಹೆಸರು ಕೇಳಿದರೆ ನಮ್ಮ ಕಾರ್ಯಕರ್ತರಲ್ಲಿ ರೋಮಾಂಚನ ಆಗುತ್ತದೆ ಎಂದರು. ಅವರು ಬಿಜೆಪಿಯ ಅಗ್ರಗಣ್ಯ ನಾಯಕರು ಎಂದು ತಿಳಿಸಿದರು. ಯಡಿಯೂರಪ್ಪನವರ ಶಕ್ತಿಯನ್ನು ಬಳಸಿಕೊಂಡು ಬಿಜೆಪಿ ಸಂಘಟನೆಯನ್ನು ಬಲಪಡಿಸಲಾಗುವುದು ಎಂದು ಹೇಳಿದರು. 8ರಿಂದ 10 ಲಕ್ಷ ಜನರು ಈ ಕಾರ್ಯಕ್ರಮಕ್ಕೆ ಸೇರುವ ನಿರೀಕ್ಷೆ ಇದೆ ಎಂದು ಪ್ರಶ್ನೆಗೆ ಉತ್ತರಿಸಿದರು.

ಪಕ್ಷದಲ್ಲಿ ಯಡಿಯೂರಪ್ಪನವರಿಗೆ ಅನ್ಯಾಯ ಆಗಿಲ್ಲ ಎಂದು ಅವರು ಇನ್ನೊಂದು ಪ್ರಶ್ನೆಗೆ ಉತ್ತರ ನೀಡಿದರು. ನಮ್ಮದೊಂದು ರಾಷ್ಟ್ರೀಯ ಪಕ್ಷ. ಪಕ್ಷ ಯಾವತ್ತು ಬೇಕಾದರೂ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು ಎಂದು ಅವರು ರಾಜ್ಯಾಧ್ಯಕ್ಷ ಹುದ್ದೆ ಕುರಿತ ಪ್ರಶ್ನೆಗೆ ಉತ್ತರ ನೀಡಿದರು. ನನ್ನನ್ನು ರಾಜ್ಯಾಧ್ಯಕ್ಷನಾಗಿ ಮಾಡಿದ್ದು, ರಾಜ್ಯಾದ್ಯಂತ ಪ್ರವಾಸ ಮಾಡಿ ಸಂಘಟನೆ ಕೆಲಸ ಮಾಡುತ್ತಿದ್ದೇನೆ. ಪಕ್ಷದ ತೀರ್ಮಾನಕ್ಕೆ ನಾವು ಬದ್ಧರಾಗಿ ಇರಬೇಕಾಗುತ್ತದೆ ಎಂದು ತಿಳಿಸಿದರು. ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಅವರು ವಿಜಯನಗರ, ಕೊಪ್ಪಳ, ಬಳ್ಳಾರಿ ಜಿಲ್ಲೆಗಳ ಪದಾಧಿಕಾರಿಗಳ ಸಭೆ ನಡೆಸಿದರು. ಮಾಜಿ ಉಪ ಮುಖ್ಯಮಂತ್ರಿ ಹಾಗೂ ಸಂಸದ ಗೋವಿಂದ ಕಾರಜೋಳ, ಪ್ರಮುಖರು ಉಪಸ್ಥಿತರಿದ್ದರು.

# 2028ರ ವೇಳೆಗೆ ಕ್ವಾಂಟಮ್ ಸಿಟಿ ನಿರ್ಮಾಣದಲ್ಲಿ ಗಮನಾರ್ಹ ಪ್ರಗತಿ ಸಾಧಿಸುವ ಗುರಿ: ಸಚಿವ ಬೋಸರಾಜು

- ಹೆಸರಘಟ್ಟದಲ್ಲಿ ಉದ್ದೇಶಿತ ಯೋಜನೆಗೆ ಮಂಜೂರಾಗಿರುವ ಜಾಗ ಪರಿಶೀಲನೆ
- ಐಸಿಟಿಎಸ್ ಕ್ಯಾಂಪಸ್‌ಗೆ ಭೇಟಿ; ವಿಜ್ಞಾನಿಗಳೊಂದಿಗೆ ಸಮಾಲೋಚನೆ



**ಬೆಂಗಳೂರು, ಏ.29:** ಕರ್ನಾಟಕ ರಾಜ್ಯವನ್ನು ಕ್ವಾಂಟಮ್ ತಂತ್ರಜ್ಞಾನದ ಜಾಗತಿಕ ಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ ಸ್ಥಾಪಿಸಲಾಗುತ್ತಿರುವ ಕ್ವಾಂಟಮ್ ಸಿಟಿ (Quantum City) ನಿರ್ಮಾಣ ಕಾರ್ಯದಲ್ಲಿ 2028ರ ಒಳಗಾಗಿ ಗಮನಾರ್ಹ ಪ್ರಗತಿ ಸಾಧಿಸುವ ಗುರಿ ಹೊಂದಲಾಗಿದೆ.

ಈ ಯೋಜನೆಯು 2035ರ ವೇಳೆಗೆ ಕರ್ನಾಟಕದಲ್ಲಿ 20 ಶತಕೋಟಿ ಡಾಲರ್ ಮೊತ್ತದ ಕ್ವಾಂಟಮ್ ಆರ್ಥಿಕತೆಯನ್ನು ಸೃಷ್ಟಿಸುವ ಸರ್ಕಾರದ ದೃಷ್ಟಿಕೋನವನ್ನು ಸಾಕಾರಗೊಳಿಸಲಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು ತಿಳಿಸಿದರು.

ಹೆಸರಘಟ್ಟದ ಸಮೀಪ ಕ್ವಾಂಟಮ್ ಸಿಟಿಗಾಗಿ ಮಂಜೂರಾಗಿರುವ 6.23 ಎಕರೆ ಭೂಮಿಯನ್ನು ಬುಧವಾರ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ ನಂತರ ಅವರು ಮಾತನಾಡಿದರು.

"ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವು ಈಗಾಗಲೇ ದೇಶದಲ್ಲೇ ಮುಂಚೂಣಿಯಲ್ಲಿದೆ. ಉದ್ದೇಶಿತ ಕ್ವಾಂಟಮ್ ಸಿಟಿಯು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರಲಿದ್ದು, ಇಲ್ಲಿ ಪೈಲಟ್ ಫ್ಯಾಬ್ರಿಕೇಶನ್ ಲೈನ್ಸ್, ಕಾಮನ್ ಕಂಪ್ಯೂಟಿಂಗ್ ಮೂಲಸೌಕರ್ಯ, ಸಂಶೋಧನಾ ಪ್ರಯೋಗಾಲಯಗಳು ಹಾಗೂ ಸ್ಟಾರ್ಟ್ ಅಪ್‌ಗಳಿಗಾಗಿ ವಿಶೇಷ ಕೆಲಸದ ಸ್ಥಳ ಮತ್ತು ಇನ್ಕ್ಯುಬೇಶನ್ ಕೇಂದ್ರಗಳು ತಲೆ ಎತ್ತಲಿವೆ. ಈ ಮೂಲಕ ಸಂಶೋಧಕರಿಗೆ ಮತ್ತು ಉದ್ಯಮಿಗಳಿಗೆ ಒಂದೇ ಸೂರಿನಡಿ ಎಲ್ಲಾ ತಾಂತ್ರಿಕ ಬೆಂಬಲ ಸಿಗುವಂತೆ ಮಾಡಲಾಗುವುದು," ಎಂದು ಸಚಿವರು ವಿವರಿಸಿದರು.

ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಈ ಯೋಜನೆಯನ್ನು ಅಳವಡಿಸಿಕೊಳ್ಳುವ ಬಗ್ಗೆ ಐಐಎಸ್ಸಿ ಪ್ರೊ. ಅರಿಂಧಮ್ ಘೋಷ್ ನೇತೃತ್ವದ ಟಾಸ್ಕ್ ಫೋರ್ಸ್ ಹಾಗೂ ಇತರ ಪಾಲುದಾರರೊಂದಿಗೆ ಶೀಘ್ರವೇ ಸಮಾಲೋಚನೆ ನಡೆಸಲಾಗುವುದು. 2028 ರ ಒಳಗಾಗಿ ಈ ಕೇಂದ್ರದ ನಿರ್ಮಾಣದಲ್ಲಿ ಭೌತಿಕವಾಗಿ ದೊಡ್ಡ ಮಟ್ಟದ ಬದಲಾವಣೆ ತರುವುದು ನಮ್ಮ ಆದ್ಯತೆಯಾಗಿದೆ," ಎಂದರು.

ಭೂಮಿ ಪರಿಶೀಲನೆಯ ನಂತರ ಸಚಿವರು ಅಂತರಾಷ್ಟ್ರೀಯ ಸೈದ್ಧಾಂತಿಕ ವಿಜ್ಞಾನ ಕೇಂದ್ರದ ಕ್ಯಾಂಪಸ್‌ಗೆ ಭೇಟಿ ನೀಡಿದರು. ಅಲ್ಲಿ ಕ್ವಾಂಟಮ್ ಸಂಶೋಧನೆಯಲ್ಲಿ ತೊಡಗಿರುವ ವಿಜ್ಞಾನಿಗಳೊಂದಿಗೆ ಮಾತುಕತೆ ನಡೆಸಿ, ಭವಿಷ್ಯದ ತಾಂತ್ರಿಕ ಅಗತ್ಯಗಳ ಬಗ್ಗೆ ಮಾಹಿತಿ ಪಡೆದರು. ಈ ಕೇಂದ್ರವು ಕ್ವಾಂಟಮ್ ಸಿಟಿಯ ವೈಜ್ಞಾನಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

ಈ ಭೇಟಿಯ ಸಂದರ್ಭದಲ್ಲಿ ಕೆಸ್ಟೆಪ್ಸ್ ವ್ಯವಸ್ಥಾಪಕ ನಿರ್ದೇಶಕ ಸದಾಶಿವ ಪ್ರಭು, ಸಚಿವರ ಆಪ್ತ ಕಾರ್ಯದರ್ಶಿ ವೀರಭದ್ರ ಹಂಚಿನಾಳ್, ಐಸಿಟಿಎಸ್ ನಿರ್ದೇಶಕ ಪ್ರೊ. ರಾಜೇಶ್ ಗೋಪಕುಮಾರ್, ಐಸಿಟಿಎಸ್ ಯೋಜನಾ ಮುಖ್ಯಸ್ಥ ಪ್ರಸನ್ನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಇತರ ಹಿರಿಯ ಅಧಿಕಾರಿಗಳು ಇದ್ದರು.

# ಮಲ್ಲಿಕಾರ್ಜುನ ಖರ್ಗೆ ಸಿಎಂ ಆದರೆ ಬಹಳ ಸಂತೋಷ: ಪರಮೇಶ್ವರ್ ಅಭಿಮತ



**ಬೆಂಗಳೂರು, ಏ.29:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿಯಾದರೆ ಬಹಳ ಸಂತೋಷ. ಅವರಿಗೆ ಹೆಚ್ಚಿನ ಅನುಭವ ಇದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾವು ಈಗ ಅದರ ಬಗ್ಗೆ ಮಾತನಾಡುವುದು ಸಮಂಜಸವಲ್ಲ ಎಂದು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೇಳಿದರು.

ರಾಜ್ಯದಲ್ಲಿ ದಲಿತ ಸಿಎಂ ಆಗಬೇಕು ಎಂಬ ಕೂಗು ಎದ್ದಿದೆ. ಖರ್ಗೆ ಅವರು ಮುಖ್ಯಮಂತ್ರಿ ಆಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಖರ್ಗೆ ಸಿಎಂ ಆದರೆ ಬಹಳ ಸಂತೋಷ. ಖರ್ಗೆ ಅವರಿಗೆ ರಾಜ್ಯದ ಎಲ್ಲ ವಿಚಾರ ಗೊತ್ತಿದೆ. ಅವರು ಎಐಸಿಸಿ ಅಧ್ಯಕ್ಷರಾಗಿರುವುದು ನಮ್ಮ ಸೌಭಾಗ್ಯ. ರಾಜ್ಯ ರಾಜಕಾರಣ ಗೊತ್ತಿದೆ, ಅನುಭವ ಎಲ್ಲವೂ ಇದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕೆಲ ಸಚಿವರು ದೆಹಲಿ ಯಾತ್ರೆ ನಡೆಸಿ ನಾಯಕತ್ವ ಬದಲಾವಣೆ ವಿಚಾರದ ಬಗ್ಗೆ ಖರ್ಗೆ ಅವರ ಜತೆ ಚರ್ಚಿಸಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಡಿ.ಕೆ. ಶಿವಕುಮಾರ್ ಅವರು ಕೇಂದ್ರ ರಕ್ಷಣಾ ಸಚಿವರನ್ನು ಭೇಟಿ ಮಾಡಲು ದೆಹಲಿಗೆ ಹೋಗಿದ್ದರು ಹಾಗೆಯೇ ಸಚಿವರಾದ ಜಾರಕಿಹೊಳಿ, ಮುನಿಯಪ್ಪ ಒಳ ಮೀಸಲಾತಿ ವಿಚಾರವನ್ನು ರಾಷ್ಟ್ರೀಯ ಪರಿಶಿಷ್ಟ ಆಯೋಗಕ್ಕೆ ತಿಳಿಸಲು ಹೋಗಿದ್ದರು. ದೆಹಲಿಗೆ ಹೋದಾಗ ಹೈಕಮಾಂಡ್ ಭೇಟಿ ಮಾಡುವುದು ಸಂಪ್ರದಾಯ. ಅದರಂತೆ ಭೇಟಿಯಾಗಿದ್ದಾರೆ ಅಷ್ಟೇ ಎಂದರು. ಹುಬ್ಬಳ್ಳಿಯಲ್ಲಿ ಅಹಿಂದ ಸಮಾವೇಶ ನಡೆಸುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅಹಿಂದಾ ಚಳವಳಿ ಆರಂಭವಾಗಿದೆ. ಆ ಸಮುದಾಯ ಹಿಂದೆ ಉಳಿದಿದೆ ಎಂದು. ಶಿಕ್ಷಣ, ಉದ್ಯೋಗ ಎಲ್ಲದರಲ್ಲೂ ಹಿಂದೆ ಉಳಿದಿದ್ದಾರೆ. ಎಲ್ಲ ಕಾರ್ಯಗತವಾಗಬೇಕಾದರೆ ಸಮಾವೇಶ ಆಗಲೇಬೇಕು. ಅಹಿಂದಾದಲ್ಲಿ ದಲಿತರು ಇದ್ದಾರೆ ಎಂದು ಹೇಳಿದರು. ನಕಲಿ ಗಾಂಜಾ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯೊಬ್ಬರು ಆತ್ಮಹತ್ಯೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಮಾಹಿತಿ ಪಡೆದು ಮಾತನಾಡುತ್ತೇನೆ ಎಂದು ಹೇಳಿದರು.


## ಜನ್ಮದಿನದಂದೇ ಡಿಕೆಶಿಗೆ ಸಿಎಂ ಸ್ಥಾನ ಕೊಡುಗೆ ನಿರ್ಧಾರ ವರಿಷ್ಠರಿಗೆ ಬಿಟ್ಟದ್ದು

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅವರ ಜನ್ಮದಿನದಂದು ಮುಖ್ಯಮಂತ್ರಿ ಹುದ್ದೆಯನ್ನು ಕೊಡುಗೆಯಾಗಿ ನೀಡುವುದು ವರಿಷ್ಠರ ನಿರ್ಧಾರಕ್ಕೆ ಬಿಟ್ಟ ವಿಷಯವಾಗಿದೆ. ಹೈಕಮಾಂಡ್ ಯಾವುದೇ ತೀರ್ಮಾನ ಕೈಗೊಂಡರೂ ಬದ್ಧನಾಗಿದ್ದೇನೆ, ವರಿಷ್ಠರ ತೀರ್ಮಾನ ಗೌರವಿಸುವುದು ಕರ್ತವ್ಯ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.

ಕಲಬುರಗಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿಯೂ ವರಿಷ್ಠರು ಸೂಕ್ತ ಕ್ರಮ ಕೈಗೊಳ್ಳುತ್ತಾರೆ. ಡಿಕೆಶಿ ಜನ್ಮದಿನದ ಕೊಡುಗೆಯಾಗಿ ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಡುವ ಕುರಿತು ನನಗೇನೂ ಗೊತ್ತಿಲ್ಲ ಅದೆಲ್ಲ ವರಿಷ್ಠರು ನಿರ್ಧರಿಸುತ್ತಾರೆ. ಮುಖ್ಯಮಂತ್ರಿ ಬದಲಾವಣೆಯ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲ ಬೆಳವಣಿಗೆಗಳನ್ನು ವರಿಷ್ಠರು ಗಮನಿಸುತ್ತಿದ್ದಾರೆ. ಆದಷ್ಟು ಬೇಗ ಇದಕ್ಕೆಲ್ಲ ಉತ್ತರ ಸಿಗುತ್ತದೆ ಎಂದರು. ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ್, ಜಗದೇವ್ ಗುತ್ತೇದಾರ್, ಶಾಸಕ ಅಲ್ಲಮಪ್ರಭು ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

# 256 ಗಿಗಾವ್ಯಾಟ್ ದಾಖಲೆ ಗರಿಷ್ಠ ಮಟ್ಟ ತಲುಪಿದ ವಿದ್ಯುತ್ ಬೇಡಿಕೆ 1/3 ಭಾಗದಷ್ಟು ನವೀಕರಿಸಬಹುದಾದ ಮೂಲಗಳಿಂದ ಪೂರೈಕೆ

* ದೆಹಲಿಯಲ್ಲಿ ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಮಾಹಿತಿ
* ಏಪ್ರಿಲ್ 25ಕ್ಕೆ ದೇಶದಲ್ಲಿ ಗರಿಷ್ಠ ವಿದ್ಯುತ್ ಬೇಡಿಕೆ 256.11 ಉಫ ದಾಖಲೆಯ ಮಟ್ಟ ತಲುಪಿದೆ



ನವದೆಹಲಿ: ಪ್ರಸ್ತುತದಲ್ಲಿ ದೇಶದ ವಿದ್ಯುತ್ ಬೇಡಿಕೆ ದಾಖಲೆಯ ಗರಿಷ್ಠ ಮಟ್ಟ 256.11 GW ತಲುಪಿದ್ದು, ಇದರ ಮೂರನೇ ಒಂದು ಭಾಗದಷ್ಟು ನವೀಕರಿಸಬಹುದಾದ ಇಂಧನ ಮೂಲಗಳಿಂದ ಪೂರೈಸಲಾಗುತ್ತಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ದೆಹಲಿಯಲ್ಲಿ ಬುಧವಾರ ನಡೆದ ಕಾರ್ಯಕ್ರಮವೊಂದರಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಸಚಿವರು, ಏಪ್ರಿಲ್ 25ಕ್ಕೆ ಭಾರತದ ವಿದ್ಯುತ್ ಬೇಡಿಕೆ ಸಾರ್ವಕಾಲಿಕ ದಾಖಲೆಯ ಅತ್ಯಧಿಕ ಮಟ್ಟ ತಲುಪಿದೆ ಎಂದರು.

ಪ್ರಸ್ತುತ ವಿದ್ಯುತ್ ಬೇಡಿಕೆ 256.11 GW ಇದ್ದರೆ, ಸುಮಾರು ಅದರ ಮೂರನೇ ಒಂದು ಭಾಗದಷ್ಟು ನವೀಕರಿಸಬಹುದಾದ ಇಂಧನ ಮೂಲಗಳಿಂದ ಪೂರೈಸಲಾಗಿದೆ. ಇದು ಆತ್ಮನಿರ್ಭರ ಭಾರತದ ಪಾಲಿಗೆ ಹೆಮ್ಮೆಯ ಸಂಗತಿ ಎಂದರು.

ಏಪ್ರಿಲ್ 25ರ ಶನಿವಾರ ಸೌರ, ಪವನ ಮತ್ತು ಜಲವಿದ್ಯುತ್ ಸೇರಿದಂತೆ ನವೀಕರಿಸಬಹುದಾದ ಇಂಧನ ಮೂಲದಿಂದ ಗರಿಷ್ಠ ವಿದ್ಯುತ್ ಅಗತ್ಯವನ್ನು ಯಶಸ್ವಿಯಾಗಿ ಪೂರೈಸಿದೆ ಎಂದರು.

**ನೆರೆ ರಾಷ್ಟ್ರಗಳಿಗೂ ರಫ್ತು:** ಭಾರತ ಏಪ್ರಿಲ್ 25ರಂದು ಮಧ್ಯಾಹ್ನ 3:38ಕ್ಕೆ 256.1 ಉಫ ನಷ್ಟು ಗರಿಷ್ಠ ವಿದ್ಯುತ್ ಬೇಡಿಕೆಯನ್ನು ನಿರಾಯಾಸವಾಗಿ ಪೂರೈಸಿತು. ಅಲ್ಲದೆ, ಅದೇ ವೇಳೆ ನೆರೆಯ ರಾಷ್ಟ್ರಗಳಿಗೂ ವಿದ್ಯುತ್ ರಫ್ತು ಮುಂದುವರಿಸಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದ್ದಾರೆ.

**"ವಿದ್ಯುತ್ ಬೇಡಿಕೆಗೆ ತಕ್ಕಂತೆ ವಿವಿಧ ಮೂಲಗಳಿಂದ ಕೊಡುಗೆ:** ದೇಶದಲ್ಲಿ ಪ್ರಸ್ತುತವಾಗಿ ಗರಿಷ್ಠ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ವಿವಿಧ ಮೂಲಗಳಿಂದ ವಿದ್ಯುತ್ ಉತ್ಪಾದನಾ ಕೊಡುಗೆ ನಿಜಕ್ಕೂ ಗಮನಾರ್ಹವಾಗಿದೆ ಎಂದು ಹೇಳಿದರು.

ಸೌರಶಕ್ತಿಯಿಂದ ಶೇ.21.5ರಷ್ಟು, ಜಲ ವಿದ್ಯುತ್ ಶೇ.4.4, ಪವನಶಕ್ತಿ ಶೇ.1.9, ಪರಮಾಣು ಮೂಲದಿಂದ ಶೇ.2.4, ಅನಿಲದಿಂದ ಶೇ.2 ಮತ್ತು ಉಷ್ಣ ವಿದ್ಯುತ್ ನಿಂದ ಶೇ.66.9ರಷ್ಟು ವಿದ್ಯುತ್ ಒದಗಿಸಲಾಗಿದೆ ಎಂದು ಅಂಕಿ ಅಂಶ ಸಹಿತ ವಿವರಿಸಿದರು.

ವಿಶೇಷವಾಗಿ ಸೌರಶಕ್ತಿಯ ಬಲವಾದ ಕಾರ್ಯಕ್ಷಮತೆಯು ಗ್ರಿಡ್ ಸ್ಥಿರತೆ ಮತ್ತು ವಿಶ್ವಾಸಾರ್ಹತೆಯನ್ನು ಖಚಿತಪಡಿಸುತ್ತದೆ. ಇದು ಆತ್ಮನಿರ್ಭರ ಭಾರತದಲ್ಲಿ ಶುದ್ಧ ಇಂಧನದಿಂದ ಗರಿಷ್ಠ ಬೇಡಿಕೆ ಪೂರೈಸುತ್ತಿರುವುದಕ್ಕೆ ಸ್ಪಷ್ಟ ಪ್ರದರ್ಶನ ಎಂದು ಪ್ರತಿಪಾದಿಸಿದರು.

**ಭವಿಷ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಳ:** ಮುಂಬರುವ ದಿನಗಳಲ್ಲಿ ಭಾರತದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಮತ್ತಷ್ಟು ಹೆಚ್ಚಾಗುವ ವಿಶ್ವಾಸವಿದೆ. ವಿದ್ಯುತ್ ಮೂಲಸೌಕರ್ಯವನ್ನು ಬಲಪಡಿಸಲು ಗ್ರಿಡ್ ಆಧುನೀಕರಣ, ಡಿಜಿಟಲೀಕರಣ ಮತ್ತು AI ಮತ್ತು ಡಿಜಿಟಲ್ ವ್ಯವಸ್ಥೆ ಮೇಲೆ ಸರ್ಕಾರ ಗಮನ ಹರಿಸಿದೆ ಎಂದು ಹೇಳಿದರು.

ನವೀಕರಿಸಬಹುದಾದ ಇಂಧನದ ಪಾಲನ್ನು ಹೆಚ್ಚಿಸಲು, ಉತ್ಪಾದನೆ ಸುಧಾರಿಸಲು ಮತ್ತು ಪ್ರಸರಣವನ್ನು ಹೆಚ್ಚಿಸಲು ಮತ್ತಷ್ಟು ಪ್ರಯತ್ನ ಮಾಡಲಾಗುತ್ತಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಹೇಳಿದರು.



ತುಮಕೂರಿನಿಂದ ದೆಹಲಿಗೆ ಆಗಮಿಸಿದ ಪ್ರವಾಸಿಗರು ಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿದ್ದರು.

# 3ನೇ ಚಾರ್ಲ್ಸ್ ಡೊನಾಲ್ಡ್ ಟ್ರಂಪ್ ಸೋದರ ಸಂಬಂಧಿ: ಡೈಲಿ ಮೇಲ್ ಅಧ್ಯಯನ ವರದಿ

**ವಾಷಿಂಗ್ಟನ್, ಏ.29:** ಬ್ರಿಟನ್ ರಾಜ ಮೂರನೇ ಚಾರ್ಲ್ಸ್ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪರಸ್ಪರ ದೂರದ ಸೋದರ ಸಂಬಂಧಿಗಳು ಎಂಬ ಮಾಹಿತಿ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚಿನ ಚರ್ಚೆಗೆ ಕಾರಣವಾಗಿದೆ.

ಈ ಕುರಿತು 'ದಿ ಡೈಲಿ ಮೇಲ್' ಅಧ್ಯಯನ ವರದಿ ಪ್ರಕಟಿಸಿದೆ. ವರದಿಯ ಪ್ರಕಾರ ಟ್ರಂಪ್ ಹಾಗೂ ಚಾರ್ಲ್ಸ್ ಬ್ರಿಟನ್‌ನ ಹಳೆಯ ರಾಜಮನೆತನದ ಕೊಂಡಿಯನ್ನು ಹೊಂದಿದ್ದಾರೆ ಎನ್ನಲಾಗಿದೆ. ಟ್ರಂಪ್ ಹಾಗೂ ಚಾರ್ಲ್ಸ್ ವಂಶಾವಳಿಯ ವಿವರಗಳನ್ನು ಡೈಲಿ ಮೇಲ್ ಹಂಚಿಕೊಂಡಿದೆ.

ಡೊನಾಲ್ಡ್ ಟ್ರಂಪ್ ಅವರ ತಾಯಿ ಮೇರಿ ಆನ್ ಮ್ಯಾಕ್ಲಿಯೋಡ್, ಸ್ಕಾಟೆಂಡ್ ಮೂಲದವರು. ಈ ಸ್ಕಾಟಿಷ್ ಕೊಂಡಿಯೇ ಅವರನ್ನು ಬ್ರಿಟಿಷ್ ರಾಜಮನೆತನದೊಂದಿಗೆ ಸಂಪರ್ಕಿಸುತ್ತದೆ. ಇದಕ್ಕೆ ಪ್ರತಿಕ್ರಿಯಿಸಿರುವ ಟ್ರಂಪ್, 'ವಾಹ್, ಈ ವಿಚಾರ ಅತ್ಯುತ್ತಮ. ನಾನು ಯಾವಾಗಲೂ ಬಂಕಿಂಗ್‌ಹ್ಯಾಮ್ ಅರಮನೆಯಲ್ಲಿ ವಾಸಿಸಲು ಬಯಸುತ್ತೇನೆ. ಇನ್ನು ಕೆಲವೇ ಹೊತ್ತಿನಲ್ಲಿ ರಾಜ ಮತ್ತು ರಾಣಿಯೊಂದಿಗೆ ಈ ಕುರಿತು ಮಾತನಾಡಲಿದ್ದೇನೆ' ಎಂದಿದ್ದಾರೆ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಏಪ್ರಿಲ್ 30, 2026, ಗುರುವಾರ

## ಒಳಪುಟಗಳಲ್ಲಿ

ರಾಹುಲ್‌ಗಾಂಧಿ ವಿರುದ್ಧ ದ್ವಿಪೌರತ್ವ ಅರ್ಜಿ ಹಾಕಿದ್ದ ವಿಘ್ನೇಶ್ ಶಿಶಿರ್ ಮೇಲಿದೆ 13 ಕೋಟಿ ರೂ. ವಂಚನೆ ಆರೋಪ! - ಪು.4

ಸಿಇಟಿ: ವಿಶೇಷ ವರ್ಗಗಳ ದಾಖಲೆ ಸಲ್ಲಿಸಲು ಮೇ.5 ರಿಂದ ಅವಕಾಶ - ಪು.5

ಪಡಿತರ ಹಳೆಯ ಕಾರ್ಡಿಗೆ ಅಸ್ತು, ಹೊಸದಕ್ಕೆ ಸುಸ್ತೋ ಸುಸ್ತು! - ಪು.6

# ಬೆಂಗಳೂರಿನಲ್ಲಿ ಭಾರಿ ಮಳೆ: ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿತ– 7 ಮಂದಿ ಸಾವು!

## ಸ್ಥಳಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿ ಪರಿಶೀಲನೆ, ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ಘೋಷಣೆ

**ಬೆಂಗಳೂರು, ಏ.29: ನಗರದಲ್ಲಿ ಬುಧವಾರ ಸಂಜೆ ಸುರಿದ ಬಿರುಗಾಳಿ ಸಹಿತ ಧಾರಾಕಾರ ಮಳೆಗೆ ಶಿವಾಜಿನಗರದ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದ ಪರಿಣಾಮ 2 ಮಕ್ಕಳು ಸೇರಿ 7 ಮಂದಿ ಮೃತಪಟ್ಟಿದ್ದಾರೆ.**





ನಗರದ ಹಲವೆಡೆ ಆಲಿಕಲ್ಲು ಸಹಿತ ಮಳೆಯಾಗಿದೆ. ಶಿವಾಜಿನಗರದಲ್ಲಿ ಸುರಿದ ಭಾರೀ ಮಹಿಳೆಯಿಂದಾಗಿ ಬೌರಿಂಗ್ ಆಸ್ಪತ್ರೆ ಕಾಂಪೌಂಡ್‌ಗೆ ಹೊಂದಿಕೊಂಡಂತೆ ವ್ಯಾಪಾರ ಮಾಡುತ್ತಿದ್ದವರು ಸೇರಿ ಹಲವರು ಮೃತಪಟ್ಟಿದ್ದಾರೆ. ಇಬ್ಬರು ಮಕ್ಕಳು ಸೇರಿ ಏಳು ಜನ ಸಾವನ್ನಪ್ಪಿದ್ದು ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಘಟನೆಯಲ್ಲಿ 7 ಮಂದಿ ಗಾಯಗೊಂಡಿದ್ದು ಅವರಿಗೆ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಪೊಲೀಸರು ಮತ್ತು ತುರ್ತು ಸೇವಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಜೆಸಿಬಿ ಸಹಾಯದೊಂದಿಗೆ ಮೃತದೇಹಗಳನ್ನು ಮತ್ತು ಗಾಯಾಳುಗಳನ್ನು ಅವಶೇಷಗಳಿಂದ ಹೊರತೆಗೆಯಲಾಗಿದೆ.

ಘಟನಾ ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿ ಪರಿಶೀಲನೆ ನಡೆಸಿದರು. ನಂತರ ಆಸ್ಪತ್ರೆಗೆ ತೆರಳಿ ಗಾಯಾಳುಗಳ ಆರೋಗ್ಯ ವಿಚಾರಿಸಿದ ಸಿದ್ದರಾಮಯ್ಯ ಮೃತರ ಕುಟುಂಬಕ್ಕೆ ತಲಾ 5 ಲಕ್ಷ ಪರಿಹಾರ ಘೋಷಿಸಿದರು. ಗಾಯಾಳುಗಳಿಗೆ ಉಚಿತ ಚಿಕಿತ್ಸೆ ನೀಡುವಂತೆ ಸೂಚನೆ ನೀಡಿದರು.

### ಅಧಿಕಾರಿಗಳಿಗೆ ಸಿಎಂ ತರಾಟೆ, ತನಿಖೆಗೆ ಆದೇಶ

ಶಿವಾಜಿನಗರದ ಬೌರಿಂಗ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದ ಸಿಎಂ ಸಿದ್ದರಾಮಯ್ಯ ಘಟನೆಯ ಸಂಪೂರ್ಣ ಮಾಹಿತಿ ಪಡೆದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿದರು.

ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು 7 ಮಂದಿ ಮೃತಪಟ್ಟಿದ್ದು, ಘಟನೆ ಬಗ್ಗೆ ಆಕ್ರೋಶಗೊಂಡ ಸಿಎಂ ಸ್ಥಳದಲ್ಲೇ ತನಿಖೆ ಮಾಡಲು ಆದೇಶ ನೀಡಿದರು.

ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡ ಸಿದ್ದರಾಮಯ್ಯ, "ಏನ್ ಕ್ರಮ ಕೈಗೊಂಡಿದ್ದೀರಿ, ಹಳೆ ಗೋಡೆ ನೋಡೋಕಾಗಲ್ವಾ..., ನಿಮ್ಮ ಮಧ್ಯೆ ಸಮನ್ವಯ ಇರಲ್ವಾ, ಎಚ್ಚರ ವಹಿಸಿದ್ದರೆ ಈ ಅನಾಹುತ ತಪ್ಪಿಸಬಹುದಿತ್ತು ಎಂದು ಗರಂ ಆದರು.

### ಮೃತರಿಗೆ ಮಾಜಿ ಪ್ರಧಾನಿ ಸಂತಾಪ

ಬೆಂಗಳೂರಿನಲ್ಲಿ ಮಳೆ ಅನಾಹುತದಿಂದ ಬೋರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು 7 ಮಂದಿ ಮೃತಪಟ್ಟಿರುವ ದುರದೃಷ್ಟಕರ ಘಟನೆ ಅತ್ಯಂತ ನೋವು ತಂದಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಈ ಘಟನೆ ದುಃಖ ತಂದಿದೆ. ಭಗವಂತ ಮೃತರ ಆತ್ಮಕ್ಕೆ ಶಾಂತಿ ನೀಡಲಿ, ಅವರ ಕುಟುಂಬ ವರ್ಗದವರಿಗೆ ನೋವು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದಿರುವ ಅವರು, ಸಾರ್ವಜನಿಕರು ದಯವಿಟ್ಟು ಗಾಳಿ, ಮಳೆ, ಗುಡುಗು, ಸಿಡಿಲಿನಂತಹ ಸಂದರ್ಭಗಳಲ್ಲಿ ಎಚ್ಚರದಿಂದ ಇರಬೇಕು. ಪ್ರತಿಯೊಂದು ಜೀವವೂ ಅಮೂಲ್ಯ. ನಿಮ್ಮ ಪ್ರೀತಿಪಾತ್ರರೂ ನಿಮಗಾಗಿ ಕಾದಿರುತ್ತಾರೆ ಎಂಬುದನ್ನು ಮರೆಯಬೇಡಿ ಎಂದು ಕಿವಿಮಾತು ಹೇಳಿದ್ದಾರೆ. ಇನ್ನು ಕೆಲವು ದಿನಗಳಲ್ಲಿ ಮಳೆಗಾಲ ಶುರುವಾಗಲಿದೆ. ರಾಜ್ಯ ಸರ್ಕಾರವು ಸಹ ಮಳೆ ಅನಾಹುತ ತಡೆಯಲು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮನವಿ ಮಾಡುತ್ತೇನೆ ಎಂದಿದ್ದಾರೆ.

## ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣ: ನ್ಯಾಯಯುತ ತನಿಖೆಗೆ ಸಚಿವ ಪ್ರಲ್ಹಾದ ಜೋಶಿ ಸೂಚನೆ



**ತಪ್ಪಿತಸ್ಥ ಪೊಲೀಸ್ ಸಿಬ್ಬಂದಿ ಅಮಾನತಿಗೆ ಕೇಂದ್ರ ಸಚಿವರ ಆಗ್ರಹ**

**ನವದೆಹಲಿ, ಏ.29:** ಧಾರವಾಡ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣದಲ್ಲಿ ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ಹೋರಾಟ ನಡೆಸುವುದಾಗಿ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಎಚ್ಚರಿಸಿದ್ದಾರೆ.

ಧಾರವಾಡಕ್ಕೆ ಓದಲು ಬಂದಿದ್ದ ಬಾಗಲಕೋಟೆ ಮೂಲದ ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಅತ್ಯಂತ ನೋವಿನ ಸಂಗತಿ ಎಂದು ತೀವ್ರ ಬೇಸರ ವ್ಯಕ್ತಪಡಿಸಿರುವ ಸಚಿವರು, ಅಮಾಯಕ ವಿದ್ಯಾರ್ಥಿಯನ್ನು ಈ ಪ್ರಕರಣದಲ್ಲಿ ಸಿಲುಕಿಸುವ ಪ್ರಯತ್ನ ನಡೆದಿದೆ ಎಂದು ಆರೋಪಿಸಿದ್ದಾರೆ. ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣದ ಬಗ್ಗೆ ಶೀಘ್ರವೇ ನ್ಯಾಯಯುತ ತನಿಖೆ ನಡೆಸುವಂತೆ ಹಾಗೂ ಪ್ರಕರಣದಲ್ಲಿ ಭಾಗಿಯಾದ ತಪ್ಪಿತಸ್ಥ ಪೊಲೀಸ್ ಇನ್ಸಪೆಕ್ಟರ್ ಮತ್ತು ಸಿಬ್ಬಂದಿಯನ್ನು ಕೂಡಲೇ ಅಮಾನತುಗೊಳಿಸಿ, ಕಠಿಣ ಕ್ರಮ ಕೈಗೊಳ್ಳಬೇಕೆಂದು ಪೊಲೀಸ್ ಆಯುಕ್ತರಿಗೆ ದೂರವಾಣಿ ಕರೆ ಮಾಡಿ ಸೂಚನೆ ನೀಡಿದ್ದಾರೆ. ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ತೀವ್ರ ಹದಗೆಟ್ಟಿದ್ದು, ರಾಜ್ಯ ಸರ್ಕಾರ ಇಡೀ ಪ್ರಕರಣದ ನೈತಿಕ ಹೊಣೆ ಹೊರಬೇಕು ಮತ್ತು ಮೃತ ವಿದ್ಯಾರ್ಥಿಯ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದ್ದಾರೆ.

# ಎಕ್ಸ್‌ಪ್ರೆಸ್‌ವೇ ಉತ್ತರಪ್ರದೇಶದ ಅಭಿವೃದ್ಧಿಯ ಹೊಸ ಜೀವನಾಡಿ: ಪ್ರಧಾನಿ ನರೇಂದ್ರ ಮೋದಿ

## ಗಂಗಾ ಎಕ್ಸ್‌ಪ್ರೆಸ್‌ವೇ ಉದ್ಘಾಟನೆ, 36,230 ಕೋಟಿ ವೆಚ್ಚದಲ್ಲಿ ನಿರ್ಮಾಣ | 12 ಜಿಲ್ಲೆ 36 ನಗರಗಳ ಸಂಪರ್ಕ

**ಲಖನೌ, ಏ.29: ಸಾವಿರಾರು ವರ್ಷಗಳಿಂದ ಗಂಗಾಮಾತೆ ಉತ್ತರ ಪ್ರದೇಶ ಮತ್ತು ಈ ದೇಶದ ಜೀವನಾಡಿಯಾಗಿದ್ದಂತೆ, ಆಧುನಿಕ ಪ್ರಗತಿಯ ಈ ಯುಗದಲ್ಲಿ, ಆಕೆಯ ಬಳಿ ಹಾದುಹೋಗುವ ಈ ಎಕ್ಸ್‌ಪ್ರೆಸ್‌ವೇ ರಾಜ್ಯದ ಅಭಿವೃದ್ಧಿಯ ಹೊಸ ಜೀವನಾಡಿಯಾಗಲಿದೆ, ಇದಕ್ಕೆ ಗಂಗಾ ಹೆಸರಿಟ್ಟಿರುವುದು ಸಂತೋಷ ತಂದಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದರು.**




ಉತ್ತರ ಪ್ರದೇಶದ ಆರನೇ ಎಕ್ಸ್‌ಪ್ರೆಸ್‌ವೇ ಗಂಗಾ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ಬುಧವಾರ ಉದ್ಘಾಟಿಸಿ ಮಾತನಾಡಿದ ಅವರು, ಉತ್ತರ ಪ್ರದೇಶಕ್ಕೆ ಎಕ್ಸ್‌ಪ್ರೆಸ್‌ವೇ ಕಲ್ಪಿಸುವ ವರದಾನವು ಗಂಗಾ ಮಾತೆಯ ಆಶೀರ್ವಾದ ಎಂದು ನಾನು ನಂಬುತ್ತೇನೆ. ಈಗ ನೀವು ಕೆಲವೇ ಗಂಟೆಗಳಲ್ಲಿ ಸಂಗಮವನ್ನು ತಲುಪಬಹುದು ಮತ್ತು ಕಾಶಿಯಲ್ಲಿ ಬಾಬಾ ಅವರನ್ನು ಭೇಟಿ ಮಾಡಿ ಹಿಂತಿರುಗಬಹುದು ಎಂದು ಹೇಳಿದರು.

ಒಂದುಕಾಲದಲ್ಲಿ ಹಿಂದುಳಿದ ಮತ್ತು ರೋಗಪೀಡಿತ ರಾಜ್ಯ ಎಂದು ಕರೆಯಲ್ಪಡುತ್ತಿದ್ದ ಉತ್ತರ ಪ್ರದೇಶ, ಇಂದು ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವತ್ತ ಸಾಗುತ್ತಿದೆ. ಉತ್ತರ ಪ್ರದೇಶವು ಅಗಾಧ ಸಾಮರ್ಥ್ಯವನ್ನು ಹೊಂದಿದ್ದು, ದೇಶದಲ್ಲಿ ಅತಿಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿದೆ. ಉತ್ತರ ಪ್ರದೇಶವನ್ನು ಉತ್ಪಾದನಾ ಕೇಂದ್ರವನ್ನಾಗಿ ಮಾಡಲು ಈ ಶಕ್ತಿಯನ್ನು ಬಳಸಿಕೊಳ್ಳುತ್ತಿದ್ದೇವೆ ಎಂದರು.

### ಎಕ್ಸ್‌ಪ್ರೆಸ್‌ವೇ ವಿಶೇಷ

36,230 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಗಂಗಾ ಎಕ್ಸ್‌ಪ್ರೆಸ್‌ವೇ, ಮೀರತ್ ಮತ್ತು ಪ್ರಯಾಗ್‌ರಾಜ್ ನಡುವಿನ ಪ್ರಯಾಣವನ್ನು ಸುಗಮಗೊಳಿಸುತ್ತದೆ, ಎರಡು ನಗರಗಳ ನಡುವಿನ ಪ್ರಯಾಣದ ಸಮಯವನ್ನು ಪ್ರಸ್ತುತ 10–12 ಗಂಟೆಗಳಿಂದ 6 ಗಂಟೆಗಳವರೆಗೆ ಕಡಿಮೆ ಮಾಡುತ್ತದೆ. ಮೀರತ್, ಬುಲಂದ್‌ಶಹರ್, ಹಾಪುರ್, ಅಮ್ರೋಹಾ, ಸಂಭಾಲ್, ಬದೌನ್, ಶಹಜಹಾನ್‌ಪುರ, ಹಾರ್ದೋಯ್, ಉನ್ನಾವ್, ರಾಯ್‌ಬರೇಲಿ, ಪ್ರತಾಪ್‌ಗಢ ಮತ್ತು ಪ್ರಯಾಗ್‌ರಾಜ್ – ಆ ಮೂಲಕ ಉತ್ತರ ಪ್ರದೇಶದ ಪಶ್ಚಿಮ, ಮಧ್ಯ ಮತ್ತು ಪೂರ್ವ ಪ್ರದೇಶಗಳನ್ನು ಒಂದೇ ತಡೆರಹಿತ ಹೈಸ್ಪೀಡ್ ಕಾರಿಡಾರ್ ಮೂಲಕ ಒಟ್ಟು 12 ಜಿಲ್ಲೆಗಳನ್ನು ಸಂಪರ್ಕಿಸುತ್ತದೆ. ಶಹಜಹಾನ್‌ಪುರದ ಜಲಾಲಾಬಾದ್‌ನಲ್ಲಿ ಎಕ್ಸ್‌ಪ್ರೆಸ್‌ವೇಯಲ್ಲಿ 3.5 ಕಿಮೀ ಉದ್ದದ ತುರ್ತು ವಾಯುನೆಲೆಯನ್ನು ನಿರ್ಮಿಸಲಾಗಿದೆ. ಇದು ದೇಶದಲ್ಲಿ ಮೊದಲ ಬಾರಿಗೆ ನಿರ್ಮಿಸಲಾದ ವಾಯುನೆಲೆಯಾಗಿದ್ದು, ಇಲ್ಲಿ ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳು ಹಗಲು ಮತ್ತು ರಾತ್ರಿ ಎರಡೂ ಸಮಯದಲ್ಲಿ ಸುರಕ್ಷಿತವಾಗಿ ಇಳಿಯಬಹುದು ಮತ್ತು ಮೇಲಕ್ಕೆ ಹಾರಬಹುದು. ಕಳೆದ ವರ್ಷ, ಈ ವಾಯುನೆಲೆಯಲ್ಲಿ ರಫೇಲ್, ಸುಖೋಯ್ 30–ಎಂಕೆಐ, ಮಿರಾಜ್ –2000, ಎಎನ್ –32 ಮತ್ತು ಎಂಐ –17 ವಿ 5 ಹೆಲಿಕಾಪ್ಟರ್‌ಗಳ ಲ್ಯಾಂಡಿಂಗ್ ಮತ್ತು ಟೇಕ್ ಆಫ್ ಅನ್ನು ಪರೀಕ್ಷಿಸಲಾಯಿತು.

ಗಂಗಾ ಕೈಗಾರಿಕಾ ಕಾರಿಡಾರ್ ಅನ್ನು ಎಕ್ಸ್‌ಪ್ರೆಸ್‌ವೇಯ ಎರಡೂ ಬದಿಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ, ಮೀರತ್, ಬದೌನ್, ಕಾನ್ಪುರ್, ವಾರಾಣಸಿ ಮತ್ತು ಪ್ರಯಾಗ್‌ರಾಜ್ ಸುತ್ತಲೂ ಫಾರ್ಮಾ ಪಾರ್ಕ್‌ಗಳು, ಜವಳಿ ಪಾರ್ಕ್‌ಗಳು ಮತ್ತು ಐಟಿ ಪಾರ್ಕ್‌ಗಳನ್ನು ಸ್ಥಾಪಿಸಲು ಸರ್ಕಾರ ಯೋಜಿಸಿದೆ. ಈ ಮೂಲಕ ಕೈಗಾರಿಗೆ, ಐಟಿ, ಫಾರ್ಮಾ ಮತ್ತು ಕೃಷಿಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಉದ್ದೇಶ ಹೊಂದಿದೆ.

### ಸ್ವಜನ ಪಕ್ಷಪಾತ, ಜಾತಿವಾದದಿಂದ ಹೊರಬರಲು ಎಸ್‌ಪಿಗೆ ಸಾಧ್ಯವಿಲ್ಲ

ಕಾಂಗ್ರೆಸ್ ಮತ್ತು ಎಸ್‌ಪಿಯ ಮಹಿಳಾ ವಿರೋಧಿ ಬದಿಯನ್ನು ಕಂಡಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಕೇಂದ್ರದಲ್ಲಿರುವ ಎನ್‌ಡಿಎ ಸರ್ಕಾರ ನಾರಿ ಶಕ್ತಿ ವಂದನ ತಿದ್ದುಪಡಿಯನ್ನು ಪರಿಚಯಿಸಿತು. ಈ ತಿದ್ದುಪಡಿ ಅಂಗೀಕಾರವಾಗಿದ್ದರೆ, 2029 ರ ಚುನಾವಣೆಗಳಿಂದ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಮಹಿಳೆಯರು ಮೀಸಲಾತಿ ಪಡೆಯುತ್ತಿದ್ದರು. ಬೇರೆ ಯಾವುದೇ ವರ್ಗಕ್ಕೆ ಸ್ಥಾನಗಳಲ್ಲಿ ಯಾವುದೇ ಕಡಿತವಿಲ್ಲದೆ ಲಕ್ನೋ ಮತ್ತು ದೆಹಲಿಗೆ ಹೆಚ್ಚಿನ ಸಂಖ್ಯೆಯ ಮಹಿಳೆಯರು ಆಯ್ಕೆಯಾಗುತ್ತಿದ್ದರು. ಆದರೆ ಎಸ್‌ಪಿ ಈ ತಿದ್ದುಪಡಿಯ ವಿರುದ್ಧ ಮತ ಚಲಾಯಿಸಿತು. ಸಮಾಜವಾದಿ ಪಕ್ಷ (ಎಸ್‌ಪಿ) ಎಂದಿಗೂ ಸ್ವಜನಪಕ್ಷಪಾತ ಮತ್ತು ಜಾತಿವಾದವನ್ನು ಮೀರಿ ಮೇಲೇರಲು ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

### ಐದು ರಾಜ್ಯಗಳಲ್ಲಿ ಎನ್‌ಡಿಎ ಗೆಲುವು

ಕೆಲವು ಸಮಯದ ಹಿಂದೆ, ಬಿಹಾರದಲ್ಲಿ ಚುನಾವಣೆಗಳು ನಡೆದಾಗ, ಬಿಜೆಪಿ–ಎನ್‌ಡಿಎ ಭರ್ಜರಿ ಗೆಲುವು ಸಾಧಿಸಿ ಇತಿಹಾಸ ಸೃಷ್ಟಿಸಿತ್ತು, ನಿನ್ನೆಯಷ್ಟೇ, ಗುಜರಾತ್‌ನಲ್ಲಿನ ಪುರಸಭೆಗಳು, ಪುರಸಭೆ ಮಂಡಳಿಗಳು, ಜಿಲ್ಲಾ ಪಂಚಾಯತ್‌ಗಳು, ನಗರ ಪಂಚಾಯತ್‌ಗಳು, ತಹಸಿಲ್ ಪಂಚಾಯತ್‌ಗಳ ಚುನಾವಣೆಯ ಫಲಿತಾಂಶಗಳು ಬಂದಿವೆ. ಬಿಜೆಪಿ ಶೇ. 80 ರಿಂದ 85 ರಷ್ಟು ಪುರಸಭೆಗಳು ಮತ್ತು ಪಂಚಾಯತ್‌ಗಳನ್ನು ಗೆದ್ದಿದೆ. ಈ ಐದು ರಾಜ್ಯಗಳ ಚುನಾವಣೆಯಲ್ಲೂ ಬಿಜೆಪಿ ಐತಿಹಾಸಿಕ ಗೆಲುವಿನ ಹ್ಯಾಟ್ರಿಕ್ ಗಳಿಸಲಿದೆ ಎಂದು ನನಗೆ ವಿಶ್ವಾಸವಿದೆ. ಮೇ 4 ರ ಫಲಿತಾಂಶಗಳು ಅಭಿವೃದ್ಧಿ ಹೊಂದಿದ ಭಾರತದ ಸಂಕಲ್ಪವನ್ನು ಬಲಪಡಿಸುತ್ತವೆ. ಅವು ದೇಶದ ಅಭಿವೃದ್ಧಿಗೆ ಹೊಸಶಕ್ತಿಯನ್ನು ತುಂಬುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ಪಶ್ಚಿಮ ಬಂಗಾಳ ಚುನಾವಣೆ: 2ನೇ ಹಂತದಲ್ಲಿ ದಾಖಲೆ ಶೇ. 93 ಮತದಾನ

## 142 ಕ್ಷೇತ್ರಗಳಿಗೆ ನಡೆದ ಚುನಾವಣೆ: ಚುನಾವಣಾ ಆಯೋಗ ಮಾಹಿತಿ



ಪಶ್ಚಿಮ ಬಂಗಾಳದ ಡಮ್ ಡಮ್ ವಿಧಾನಸಭಾ ಕ್ಷೇತ್ರದ ಪಂಡಿತ್ ಮೋತಿಲಾಲ್ ಬಾಲಕಿಯರ ಸಂಸ್ಥೆಯ ಮತಗಟ್ಟೆಗಳಲ್ಲಿ, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ 2ನೇ ಹಂತದ ಮತದಾನ ಕೇಂದ್ರದಲ್ಲಿ ಸರತಿ ಸಾಲಿನಲ್ಲಿ ಮತ ಚಲಾಯಿಸಿದ ಮತದಾರರು.

ಕೋಲ್ಕತ್ತಾ, ಏ.29: ಪಶ್ಚಿಮ ಬಂಗಾಳ ವಿಧಾನಸಭೆಯ 142 ಕ್ಷೇತ್ರಗಳಿಗೆ ಹಿಂಸಾಚಾರದ ನಡುವೆಯೂ ಬುಧವಾರ ನಡೆದ 2ನೇ ಹಾಗೂ ಅಂತಿಮ ಹಂತದ ಚುನಾವಣೆಯಲ್ಲಿ ಶೇ.93ರಷ್ಟು ದಾಖಲೆ ಮತದಾನವಾಗಿದೆ.

ಬಂಗಾಳದ ಉತ್ತರ ಮತ್ತು ನೈರುತ್ಯ ಭಾಗದ 152 ಕ್ಷೇತ್ರಗಳಿಗೆ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಶೇ.93.19ರಷ್ಟು ಮತದಾನವಾಗಿತ್ತು. ಇಂದು ದಕ್ಷಿಣ ಬಂಗಾಳದ 142 ಕ್ಷೇತ್ರಗಳಿಗೆ 2ನೇ ಹಂತದ ಮತದಾನ ನಡೆಯಿತು. ಒಟ್ಟು ಎರಡೂ ಹಂತದ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಶೇ.92.47 ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಸ್ವಾತಂತ್ರ್ಯ ನಂತರದ ಚುನಾವಣೆಗಳಲ್ಲಿ ಈ ಪ್ರಮಾಣದಲ್ಲಿ ಮತದಾನವಾಗಿರುವುದು ಗರಿಷ್ಠ ದಾಖಲೆಯಾಗಿದೆ. 2011ರ ವಿಧಾನಸಭಾ ಚುನಾವಣೆಯಲ್ಲಿ ಈ ಪ್ರಮಾಣ ಶೇ.84.75ರಷ್ಟಿತ್ತು. ಆ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಬಂಗಾಳದಲ್ಲಿ 35 ವರ್ಷಗಳ ಕಾಲದ ಎಡಪಕ್ಷಗಳ ಆಡಳಿತವನ್ನು ಕಿತ್ತೊಗೆದಿತ್ತು. ಪಶ್ಚಿಮ ಬಂಗಾಳದಲ್ಲಿ ದಾಖಲೆ ಪ್ರಮಾಣದಲ್ಲಿ ಮತದಾನವಾಗಿರುವುದನ್ನು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಶ್ಲಾಘಿಸಿದ್ದಾರೆ. ಮತದಾರರ ಉತ್ಸಾಹಭರಿತ ಭಾಗವಹಿಸುವಿಕೆಯ ಬಗ್ಗೆ ಮಾತನಾಡಿದ ಅವರು, "ಸ್ವಾತಂತ್ರ್ಯದ ನಂತರ ಪಶ್ಚಿಮ ಬಂಗಾಳದಲ್ಲಿ 1 ಮತ್ತು 2 ನೇ ಹಂತ ಎರಡರಲ್ಲೂ ಅತಿ ಹೆಚ್ಚು ಮತದಾನವಾಗಿದೆ. "ಚುನಾವ ಕೆ ಪರ್ವ್, ಪಶ್ಚಿಮ ಬಂಗಾಳ ಕಾ ಗರ್ವ್" (ಪ್ರಜಾಪ್ರಭುತ್ವದ ಹಬ್ಬವು ಪಶ್ಚಿಮ ಬಂಗಾಳದ ಹೆಮ್ಮೆ) ಎಂದು ಬಣ್ಣಿಸಿದ್ದಾರೆ.

ಪುರುಷರಿಗಿಂತ ಮಹಿಳಾ ಮತದಾರರೇ ಮುಂದು

2026ರ ವಿಧಾನಸಭಾ ಚುನಾವಣೆಯಲ್ಲಿ ಪುರುಷರಿಗಿಂತ ಮಹಿಳೆಯರು ಮತ್ತು ತೃತೀಯ ಲಿಂಗಿ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿದ್ದಾರೆ. ಚುನಾವಣಾ ಆಯೋಗ ಹಂಚಿಕೊಂಡ ಮಾಹಿತಿಯಂತೆ, ಶೇ. 91.74 ಪುರುಷರು ಮತ ಚಲಾಯಿಸಿದ್ದರೆ, ಮಹಿಳಾ ಮತದಾರರ ಪ್ರಮಾಣ ಶೇ.93.24 ರಷ್ಟಿದೆ. ಮೊದಲ ಹಂತದಲ್ಲಿ ಶೇ. 92.34 ಪುರುಷರ ವಿರುದ್ಧ ಶೇ. 94.10 ಮಹಿಳೆಯರು ತಮ್ಮ ಪ್ರಜಾಸತ್ತಾತ್ಮಕ ಹಕ್ಕನ್ನು ಚಲಾಯಿಸಿದ್ದಾರೆ. ಎರಡನೇ ಹಂತದಲ್ಲಿ ಈ ಪ್ರಮಾಣವು ಶೇ. 91.07 ಪುರುಷರು ಮತ್ತು ಶೇ. 92.28 ಮಹಿಳೆಯರು ಎಂದು ದಾಖಲಾಗಿದೆ. ಎರಡನೇ ಹಂತದಲ್ಲಿ ತೃತೀಯ ಲಿಂಗಿಗಳ ಮತದಾನದ ಪ್ರಮಾಣ ಶೇ. 91.28 ತಲುಪಿದೆ.

ಕನಿಷ್ಠ, ಗರಿಷ್ಠ ಮತದಾನ

ರಾಜ್ಯದ ಪೂರ್ವ ವರ್ಧಮಾನ್ ಜಿಲ್ಲೆಯಲ್ಲಿ ಗರಿಷ್ಠ ಶೇ.93.60ರಷ್ಟು ಮತದಾನವಾಗಿದ್ದು, ನಂತರದ ಸ್ಥಾನದಲ್ಲಿ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಶೇ.92ರಷ್ಟು ಮತದಾನವಾಗಿದೆ.

# ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣ ಗಂಭೀರವಾಗಿ ಪರಿಗಣಿಸಿಲ್ಲ

- ☐ ರಾಜ್ಯ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಚಾಟಿ, ಕೌಂಟರ್ ಅಫಿಡವಿಟ್ ಸಲ್ಲಿಕೆಗೆ ಸೂಚನೆ
- ☐ ಸಾಕ್ಷಿಗಳಿಗೆ ರಕ್ಷಣೆ ನೀಡುವಂತೆಯೂ ನಿರ್ದೇಶನ

**ನವದೆಹಲಿ, ಏ.29:** ಧರ್ಮಸ್ಥಳದ 17 ವರ್ಷದ ವಿದ್ಯಾರ್ಥಿನಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಮರು ತನಿಖೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಪ್ರಕರಣದ ಸಾಕ್ಷಿಗಳಿಗೆ ರಕ್ಷಣೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಸೌಜನ್ಯ ತಾಯಿ ಕುಸುಮಾವತಿಗೌಡ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಸಂಜಯ್ ಕುಮಾರ್ ನೇತೃತ್ವದ ದ್ವಿ ಸದಸ್ಯ ಪೀಠ ವಿಚಾರಣೆ ನಡೆಸಿತು. ಕುಸುಮಾವತಿಗೌಡ ಪರ ವಾದ ಮಂಡಿಸಿದ ವಕೀಲರು ಪ್ರಕರಣದಲ್ಲಿನ ಹಲವು ಸಾಕ್ಷಿಗಳು ಅನುಮಾನಸ್ಪವಾಗಿ ಮೃತಪಟ್ಟಿದ್ದಾರೆ ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಲಯ ರಾಜ್ಯ ಸರ್ಕಾರ ಪ್ರಕರಣವನ್ನ ಗಂಭೀರವಾಗಿ ಪರಿಗಣಿಸಿಲ್ಲ ಎಂದು ತರಾಟೆಗೆ ತೆಗೆದುಕೊಂಡಿತು. ಇದೇ ವೇಳೆ ರಾಜ್ಯ ಸರ್ಕಾರ ಮತ್ತು ಸಿಬಿಐ ಲಿಖಿತ ಜುಲೈ 14 ರೊಳಗೆ ಕೌಂಟರ್ ಅಫಿಡೆವಿಟ್ ಸಲ್ಲಿಸಲು ಸೂಚನೆ ನೀಡಿತು.

ಪ್ರಕರಣದ ಬೆಳಿಗಿನ ವಿಚಾರಣೆಯಲ್ಲಿ ರಾಜ್ಯ ಸರ್ಕಾರ ಮತ್ತು ಸಿಬಿಐ ಪರ ಅಭಿಯೋಜಕರು ಕೋರ್ಟ್ ಹಾಲ್ ನಲ್ಲಿ ಇರಲಿಲ್ಲ. ಮಧ್ಯಾಹ್ನ ಮತ್ತೆ ಪ್ರಕರಣದ ವಿಚಾರಣೆ ನಡೆದಾಗಲೂ ರಾಜ್ಯ ಸರ್ಕಾರ ಮತ್ತು ಸಿಬಿಐ ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಲಿಲ್ಲ.


ಈ ಹಿನ್ನೆಲೆ ಮೇಲ್ಮನವಿ ಅರ್ಜಿಯ ವಿಚಾರಣೆಯಲ್ಲಿ ನ್ಯಾಯಾಲಯವು ಪ್ರಮುಖ ನಿರ್ದೇಶನಗಳನ್ನು ನೀಡಿತು.

ಪ್ರಮುಖ ಸಾಕ್ಷ್ಯಗಳು ಮತ್ತು ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ಅರ್ಜಿದಾರರ ಪರವಾಗಿ ಹಿರಿಯ ನ್ಯಾಯವಾದಿಗಳು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ಇದಕ್ಕೆ ಮನ್ನಣೆ ನೀಡಿ ಪ್ರಕರಣದ ಎಲ್ಲ ಪ್ರಮುಖ ಸಾಕ್ಷಿಗಳಿಗೆ ತಕ್ಷಣದಿಂದ ರಕ್ಷಣೆ ನೀಡಬೇಕು, ರಾಜ್ಯ ಸರ್ಕಾರ ಮತ್ತು ಸಿಬಿಐ ಎರಡು ವಾರಗಳಲ್ಲಿ ಲಿಖಿತ ರೂಪದಲ್ಲಿ ತಮ್ಮ ನಿಲುವು ಸಲ್ಲಿಸಬೇಕು. ಮರುತನಿಖೆ ಯಾವ ಸಂಸ್ಥೆ ನಡೆಸಬಹುದು ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಪೀಠ ಸೂಚಿಸಿತು.

ಅರ್ಜಿದಾರ ಕುಸುಮಾವತಿ ಅವರ ಪರವಾಗಿ ಹಿರಿಯ ನ್ಯಾಯವಾದಿಗಳಾದ ಶೋಭಾ ಗುಪ್ತ, ಶೇಖರ ದೇವಸ್, ಸಂಜಯ್ ನೂಲವಿ, ಅಶುತೋಷ್ ದುಬೇ ಸೇರಿದಂತೆ ಅನೇಕ ನ್ಯಾಯವಾದಿಗಳು ಹಾಜರಿದ್ದರು. ಸಂತೋಷ್ ರಾವ್ ಅವರ ಪರವಾಗಿ ಹಿರಿಯ ನ್ಯಾಯವಾದಿ ಗುರುರಾಜ್ ವಾದ ಮಂಡಿಸಿದರು.

# ದೇಶದ ಮೊದಲ ನೌಕಾ ವಿರೋಧಿ ಕ್ಷಿಪಣಿ ಸಾಲ್ವೋ ಯಶಸ್ವಿ ಪರೀಕ್ಷೆ

## ಡಿಆರ್‌ಡಿಒ, ನೌಕಾಪಡೆ, ವಾಯುಪಡೆ ಕಾರ್ಯಕ್ಕೆ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಶ್ಲಾಘನೆ



ನವದೆಹಲಿ, ಏ.29ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಮತ್ತು ಭಾರತೀಯ ನೌಕಾಪಡೆಯು ಒಡಿಶಾದ ಬಂಗಾಳ ಕೊಲ್ಲಿಯ ಕರಾವಳಿಯಲ್ಲಿ ಭಾರತೀಯ ನೌಕಾಪಡೆಯ ಹೆಲಿಕಾಪ್ಟರ್ ವೇದಿಕೆಯಿಂದ ನೌಕಾ ವಿರೋಧಿ ಕ್ಷಿಪಣಿ–ಅಲ್ಪದೂರದ (NASM-SR) ಚೊಚ್ಚಲ 'ಸಾಲ್ವೋ' ಸತತವಾಗಿ ಎರಡು ಕ್ಷಿಪಣಿಗಳ ಉಡಾವಣೆ) ಪರೀಕ್ಷೆಯನ್ನು ಬುಧವಾರ ಯಶಸ್ವಿಯಾಗಿ ನಡೆಸಿತು.

ಈ ಯಶಸ್ಸಿಗೆ ಅಭಿನಂದನೆ ಸಲ್ಲಿಸಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಡಿಆರ್‌ಡಿಒ , ಭಾರತೀಯ ನೌಕಾಪಡೆ, ಭಾರತೀಯ ವಾಯುಪಡೆ ಮತ್ತು ಕೈಗಾರಿಕಾ ಪಾಲುದಾರರನ್ನು ಶ್ಲಾಘಿಸಿದ್ದಾರೆ. ಈ ಕ್ಷಿಪಣಿಯ ಅಭಿವೃದ್ಧಿಯು ಸಶಸ್ತ್ರ ಪಡೆಗಳ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಲಿದೆ ಎಂದು ತಿಳಿಸಿದ್ದಾರೆ.

### ಕ್ಷಿಪಣಿಯ ವಿಶೇಷ

* ಒಂದೇ ಹೆಲಿಕಾಪ್ಟರ್‌ನಿಂದ ಎರಡು ಕ್ಷಿಪಣಿಗಳನ್ನು ಅತ್ಯಂತ ವೇಗವಾಗಿ ಸತತವಾಗಿ ಉಡಾವಣೆ
* ಕ್ಷಿಪಣಿಗಳು ಹಡಗಿನ ನೀರಿನ ಮಟ್ಟಕ್ಕೆ (Waterline) ನಿಖರವಾಗಿ ಅಪ್ಪಳಿಸುವ ಸಾಮರ್ಥ್ಯ ಹೊಂದಿವೆ
* ಕ್ಷಿಪಣಿ ಘನ ಇಂಧನ ಪ್ರೊಪಲ್ಷನ್ ಬೂಸ್ಟರ್ ಹೊಂದಿದ್ದು, ಇದರಲ್ಲಿ ಸ್ವದೇಶಿ ನಿರ್ಮಿತ ಸೀಕರ್, ಇಂಟಿಗ್ರೇಟೆಡ್ ಏವಿಯಾನಿಕ್ಸ್
* ಮಾಡ್ಯೂಲ್ ಮತ್ತು ಸುಧಾರಿತ ನ್ಯಾವಿಗೇಷನ್ ವ್ಯವಸ್ಥೆ ಬಳಸಲಾಗಿದೆ
* ಹೈದರಾಬಾದ್ ಮೂಲದ ರಿಸರ್ಚ್ ಸೆಂಟರ್ ಇಮಾರತ್ (RCI) ಇತರ ಡಿಆರ್‌ಡಿಒ ಪ್ರಯೋಗಾಲಯಗಳ ಸಹಯೋಗದೊಂದಿಗೆ ಈ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಲಾಗಿದೆ.

### ಹೇಗೆ ಕಾರ್ಯನಿರ್ವಹಿಸುತ್ತದೆ?

ಈ ಪರೀಕ್ಷೆಯು ಹೈ–ಬ್ಯಾಂಡ್‌ವಿಡ್ತ್ ಟು–ವೇ ಡೇಟಾಲಿಂಕ್ ಸಿಸ್ಟಮ್ ಅನ್ನು ಸಹ ಪ್ರದರ್ಶಿಸಿತು. ಇದು ಕ್ಷಿಪಣಿಯ ಸೀಕರ್‌ನಿಂದ ಲೈವ್ ಚಿತ್ರಗಳನ್ನು ಪೈಲಟ್‌ಗೆ ಕಳುಹಿಸುತ್ತದೆ, ಇದರಿಂದಾಗಿ ಹಾರಾಟದ ಮಧ್ಯದಲ್ಲೇ ಗುರಿಯನ್ನು ಬದಲಾಯಿಸಲು (In-flight retargetting) ಸಾಧ್ಯವಾಗುತ್ತದೆ. ಪರೀಕ್ಷೆಯ ಸಮಯದಲ್ಲಿ, ಪೈಲಟ್ ಮೊದಲು ದೊಡ್ಡ ಗುರಿಯನ್ನು ಆಯ್ಕೆ ಮಾಡಿದ್ದರು, ಆದರೆ ಅಂತಿಮ ಹಂತದಲ್ಲಿ ಸಣ್ಣ ಅಡಗಿದ ಗುರಿಯನ್ನು ಆರಿಸಿಕೊಂಡಾಗಲೂ ಕ್ಷಿಪಣಿಯು ಅತ್ಯಂತ ನಿಖರವಾಗಿ ಗುರಿ ತಲುಪುತ್ತದೆ. ಕಳೆದ ವಾರವಷ್ಟೇ ಡಿಆರ್‌ಡಿಒ ಮತ್ತು ಭಾರತೀಯ ನೌಕಾಪಡೆಯು ಮುಂಚೂಣಿಯ ಯುದ್ಧನೌಕೆಗಳ ವಿನ್ಯಾಸಕ್ಕೆ ಸಂಬಂಧಿಸಿದ ಹೈಡ್ರೊಡೈನಾಮಿಕ್ ಪರೀಕ್ಷೆಗಳನ್ನು ಕೂಡ ಯಶಸ್ವಿಯಾಗಿ ಪೂರ್ಣಗೊಳಿಸಿವೆ ಎಂಬುದು ಗಮನಾರ್ಹ

# ಪೆಟ್ರೋಲ್, ಡೀಸೆಲ್ ಕೊರತೆಯಿಲ್ಲ: ಬೆಲೆ ಸ್ಥಿರ, ಪೂರೈಕೆ ಸಹಜ– ಕೇಂದ್ರ ಸ್ಪಷ್ಟನೆ

**ನವದೆಹಲಿ, ಏ.29:** ಪೆಟ್ರೋಲ್ ಮತ್ತು ಡೀಸೆಲ್‌ನ ಚಿಲ್ಲರೆ ಬೆಲೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಎಲ್ಲಾ ಮಾರಾಟ ಮಳಿಗೆಗಳಲ್ಲಿ ಇಂಧನ ದಾಸ್ತಾನು ಲಭ್ಯವಿದ್ದು, ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಾರ್ವಜನಿಕರು ಆತಂಕಗೊಂಡು ಅನಗತ್ಯವಾಗಿ ಇಂಧನ ಖರೀದಿಗೆ ಮುಂದಾಗಬಾರದು ಎಂದು ಮನವಿ ಮಾಡಿದೆ.

ನ್ಯಾಷನಲ್ ಮೀಡಿಯಾ ಸೆಂಟರ್‌ನಲ್ಲಿ ನಡೆದ ಉನ್ನತ ಮಟ್ಟದ ಅಂತರ–ಸಚಿವಾಲಯ ಸಭೆಯಲ್ಲಿ ಮಾತನಾಡಿದ ಅಧಿಕಾರಿಗಳು, ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ಏರಿಳಿತಗಳಿದ್ದರೂ, ಸಾರ್ವಜನಿಕ ವಲಯದ ತೈಲ ಕಂಪನಿಗಳು ಸ್ಥಿರವಾದ ಪೂರೈಕೆಯನ್ನು ನಿರ್ವಹಿಸುತ್ತಿವೆ. ಅಂತರಾಷ್ಟ್ರೀಯ ಬೆಲೆ ಏರಿಕೆಯ ಹೊರೆಯಿಂದ ದೇಶೀಯ ಗ್ರಾಹಕರನ್ನು ರಕ್ಷಿಸಲು ಸರ್ಕಾರವು ಅಬಕಾರಿ ಸುಂಕ ಕಡಿತ ಮತ್ತು ರಫ್ತು ತೆರಿಗೆಯಂತಹ ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸಿದ್ದಾರೆ.

ಇಂಧನದ ಕೊರತೆಯಿಲ್ಲ ಎಂದು ಪುನರುಚ್ಚರಿಸಿದ ಅಧಿಕಾರಿಗಳು, ಎಲ್ಲಾ ಪೆಟ್ರೋಲ್ ಬಂಕ್‌ಗಳು ಸಹಜವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ಸುಳ್ಳು ಸುದ್ದಿಗಳ ಬಗ್ಗೆ ಎಚ್ಚರಿಕೆ ನೀಡಿದರು. ನಾಗರಿಕರು ಕೇವಲ




ಅಧಿಕೃತ ಮೂಲಗಳನ್ನು ನಂಬಬೇಕು ಮತ್ತು ಈ ಅವಧಿಯಲ್ಲಿ ಇಂಧನ ಸಂರಕ್ಷಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

**ಎಲ್‌ಪಿಜಿ ಮತ್ತು ಇತರ ಇಂಧನಗಳ ವಿವರ:**

ಮನೆಯ ಬಳಕೆಯ ಎಲ್‌ಪಿಜಿ: ದೇಶೀಯ ಎಲ್‌ಪಿಜಿ ಪೂರೈಕೆಗೆ ಆದ್ಯತೆ ನೀಡಲಾಗಿದ್ದು, ಏಪ್ರಿಲ್ 28ರಂದು ಒಂದೇ ದಿನ 50.8 ಲಕ್ಷಕ್ಕೂ ಹೆಚ್ಚು ಸಿಲಿಂಡರ್‌ಗಳನ್ನು ವಿತರಿಸಲಾಗಿದೆ. ವಲಸೆ ಕಾರ್ಮಿಕರಿಗಾಗಿ 73,000ಕ್ಕೂ ಹೆಚ್ಚು '5–ಕೆಜಿ ಫ್ರೀ ಟ್ರೇಡ್ ಎಲ್‌ಪಿಜಿ' ಸಿಲಿಂಡರ್‌ಗಳನ್ನು ಒದಗಿಸಲಾಗಿದೆ. ಆಟೋ ಎಲ್‌ಪಿಜಿ: ಆಟೋ ಎಲ್‌ಪಿಜಿ ಬಳಕೆ ಗಣನೀಯವಾಗಿ ಹೆಚ್ಚಾಗಿದ್ದು, ಏಪ್ರಿಲ್‌ನಲ್ಲಿ ಸರಾಸರಿ ದೈನಂದಿನ ಮಾರಾಟ 353 ಮೆಟ್ರಿಕ್ ಟನ್ ತಲುಪಿದೆ. ಇದು ಜನವರಿ–ಫೆಬ್ರವರಿ ಅವಧಿಯ ಮಾರಾಟಕ್ಕಿಂತ (177 ಮೆಟ್ರಿಕ್ ಟನ್) ಸುಮಾರು ಎರಡರಷ್ಟು ಹೆಚ್ಚಾಗಿದೆ. ಪಿಎನ್‌ಜಿ ಮತ್ತು ಸಿಎನ್‌ಜಿ: ಮನೆಗಳಿಗೆ ಪೂರೈಸುವ ಪಿಎನ್‌ಜಿ ಸಿಎನ್‌ಜಿ ವಿಭಾಗಗಳಿಗೆ 100 ಪ್ರತಿಶತ ಪೂರೈಕೆಯನ್ನು ಸರ್ಕಾರ ಖಚಿತಪಡಿಸಿದೆ.

**ಕಟ್ಟುನಿಟ್ಟಿನ ಕ್ರಮ:**

ಪೂರೈಕೆ ನಿರ್ವಹಣೆಯನ್ನು ಬಲಪಡಿಸಲು, ಅಗತ್ಯ ವಸ್ತುಗಳ ಕಾಯ್ದೆಯಡಿ ಕಠಿಣ ನಿಗಾ ಇಡುವಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಲಾಗಿದೆ. ಕಳೆದ 24 ಗಂಟೆಗಳಲ್ಲಿ ಕಾಳಸಂತೆ ಮತ್ತು ದಾಸ್ತಾನು ಮಾಡುವುದನ್ನು ತಡೆಯಲು ದೇಶಾದ್ಯಂತ 2,200ಕ್ಕೂ ಹೆಚ್ಚು ಕಡೆ ದಾಳಿ ನಡೆಸಲಾಗಿದೆ. ಸಮುದಾಯದ ಹಿತದೃಷ್ಟಿಯಿಂದ, ಬಂದರುಗಳು ಮತ್ತು ಹಡಗು ಸಚಿವಾಲಯವು ಕಡಲ ಕಾರ್ಯಾಚರಣೆಗಳು ಸುಗಮವಾಗಿ ನಡೆಯುತ್ತಿವೆ ಎಂದು ಖಚಿತಪಡಿಸಿದೆ. ಪಶ್ಚಿಮ ಏಷ್ಯಾದಲ್ಲಿರುವ ಭಾರತೀಯರ ಸುರಕ್ಷತೆಗಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ನಿರಂತರ ಪ್ರಯತ್ನ ನಡೆಸುತ್ತಿದ್ದು, ಈವರೆಗೆ 2,800ಕ್ಕೂ ಹೆಚ್ಚು ನಾವಿಕರನ್ನು ಮತ್ತು ಇರಾನ್‌ನಿಂದ 2,464 ಭಾರತೀಯರನ್ನು ಭೂ ಮಾರ್ಗದ ಮೂಲಕ ಸುರಕ್ಷಿತವಾಗಿ ಕರೆತರಲಾಗಿದೆ. ಒಟ್ಟಾರೆಯಾಗಿ, ಭೌಗೋಳಿಕ ರಾಜಕೀಯ ಅನಿಶ್ಚಿತತೆಯ ನಡುವೆಯೂ ಇಂಧನ ಪೂರೈಕೆ ಸರಪಳಿ ಮತ್ತು ಜನರ ಕಲ್ಯಾಣವನ್ನು ಕಾಪಾಡಲು ವಿವಿಧ ಸಚಿವಾಲಯಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸುತ್ತಿವೆ ಎಂದು ಸರ್ಕಾರ ತಿಳಿಸಿದೆ.

## ಬೆಲೆ ಏರಿಕೆ ಸುತ್ತೋಲೆ ಸಂಪೂರ್ಣ ನಕಲಿ, ಸುಳ್ಳು

ಇಂಧನ ಬೆಲೆಗಳಲ್ಲಿ ಏರಿಕೆಯಾಗಬಹುದು ಎಂಬ ವ್ಯಾಪಕ ಊಹಾಪೋಹಗಳ ನಡುವೆ, ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳ ಮಾಡಿ ಆದೇಶಿಸಿರುವ ಸುತ್ತೋಲೆಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಇದು ಸಂಪೂರ್ಣ ನಕಲಿ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಸಾರ್ವಜನಿಕರು ಕೇವಲ ಸರ್ಕಾರದ ಅಧಿಕೃತ ಮೂಲಗಳನ್ನಷ್ಟೇ ನಂಬಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಬಗ್ಗೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಸ್ಪಷ್ಟೀಕರಣ ನೀಡಿದ್ದು, ಈ ಸುತ್ತೋಲೆಯ ನೈಜತೆ ಪರೀಕ್ಷಿಸದಾಗಿ ಇದು ಸಂಪೂರ್ಣ ಸುಳ್ಳು ಮತ್ತು ನಕಲಿ ಎಂದು ತಿಳಿದುಬಂದಿದೆ. ಮತ್ತು ಅಂತಹ ಯಾವುದೇ ನಿರ್ದೇಶನವನ್ನು ಹೊರಡಿಸಲಾಗಿಲ್ಲ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಮತ್ತು ಅನಗತ್ಯ ಭೀತಿ ಅಥವಾ ಗೊಂದಲ ಉಂಟುಮಾಡುವ ಇಂತಹ ಮಾಹಿತಿಯನ್ನು ಹಂಚಿಕೊಳ್ಳದಂತೆ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.




ನವದೆಹಲಿಯಲ್ಲಿ ಬುಧವಾರ ಭಾರತದ ಅಧ್ಯಕ್ಷತೆಯಲ್ಲಿ 3ನೇ ಬ್ರಿಕ್ಸ್ ಸಾರಿಗೆ ಕಾರ್ಯಪಡೆಯ ಸಭೆಯ ಮೊದಲ ಸಿದ್ಧತಾ ಸಭೆ ನಡೆಯಿತು.

# ರಾಹುಲ್‌ಗಾಂಧಿ ವಿರುದ್ಧ ದ್ವಿಪೌರತ್ವ ಅರ್ಜಿ ಹಾಕಿದ್ದ ವಿಘ್ನೇಶ್ ಶಿಶಿರ್ ಮೇಲಿದೆ 13 ಕೋಟಿ ರೂ. ವಂಚನೆ ಆರೋಪ!

ಅಲಹಾಬಾದ್, ಏ.29: ರಾಹುಲ್ ಗಾಂಧಿ ಅವರ ದ್ವಿಪೌರತ್ವಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ಬೆಂಗಳೂರು ಮೂಲದ ಉದ್ಯಮಿ ಮತ್ತು ಬಿಜೆಪಿ ಕಾರ್ಯಕರ್ತ ವಿಘ್ನೇಶ್ ಶಿಶಿರ್ ಮೇಲೆ 13 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ವಂಚನೆ ಆರೋಪ ಕೇಳಿಬಂದಿದೆ. ಕನಿಷ್ಠ ಎರಡು ಪ್ರಮುಖ ವಂಚನೆ ಪ್ರಕರಣಗಳಲ್ಲಿ ಶಿಶಿರ್ ಆರೋಪಿಯಾಗಿದ್ದಾನೆ ಎನ್ನಲಾಗಿದೆ.

ರಾಹುಲ್ ಗಾಂಧಿ ಬ್ರಿಟಿಷ್ ಪೌರತ್ವವನ್ನು ಹೊಂದಿದ್ದಾರೆ ಎಂಬ ಆರೋಪದ ಬಗ್ಗೆ ಪೊಲೀಸ್ ತನಿಖೆಗೆ ಅನುಮತಿ ನೀಡಿದ ಒಂದು ದಿನದ ನಂತರ ಅಲಹಾಬಾದ್ ಹೈಕೋರ್ಟ್‌ನ ಲಕ್ನೋ ಪೀಠವು ತನ್ನ ಆದೇಶವನ್ನು ಮಾರ್ಪಡಿಸಿತ್ತು. ಈ ವೇಳೆ ಶಿಶಿರ್ ಸುದ್ದಿಯಾಗಿದ್ದರು.

ಈ ಆದೇಶ ನೀಡಿದ ನ್ಯಾಯಮೂರ್ತಿ ವಿರುದ್ಧ ಶಿಶಿರ್ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿದ್ದರು. ಇದಾದ ಬೆನ್ನಲ್ಲೇ ನ್ಯಾಯಮೂರ್ತಿಗಳು ಈ ಪ್ರಕರಣದ ವಿಚಾರಣೆಯಿಂದ ಹಿಂದೆಸರಿದಿದ್ದಾರೆ.

ಶಿಶಿರ್ ವಿರುದ್ಧ ಮೊದಲ ವಂಚನೆ ಪ್ರಕರಣ 2016ರಲ್ಲಿ ದಾಖಲಾಗಿದೆ. ವಿಘ್ನೇಶ್ ಅವರ ತಂದೆ ಸತೀಶ್ ಕಶ್ಯಪ್ ಅವರು ಸರ್ಕಾರಿ ಅಧಿಕಾರಿಯಾಗಿದ್ದಾಗ ಸಿಂಪ್ಸನ್ ಅಂಡ್ ಕಂಪನಿ ಮತ್ತು ಅದರ ನೌಕರರ ಸಹಕಾರ ಸಂಘದಿಂದ 9.6 ಕೋಟಿ ರೂ.ಗಳನ್ನು ದುರುಪಯೋಗಪಡಿಸಿ ಕೊಂಡಿದ್ದಾರೆ ಎಂಬ ಆರೋಪವಿದೆ. ಫೆಬ್ರವರಿ 2014ರಿಂದ ಆಗಸ್ಟ್ 2016 ರವರೆಗೆ ಈ ಅಕ್ರಮ ನಡೆದಿದೆ. ಈ ಹಣವು ವಿಘ್ನೇಶ್ ಶಿಶಿರ್ ಮತ್ತು ಅವರ ತಾಯಿ ಜಿ. ಅನಿತಾಗೆ ಸೇರಿದ ವಿವಿಧ ಕಂಪನಿಗಳ ಖಾತೆಗಳಿಗೆ ವರ್ಗಾವಣೆಯಾಗಿದೆ ಎಂದು ತನಿಖೆಯಿಂದ ತಿಳಿದುಬಂದಿದೆ.

2025ರ ಸೆಪ್ಟೆಂಬರ್ 30ರಂದು ವಿಶೇಷ ಲೋಕಾಯುಕ್ತ ನ್ಯಾಯಾಲಯವು ಶಿಶಿರ್, ಅವರ ಪೋಷಕರನ್ನು ಈ ಪ್ರಕರಣದಿಂದ ಮುಕ್ತಗೊಳಿಸಲು ನಿರಾಕರಿಸಿದೆ. ಈ ಮೊತ್ತವನ್ನು ವಶಪಡಿಸಿಕೊಳ್ಳಲು ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಳ್ಳದಿರುವುದು ಅತ್ಯಂತ ದುರದೃಷ್ಟಕರ ಮತ್ತು ಆಘಾತಕಾರಿ ಎಂದು ಕೋರ್ಟ್ ಹೇಳಿತ್ತು.

2018ರಲ್ಲಿ ದಾಖಲಾಗಿರುವ ಎರಡನೇ ಪ್ರಕರಣದಲ್ಲಿ, ಶಿಶಿರ್ ಬೆಂಗಳೂರಿನ 26 ವರ್ಷದ ವಿಶೇಷ ಚೇತನ ಮಹಿಳೆಗೆ 3.36 ಕೋಟಿ ರೂ. ಮತ್ತು ಉತ್ತರ ಬೆಂಗಳೂರಿನಲ್ಲಿ ಅವರ 3,680 ಚದರ ಅಡಿ ವಸತಿ ಜಾಗವನ್ನು ಅಕ್ರಮವಾಗಿ ವರ್ಗಾಯಿಸಿಕೊಂಡ ಆರೋಪವಿದೆ.

ಆಯಮ್ಮ ಎಂ. ಉತ್ತರ ಬೆಂಗಳೂರಿನ ನಾಗಶೆಟ್ಟಿಹಳ್ಳಿ ಗ್ರಾಮದಲ್ಲಿರುವ ಈ ಆಸ್ತಿಯನ್ನು ಮಾರಾಟ ಮಾಡಲು ಮುಂದಾದಾಗ ಶಿಶಿರ್, ಅವರ ಪೋಷಕರು ಮತ್ತು ಸಹಚರ ಕಾಳಿಂಗರಾವ್ ಕಾನೂನು ದಾಖಲೆಗಳ ಪ್ರಕಾರ ಅದನ್ನು 3.36 ಕೋಟಿ ರೂ.ಗೆ ಖರೀದಿಸಲು ಮುಂದಾದರು.

ಬ್ಯಾಂಕಿಂಗ್ ಕಾರ್ಯವಿಧಾನಗಳ ಬಗ್ಗೆ ಹೆಚ್ಚು ತಿಳಿದಿಲ್ಲದ ಅಯ್ಯಮ್ಮ ಅವರನ್ನು ಆರೋಪಿಗಳು ರಾವ್ ಅವರೊಂದಿಗೆ ಜಂಟಿ ಬ್ಯಾಂಕ್ ಖಾತೆ ತೆರೆಯುವಂತೆ ಒತ್ತಾಯಿಸಿ, ಜಂಟಿ ಖಾತೆಗಾಗಿ ಖಾಲಿಚೆಕ್‌ಗಳಿಗೆ ಸಹಿ ಹಾಕಿಸಿದ್ದಾರೆ. ಶಿಶಿರ್ ಜಂಟಿ ಖಾತೆಯಲ್ಲಿ 3.36 ಕೋಟಿ ರೂ.ಗಳನ್ನು ಠೇವಣಿ ಇಟ್ಟಿದ್ದಾರೆ ಎಂಬುದಕ್ಕೆ ಪೊಲೀಸರು ಪುರಾವೆಗಳನ್ನು ಕಂಡುಹಿಡಿದಿದ್ದಾರೆ.

ಹೈ ಆಕ್ಟೇನ್ ವರ್ಲ್ಡ್ ವೈಡ್ ಕಾಫಿ ಲಿಮಿಟೆಡ್ ಶಿಶಿರ್ ನಿರ್ವಹಿಸುವ ಅತ್ಯಂತ ಯಶಸ್ವಿ ವ್ಯವಹಾರವಾಗಿದ್ದು, 2022ರಲ್ಲಿ ಕಂಪನಿಗಳ ರಿಜಿಸ್ಟ್ರಾರ್‌ಗೆ 271 ಕೋಟಿ ರೂ.ಗಳ ಆದಾಯ ವರದಿಯಾಗಿದೆ. ಆದಾಗ್ಯೂ, ಈ ಸಂಸ್ಥೆಯು ಸಹ ಅಕ್ರಮಗಳಿಂದ ತುಂಬಿವೆ. 2022ರಲ್ಲಿ ಕೊಡಗು ಜಿಲ್ಲೆಯ ಕರಿಕೆ ಗ್ರಾಮದಲ್ಲಿ 244.7 ಎಕರೆ ಭೂಮಿಯನ್ನು ಖರೀದಿಸಿದ್ದು ಇದೂ ಅಕ್ರಮದ ಆರೋಪ ಹೊಂದಿದೆ ಎಂದು ವರದಿಯಾಗಿದೆ.

# ಬಿಜೆಪಿ ನಿರ್ದೇಶನದಂತೆ ಚುನಾವಣಾ ವೀಕ್ಷಕರ ಕಾರ್ಯ: ಮಮತಾ ಬ್ಯಾನರ್ಜಿ ಆಕ್ರೋಶ



**ಕೋಲ್ಕತ್ತಾ, ಏ.29:** ಚುನಾವಣಾ ವೀಕ್ಷಕರು ಬಿಜೆಪಿಯ ಏಜೆಂಟರಂತೆ ಕೆಲಸ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನ್ಯಾಯಸಮ್ಮತ ಮತದಾನ ನಡೆಯಲು ಸಾಧ್ಯವೇ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬುಧವಾರ ನಡೆಯುತ್ತಿರುವ ಎರಡನೇ ಹಾಗೂ ಅಂತಿಮ ಹಂತದ ಮತದಾನದ ವೇಳೆ, ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರದ ಕಾರ್ಯವೈಖರಿಯನ್ನು ನೇರವಾಗಿ ಖಂಡಿಸಿರುವ ಅವರು, ಚುನಾವಣೆಯಲ್ಲಿ ಅಕ್ರಮ ಎಸಗಲು ಬಿಜೆಪಿ ಯತ್ನಿಸುತ್ತಿದೆ. ಜೊತೆಗೆ, ರಾಜ್ಯಕ್ಕೆ ಬಂದಿರುವ ಚುನಾವಣಾ ಆಯೋಗದ ವೀಕ್ಷಕರು ನಿಷ್ಪಕ್ಷಪಾತವಾಗಿ ಕೆಲಸ ಮಾಡುವ ಬದಲು, ಜನರನ್ನು ಹೆದರಿಸುವ ಭಯೋತ್ಪಾದಕರಂತೆ ವರ್ತಿಸುತ್ತಿದ್ದಾರೆ. ಆ ಮೂಲಕ ಚುನಾವಣಾ ವ್ಯವಸ್ಥೆಯನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಅವರು ಕಿಡಿಕಾರಿದ್ದಾರೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸ್ವಕ್ಷೇತ್ರ ಭವಾನಿಪುರದಲ್ಲಿ ಅವರ ವಿರುದ್ಧ ಬಿಜೆಪಿ ಸುವೇಂದು ಅಧಿಕಾರಿಯವರನ್ನು ಕಣಕ್ಕಿಳಿಸಿದ್ದು, ತೀವ್ರ ಪೈಪೋಟಿ ಏರ್ಪಟ್ಟಿದೆ. 2021ರ ಚುನಾವಣೆಯಲ್ಲಿ ನಂದಿಗ್ರಾಮದಲ್ಲಿ ಮಮತಾ ಅವರನ್ನು ಸೋಲಿಸಿದ್ದ ಸುವೇಂದು, ಈ ಬಾರಿಯೂ ಜಿದ್ದಾಜಿದ್ದಿನ ಕಣ ಏರ್ಪಟ್ಟಿದೆ. 2021ರ ವಿಧಾನಸಭಾ ಚುನಾವಣೆಯಲ್ಲಿ ಈ ಕ್ಷೇತ್ರಗಳ ಪೈಕಿ ಟಿಎಂಸಿ 123 ಸ್ಥಾನಗಳನ್ನು ಗೆದ್ದುಕೊಂಡು ಬಿಗಿ ಹಿಡಿತ ಸಾಧಿಸಿತ್ತು. ಮತ್ತೊಂದೆಡೆ, ಬಿಜೆಪಿ 18 ಕ್ಷೇತ್ರಗಳಲ್ಲಷ್ಟೇ ಜಯಗಳಿಸಿತ್ತು. ಅಂದಿನ ಚುನಾವಣೆಯಲ್ಲಿ ಟಿಎಂಸಿ ಶೇ. 49.24ರಷ್ಟು ಮತಗಳನ್ನು ಗಳಿಸಿದ್ದರೆ, ಬಿಜೆಪಿ ಶೇ. 36.14ರಷ್ಟು ಮತ ಪ್ರಮಾಣ ಪಡೆದುಕೊಂಡಿತ್ತು. ಹೀಗಾಗಿ, ತಮ್ಮ ಭದ್ರಕೋಟೆ ಉಳಿಸಿಕೊಳ್ಳಲು ಟಿಎಂಸಿ ಹೋರಾಡುತ್ತಿದ್ದರೆ, ದಕ್ಷಿಣ ಬಂಗಾಳದಲ್ಲಿ ನೆಲೆ ಕಂಡುಕೊಳ್ಳಲು ಬಿಜೆಪಿ ತೀವ್ರ ಕಸರತ್ತು ನಡೆಸುತ್ತಿದೆ.

# ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಪೂಜಾ ಕೈಂಕರ್ಯ ತ್ರಿಶೂಲ ಹಿಡಿದು, ಡಮರುಗ ಬಾರಿಸಿದ ಪ್ರಧಾನಿ ಮೋದಿ




**ವಾರಣಾಸಿ, ಏ.29:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಸಂಸದೀಯ ಕ್ಷೇತ್ರ ವಾರಾಣಸಿಗೆ ಎರಡು ದಿನಗಳ ಭೇಟಿ ಕೈಗೊಂಡಿದ್ದು ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಬುಧವಾರ ಪೂಜಾಕೈಂಕರ್ಯ ಕೈಗೊಂಡು ಬಳಿಕ ತ್ರಿಶೂಲ ಹಿಡಿದು ಡಮರುಗ ಬರಿಸಿದರು.

ಇದಕ್ಕೂ ಮೊದಲು ಅವರು ರೋಡ್‌ಶೋ ನಡೆಸಿದರು. ಲೋಕೋಮೋಟಿವ್ ವರ್ಕ್ಸ್‌ನಿಂದ ಆರಂಭಗೊಂಡಿದ್ದು, ಲಹರ್ತಾರಾ, ಕಚಹರಿ, ಅಂಬೇಡ್ಕರ್ ಚೌರಾಹಾ, ಚೌಕಾಘಾಟ್, ತೆಲಿಯಾಬಾಗ್, ಲಹುರಾಬೀರ್ ಮತ್ತು ಮೈದಾಗಿನ್ ಮೂಲಕ ಸಾಗುತ್ತಾ ಅಂತಿಮವಾಗಿ ಕಾಶಿ ವಿಶ್ವನಾಥ ದೇಗುಲದಲ್ಲಿ ಕೊನೆಗೊಂಡಿತು.

ಪ್ರಧಾನಿ ಭೇಟಿಯ ಸಂದರ್ಭದಲ್ಲಿ ವಾರಾಣಸಿ ಕ್ಷೇತ್ರದ ನಿವಾಸಿಗಳು ಮತ್ತು ಪಕ್ಷದ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಸೇರಿ ಪ್ರಧಾನಮಂತ್ರಿಯನ್ನು ಸ್ವಾಗತಿಸಿದರು. ಹರಹರ ಮಹಾದೇವ್ ಮತ್ತು ಜೈ ಶ್ರೀರಾಮ್ ಘೋಷಣೆಗಳನ್ನು ಕೂಗುತ್ತಾ, ಮೋದಿ ಅವರಿಗೆ ಕೈಬೀಸಿ ನಮಸ್ಕಾರ ಮಾಡುವ ಮೂಲಕ ಸ್ವಾಗತಿಸಿದರು. ಸುಮಾರು 14 ಕಿಮೀ ಮಾರ್ಗದಲ್ಲಿ ಹಲವು ಸ್ವಾಗತ ಕೇಂದ್ರಗಳನ್ನು ನಿರ್ಮಿಸಲಾಗಿದ್ದು, ಪಕ್ಷದ ಕಾರ್ಯಕರ್ತರು ಮತ್ತು ಸ್ಥಳೀಯರು ಗುಲಾಬಿ ಹೂವುಗಳ ಮಳೆಯೊಂದಿಗೆ, ಡೊಳ್ಳು, ಶಂಖನಾದಗಳೊಂದಿಗೆ ಸ್ವಾಗತಿಸಿದರು. ಈ ರೋಡ್‌ಶೋ ನಗರದಲ್ಲಿ ನಡೆದ ಅತಿದೊಡ್ಡ ಕಾರ್ಯಕ್ರಮಗಳಲ್ಲಿ ಒಂದಾಗಿದೆ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ. ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಪ್ರಧಾನಿಗೆ ಡಮರುಗದ ಮೂಲಕ ಸ್ವಾಗತ ದೊರೆಯಿತು.

# ದೆಹಲಿ ಹೈಕೋರ್ಟ್‌ನಲ್ಲಿ ವರ್ಚುಯಲ್ ವಿಚಾರಣೆ ವೇಳೆ ಅಶ್ಲೀಲ ವಿಡಿಯೋ ಎಲ್ಲ ಪ್ರಕರಣಗಳ ವಿಚಾರಣೆ ಸ್ಥಗಿತಗೊಳಿಸಿದ ನ್ಯಾಯಮೂರ್ತಿಗಳು

**ನವದೆಹಲಿ, ಏ.29:** ದೇಶದ ರಾಜಧಾನಿಯ ಹೈಕೋರ್ಟ್‌ನಲ್ಲಿ ನಡೆಯುತ್ತಿದ್ದ ವರ್ಚುವಲ್ ವಿಚಾರಣೆಯ ವೇಳೆ ಅಶ್ಲೀಲ ಮತ್ತು ಕಾಮೋದ್ರೇಕದ ಧ್ವನಿ ಪದೇಪದೇ ಪ್ಲೇ ಆಗಿ ದೊಡ್ಡ ಗೊಂದಲ ಸೃಷ್ಟಿಯಾಗಿದೆ. ಇದರಿಂದಾಗಿ ಭಾರಿ ಮುಜುಗರಕ್ಕೆ ಒಳಗಾದ ಮುಖ್ಯ ನ್ಯಾಯಮೂರ್ತಿಗಳ ಪೀಠದ ಎಲ್ಲ ವಿಚಾರಣೆಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿತು. ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರ ವಿಭಾಗೀಯ ಪೀಠ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ(ಪಿಐಎಲ್) ವಿಚಾರಣೆ ನಡೆಸುತ್ತಿದ್ದ ಸಂದರ್ಭದಲ್ಲಿ ಈ ಆಘಾತಕಾರಿ ಘಟನಾವಳಿಗಳು ಜರುಗಿವೆ. ಮಧ್ಯಾಹ್ನ 12:56ಕ್ಕೆ ಆಕಸ್ಮಿಕವಾಗಿ ತೆರೆಯ ಮೇಲೆ ಅಪ್ರಸ್ತುತ ದೃಶ್ಯಗಳು ಕಾಣಿಸಿಕೊಂಡವು. ಕೋರ್ಟ್ ಸಿಬ್ಬಂದಿ ತಕ್ಷಣ ವೀಡಿಯೋ ಕಾನ್ಫರೆನ್ಸ್ ಅನ್ನು ಆಫ್ ಮಾಡಿದರು. ಆದರೆ ಕೆಲವು ನಿಮಿಷಗಳ ನಂತರ ವಿಚಾರಣೆ ಪುನರಾರಂಭಿಸಿದಾಗ ಮತ್ತೆ ಅದೇ ಸಮಸ್ಯೆ ಎದುರಾಯಿತು. ಮೂರನೇ ಬಾರಿಯೂ ಇದೇ ಘಟನೆ ನಡೆದಿದ್ದರಿಂದ ಕೊನೆಗೆ ವಿಚಾರಣೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು.

ವಿಡಿಯೋ ಪ್ಲೇ ಮಾಡುತ್ತಿದ್ದ ಖಾತೆಯಿಂದ **You've been hacked** ಎಂಬ ಸ್ವಯಂಚಾಲಿತ ಧ್ವನಿ ಪದೇಪದೇ ಕೇಳಿಬಂದಿದೆ. ಇದು ಸೈಬರ್ ದಾಳಿಯಾಗಿರಬಹುದು ಎಂಬ ಆತಂಕ ಹುಟ್ಟಿಸಿದೆ. ಹೈಕೋರ್ಟ್ ಆಡಳಿತ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ದೆಹಲಿ ಪೊಲೀಸ್ ಇಂಟೆಲಿಜೆನ್ಸ್ ಫ್ಯೂಷನ್ ಅಂಡ್ ಸ್ಟ್ರಾಟೆಜಿಕ್ ಆಪರೇಷನ್ಸ್ ಘಟಕಕ್ಕೆ ದೂರು ನೀಡಿದೆ. ಪ್ರಾಥಮಿಕ ತನಿಖೆ ಪ್ರಾರಂಭವಾಗಿದೆ. ಯಾರು ಈ ಕೃತ್ಯ ಮಾಡಿದ್ದಾರೆ ಎಂಬುದನ್ನು ಗುರುತಿಸಲು ಪೊಲೀಸರು ಪ್ರಯತ್ನಿಸುತ್ತಿದ್ದಾರೆ. ಬುಧವಾರಗಳಂದು ಮುಖ್ಯ ನ್ಯಾಯಮೂರ್ತಿಗಳ ಕೋರ್ಟ್‌ನಲ್ಲಿ 100 ಪ್ರಕರಣಗಳ ವಿಚಾರಣೆಗೆ ದಿನ ನಿಗದಿಯಾಗಿರುತ್ತದೆ. ಈ ಘಟನೆಯಿಂದ ವಕೀಲರು ಮತ್ತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಈ ಘಟನೆ ದೇಶದ ರಾಜಧಾನಿ ದೆಹಲಿ ಹೈಕೋರ್ಟ್‌ನ ವರ್ಚುವಲ್ ವ್ಯವಸ್ಥೆಯ ಸುರಕ್ಷತೆ ಬಗ್ಗೆ ದೊಡ್ಡ ಪ್ರಶ್ನೆಯನ್ನು ಎತ್ತಿದೆ.

# ರೇಣುಕಾಸ್ವಾಮಿ ಪ್ರಕರಣ: ಜಾಮೀನು ಕೋರಿ ಸುಪ್ರೀಂ ಮೊರೆಹೋದ ನಟ ದರ್ಶನ್

ನವದೆಹಲಿ: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಜೈಲು ಸೇರಿರುವ ದರ್ಶನ್ ಈಗ ಎರಡನೇ ಬಾರಿ ಜಾಮೀನಿಗಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ. ಹಿರಿಯ ವಕೀಲ ಮುಕುಲ್ ರೋಹಟಗಿ ಕಚೇರಿಯಿಂದ ದರ್ಶನ್ ಪರ ಜಾಮೀನು ಅರ್ಜಿ ಸಲ್ಲಿಕೆಯಾಗಿದೆ.

ಜೈಲು ಸೇರಿದ 8 ತಿಂಗಳ ಬಳಿಕ ಈ ಅರ್ಜಿ ಸಲ್ಲಿಸಿದ್ದು, ಮೇ 4 ಕ್ಕೆ ವಿಚಾರಣೆಗೆ ದಿನಾಂಕ ನಿಗದಿಯಾಗಿದೆ. ಜಾಮೀನು ಅರ್ಜಿಯಲ್ಲಿ ಪ್ರಕರಣದ ಟ್ರಯಲ್ ಪ್ರಾರಂಭವಾಗಿದೆ. 8 ತಿಂಗಳು ಕಳೆದ್ರೂ ಕೂಡ ಸಾಕ್ಷಿಗಳ ವಿಚಾರಣೆ ಮುಕ್ತಾಯ ಆಗಿಲ್ಲ. ಸಾಕ್ಷಿಗಳ ವಿಚಾರಣೆ ವಿಳಂಬವಾಗುತ್ತಿದೆ. ಟ್ರಯಲ್‌ನಲ್ಲಿ ಸಾಕ್ಷಿಗಳ ವಿಚಾರಣೆ ತಡ ಆದರೆ ಮುಕ್ತಾಯ ಆಗಲು ಸಾಕಷ್ಟು ವರ್ಷ ಬೇಕಾಗಲಿದೆ. ವಿಚಾರಣೆಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತೇನೆ. ಆದ್ದರಿಂದ ಜಾಮೀನು ಮಂಜೂರು ಮಾಡಿ ಎಂದು ಏಪ್ರಿಲ್ 2ನೇ ವಾರದಲ್ಲಿ ಮನವಿ ಮಾಡಿದ್ದಾರೆ.

ಟ್ರಯಲ್ ಪ್ರಾರಂಭವಾಗಿ 8 ತಿಂಗಳಿಗೆ 15 ಸಾಕ್ಷಿಗಳಷ್ಟೇ ವಿಚಾರಣೆಯಾಗಿದೆ. ಪ್ರಕರಣದಲ್ಲಿ 273 ಸಾಕ್ಷ್ಯಗಳು ಇದ್ದಾವೆ. ಟ್ರಯಲ್ ಕೋರ್ಟ್‌ನಲ್ಲಿ ರೇಣುಕಾಸ್ವಾಮಿ ತಂದೆ – ತಾಯಿ ಹೊರತು ಪಡಿಸಿದರೆ, ಮಹಜರು ಸಾಕ್ಷಿಗಳ ವಿಚಾರಣೆ ಮಾತ್ರ ನಡೆಯುತ್ತಿದೆ. ಆರೋಪಿಗಳು ಟ್ರಯಲ್ ಸಂದರ್ಭದಲ್ಲಿ ಬೇರೆ ಬೇರೆ ಅರ್ಜಿಗಳ ಸಲ್ಲಿಕೆ ಮಾಡಿದ್ದು, ತುಂಬಾ ವಿಳಂಬಕ್ಕೆ ಕಾರಣವಾಗಿದೆ.

ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆ.14 ರಂದು ಜಾಮೀನು ರದ್ದು ಮಾಡಿದ್ದ ಸುಪ್ರೀಂ ಕೋರ್ಟ್, ಆರೋಪಿಗಳಿಗೆ ತಕ್ಷಣವೇ ಶರಣಾಗಲು ಸೂಚಿಸಿತ್ತು. ಆದೇಶದ ಬಳಿಕ ಜೈಲು ಸೇರಿದ್ದ ದರ್ಶನ್, ಇದೀಗ ಮಧ್ಯಂತರ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.

# ಗೋಪಾಲಕೃಷ್ಣ ಟ್ರಸ್ಟ್ ವತಿಯಿಂದ ಗೋಕುಲ ಜಗದ್ಗುರು ಶ್ರೀಶಂಕರಾಚಾರ್ಯ ಜಯಂತಿ ಆಚರಣೆ

**ಮುಂಬಯಿ, ಏ.29:** ಗೋಪಾಲಕೃಷ್ಣ ಪಬ್ಲಿಕ್ ಟ್ರಸ್ಟ್, ಗೋಕುಲ, ಸಾಯನ್, ಬಿ.ಎಸ್.ಕೆ. ಬಿ. ಎಸೋಸಿಯೇಶನ್ ಮತ್ತು ಶ್ರೀ ಸುಬ್ರಹ್ಮಣ್ಯ ಸೇವಾಸಂಘದ ಸಹಯೋಗದೊಂದಿಗೆ ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರ ಜಯಂತ್ಯುತ್ಸವವನ್ನು, ರವಿವಾರ ರಂದು ಸಂಭ್ರಮದಿಂದ ಆಚರಿಸಿತು.



ವೇದಮೂರ್ತಿಗಳಾದ ದುರ್ಗಾಪ್ರಸಾದ್ ಭಟ್ ರವರ ಪ್ರಧಾನ ಪೌರೋಹಿತ್ಯದಲ್ಲಿ ಇತರ ಪುರೋಹಿತ ವರ್ಗದವರಾದ ಗಣೇಶ್‌ಪ್ರಸಾದ್ ಭಟ್ ಮತ್ತು ರಮೇಶ್ ಭಟ್‌ರವರೊಂದಿಗೆ, ದೇವತಾ ಪ್ರಾರ್ಥನೆ, ಸಂಕಲ್ಪ, ಪುಣ್ಯಾಹ ವಾಚನ, ಪಂಚಗವ್ಯ, ಗಣಹೋಮದೊಂದಿಗೆ ಪ್ರಾರಂಭವಾಗಿ, ಶಿವಪಂಚಾಕ್ಷರಿ ಹೋಮ, ರುದ್ರಾಭಿಷೇಕ, ಶ್ರೀ ಶಂಕರಾಚಾರ್ಯ ಪೂಜೆ, ಶಿವ ನಾಮಾರ್ಚನೆ, ಅಷ್ಟಾವಧಾನ, ಮುಂತಾದ ಧಾರ್ಮಿಕ ವಿಧಿಗಳು ವಿಧಿವತ್ತಾಗಿ ನೆರವೇರಿದವು. ಗಣಹೋಮದ ಯಜಮಾನತ್ವವನ್ನು ಡಾ. ಸುರೇಶ್ ಎಸ್.ರಾವ್. ಮತ್ತು ವಿಜಯಲಕ್ಷ್ಮಿ ರಾವ್ ದಂಪತಿ ವಹಿಸಿದ್ದರು. ಅನುರಾಧಾ ಮತ್ತು ಸತ್ಯನಾರಾಯಣ ರಾವ್ ದಂಪತಿ ಶಿವಪಂಚಾಕ್ಷರಿ ಹೋಮ, ಸುಚಿತ್ರಾ ಮತ್ತು ಅರುಣ್ ರಾವ್ ದಂಪತಿ ರುದ್ರಾಭಿಷೇಕ, ಅರ್ಚನಾ ಮತ್ತು ಸಂದೀಪ್ ರಾವ್ ದಂಪತಿ ಶ್ರೀ ಶಂಕರಾಚಾರ್ಯ ಪೂಜೆಯ ಯಜಮಾನತ್ವವನ್ನು ವಹಿಸಿದ್ದರು. ಅರ್ಚಕ ವರ್ಗದವರಾದ ರಾಮವಿಠಲ ಕಲ್ಲೂರಾಯ ಹಾಗೂ ಅಕ್ಷಯ ಬಲ್ಲಾಳ್ ಪೂಜಾ ವಿಧಿಗಳಿಗೆ ಸಹಕರಿಸಿದರು.

ಸುಬ್ರಹ್ಮಣ್ಯ ಸೇವಾ ಸಂಘದ ಅಧ್ಯಕ್ಷರು ಕೆ. ಸುಬ್ಬಣ್ಣ ರಾವ್ ಮತ್ತು ಪದಾಧಿಕಾರಿಗಳು ಸುಭಾಶ್ಚಂದ್ರರಾವ್, ಪಿ.ಉಮೇಶ್‌ರಾವ್, ಕೆ.ಉಮೇಶ್‌ರಾವ್ ಮತ್ತು ಕಾರ್ಯಕಾರಿ ಸಮಿತಿ, ಗೋಪಾಲಕೃಷ್ಣ ಪಬ್ಲಿಕ್ ಟ್ರಸ್ಟ್ ಅಧ್ಯಕ್ಷರು ಡಾ. ಸುರೇಶ್ ಎಸ್. ರಾವ್ ಮತ್ತು ಧಾರ್ಮಿಕ ಸಮಿತಿ ನೇತೃತ್ವದಲ್ಲಿ ಎಲ್ಲಾ ಧಾರ್ಮಿಕ ವಿಧಿಗಳು ಅಚ್ಚುಕಟ್ಟಾಗಿ ನೆರವೇರಿದವು. ಹೋಮಗಳ ಪೂರ್ಣಾಹುತಿ, ಮಂಗಳಾರತಿಯ ನಂತರ ವೇದಮೂರ್ತಿ ದುರ್ಗಾಪ್ರಸಾದ್ ಭಟ್ ನೇತೃತ್ವದಲ್ಲಿ ಜರಗಿದ ಅಷ್ಟಾವಧಾನ ಸೇವೆಯಲ್ಲಿ ಮೋಹಿತಾ ರಾವ್ ಅವರಿಂದ ಸಂಗೀತ ಸೇವೆ ಹಾಗೂ ರಶ್ಮಿ ರಾವ್ ಅವರಿಂದ ನೃತ್ಯ ಸೇವೆ, ಕೃತಿ ಚಡಗ ಅವರಿಂದ ಯಕ್ಷ ನೃತ್ಯ ಸೇವೆ ಜರಗಿತು. ವೇದಮೂರ್ತಿ ದುರ್ಗಾಪ್ರಸಾದ್ ಭಟ್ ಶಂಕರಾಚಾರ್ಯರ ಬಗ್ಗೆ ಪ್ರವಚನ ನೀಡಿ ಭಕ್ತಾದಿಗಳನ್ನು ಅನುಗ್ರಹಿಸಿದರು. ಗೋಕುಲ ಭಜನಾ ಮಂಡಳಿ. ಶ್ರೀ ಹರಿಕೃಷ್ಣ ಭಜನಾ ಮಂಡಳಿ, ಸಸುಬ್ರಹ್ಮಣ್ಯ ಭಜನಾ ಮಂಡಳಿಯಿಂದ ಶಂಕರಾಚಾರ್ಯ ವಿರಚಿತ ಸ್ತೋತ್ರ ಪಠನೆ ಮತ್ತು ಭಜನಾ ಸೇವೆ ನೆರವೇರಿತು. ತೀರ್ಥ ಪ್ರಸಾದ ವಿತರಣೆ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು,

# ಫಲಿತಾಂಶಕ್ಕೂ ಮುನ್ನ ವಿಜಯ್ ಟೆಂಪಲ್ ರನ್

ಚೆನ್ನೈ, ಏ.29: ಮೇ 4ರಂದು ತಮಿಳುನಾಡು ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗುವ ಮುನ್ನವೇ ಟೆಂಪಲ್‌ರನ್ ಶುರು ಮಾಡಿಕೊಂಡಿರುವ ತಮಿಳು ಸೂಪರ್‌ಸ್ಟಾರ್ ಮತ್ತು ಟಿವಿಕೆ ಮುಖಸ್ಥ ದಳಪತಿ ವಿಜಯ್, ಮಂಗಳವಾರ ತಿರುಚೆಂಡೂರು ಮುರುಗನ್ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ್ದು, ಬುಧವಾರ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಪೂಜೆ ಸಲ್ಲಿಸಿದರು.

ಮಂಗಳವಾರ ತಿರುಚೆಂಡೂರು ಮುರುಗನ್ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಅವರು, ಪಕ್ಷದ ಮೊದಲ ಚುನಾವಣಾ ಸ್ಪರ್ಧೆಯಲ್ಲಿ ಯಶಸ್ಸು ಕೋರಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಜೊತೆಗೆ ಶತ್ರುಸಂಹಾರ ಪೂಜೆ ನಡೆಸಿದ್ದಾರೆ ಎನ್ನಲಾಗಿದೆ. ತಮಿಳುನಾಡಿನಲ್ಲಿ ಮುರುಗನ್ ದೇವರ ಆರು ಪವಿತ್ರ ಸ್ಥಳಗಳಲ್ಲಿ ಎರಡನೆಯದಾದ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ತೂತುಕುಡಿ ಜಿಲ್ಲೆಯಲ್ಲಿದೆ.

ಬುಧವಾರ ಬೆಳಗ್ಗೆ ವಿಜಯ್ ಚೆನ್ನೆ ವಿಮಾನ ನಿಲ್ದಾಣದಿಂದ ಶಿರಡಿಗೆ ಪ್ರಯಾಣ ಬೆಳೆಸಿದ್ದಾರೆ. ಆಡಳಿತರೂಢ ಡಿಎಂಕೆ ಮತ್ತು ವಿಪಕ್ಷ ಎಐಎಡಿಎಂಕೆ ಎರಡನ್ನೂ ಎದುರಿಸಿ ಏಕಾಂಗಿಯಾಗಿ ಸ್ಪರ್ಧಿಸಿರುವ ವಿಜಯ್, ಅಧಿಕಾರ ಹಿಡಿಯುವ ಅಥವಾ ಕಿಂಗ್ ಮೇಕರ್ ಆಗುವ ಕನಸು ಕಂಡಿದ್ದಾರೆ.

ಇನ್ನೂ ಚುನಾವಣೆ ಬಳಿಕ ವಿಶ್ರಾಂತಿ ಮೂಡನಲ್ಲಿರುವ ಡಿಎಂಕೆ ಮುಖ್ಯಸ್ಥ ಮತ್ತು ಸಿಎಂ ಎಂ.ಕೆ.ಸ್ಟಾಲಿನ್, ಕುಟುಂಬದೊಂದಿಗೆ ಕೊಡೈಕೆನಾಲ್‌ನಲ್ಲಿ ಸಮಯ ಕಳೆಯುತ್ತಿದ್ದಾರೆ. ವಿಪಕ್ಷ ನಾಯಕ ಎಡಪ್ಪಾಡಿ ಪಳನಿಸ್ವಾಮಿ ಅವರು ತಮ್ಮ ಹುಟ್ಟೂರು ಸೇಲಂನಲ್ಲಿ ತಂಗಿದ್ದಾರೆ

# ಬೆಂಗಳೂರಿನಲ್ಲಿ ಧಾರಾಕಾರ ಮಳೆ, ತಾಪಮಾನ ಗಣನೀಯ ಇಳಿಕೆ, ವಿಧಾನಸೌಧಕ್ಕೂ ನುಗ್ಗಿದ ಮಳೆ ನೀರು



**ಬೆಂಗಳೂರು, ಏ.29:** ಕೆಲ ದಿನಗಳಿಂದ ಬಿರು ಬಿಸಿಲಿನಿಂದ ಬಳಲಿದ್ದ ಬೆಂಗಳೂರಿನ ಜನತೆಗೆ ವರುಣದೇವ ಏಕಾಏಕಿ ಶಾಕ್ ನೀಡಿದ್ದು, ನಗರಾದ್ಯಂತ ಬುಧವಾರ ಸಂಜೆ ಧಾರಾಕಾರ ಮಳೆಯಾಗಿದೆ. ಜನಜೀವನ ಅಸ್ತವ್ಯಸ್ತಗೊಂಡಿತು.

ಬೆಂಗಳೂರಿನಲ್ಲಿ ಸಂಜೆ ಬಿರುಗಾಳಿ ಸಮೇತ ಧಾರಾಕಾರ ಮಳೆ ಸುರಿದಿದ್ದು, ಹಲವೆಡೆ ಅಲಿಕಲ್ಲು ಸಹಿತ ಮಳೆಯಾಗಿದೆ. ನಗರದ ಮೆಜೆಸ್ಟಿಕ್, ಶಾಂತಿನಗರ, ಕೋರಮಂಗಲ, ವಿಧಾನಸೌಧ, ಶಿವಾಜಿನಗರ, ಚಾಮರಾಜಪೇಟೆ ಸೇರಿದಂತೆ ನಗರದ ಬಹುತೇಕ ಎಲ್ಲ ಪ್ರದೇಶಗಳಲ್ಲಿ ಭಾರೀ ಮಳೆ ಸುರಿದಿದೆ.

ಅಲ್ಲದೇ ಯಲಹಂಕ, ವಿದ್ಯಾರಣ್ಯಪುರ, ಜಾಲಹಳ್ಳಿ ಸೇರಿದಂತೆ ಬಹುತೇಕ ಕಡೆ ಮೋಡ ಕವಿದ ವಾತಾವರಣವಿದ್ದು ಗುಡುಗು ಸಹಿತ ಮಳೆ ನಿರೀಕ್ಷಿಸಲಾಗಿದೆ.

ಏಕಾಏಕಿ ಸುರಿದ ಮಳೆಯಿಂದಾಗಿ ನಗರದ ಕೆಲವೆಡೆ ವಾಹನ ಸಂಚಾರದಲ್ಲಿ ವ್ಯತ್ಯಯ ಆಯಿತು. ಹೀಗಾಗಿ ಸಂಜೆ ವೇಳೆ ಮನೆ ಕಡೆ ತೆರಳುತ್ತಿದ್ದವರು ಟ್ರಾಫಿಕ್ ನಲ್ಲಿ ಸಿಲುಕಿ ಸಂಕಷ್ಟ ಎದುರಿಸಿದರು.

**ಎಲ್ಲೆಲ್ಲಿ ಮಳೆ?**

ಶಾಂತಿನಗರ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಕಾರ್ಪೊರೇಶನ್, ಜಯನಗರ, ಚಿನ್ನಸ್ವಾಮಿ, ಮಹಾತ್ಮ ಗಾಂಧಿ ರಸ್ತೆ, ಹಲಸೂರು, ವಿಧಾನಸೌಧ, ಶಿವಾಜಿನಗರ, ರೇಸ್ ಕೋರ್ಸ್ ರಸ್ತೆ, ಮೆಜೆಸ್ಟಿಕ್, ಶಿವಾನಂದ ಸರ್ಕಲ್, ಮಲ್ಲೇಶ್ವರಂ, ಜಯನಗರ, ಜೆಪಿ ನಗರ, ಬಸವನಗುಡಿ ಮೊದಲಾದೆಡೆ ಗಾಳಿಯಿಂದ ಕೂಡಿದ ಆಲಿಕಲ್ಲು ಮಳೆ ಸುರಿದಿದೆ. ಟ್ರಿನಿಟಿ ಸರ್ಕಲ್ ಬಳಿ ಆಲಿಕಲ್ಲು ಮಳೆಯಾಗಿದೆ.

**ಸಂಚಾರ ಅಸ್ತವ್ಯಸ್ತ, ವಿಧಾನಸೌಧಕ್ಕೂ ನುಗ್ಗಿದ ನೀರು**

ಅನಿರೀಕ್ಷಿತ ಮಳೆಯಿಂದಾಗಿ ಅಲ್ಲಲ್ಲಿ ಟ್ರಾಫಿಕ್‌ಜಾಮ್ ಉಂಟಾಗಿದ್ದು, ವಾಹನ ಸವಾರರು ಪರದಾಡುವಂತಾಗಿದೆ. ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿ ಮಳೆಯಿಂದಾಗಿ ಸಂಚಾರ ಅಸ್ತವ್ಯಸ್ಥವಾಗಿತ್ತು.

ಇತ್ತ ವಿಧಾನಸೌಧಕ್ಕೂ ಮಳೆ ನೀರು ನುಗ್ಗಿದ್ದು, ವಿಧಾನಸೌಧದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರ ಕೊಠಡಿಗೆ ನೀರು ನುಗ್ಗಿದೆ. ಕಿಟಕಿ–ಬಾಗಿಲು ಮೂಲಕವೇ ನೀರು ನುಗ್ಗಿದ್ದು, ಕಚೇರಿಯಲ್ಲಿ ಹಲವು ವಸ್ತುಗಳು ಹಾನಿಯಾಗಿವೆ ಎಂದು ಹೇಳಲಾಗಿದೆ

**ಮೊದಲೇ ಸೂಚನೆ ನೀಡಿದ್ದ ಹವಾಮಾನ ಇಲಾಖೆ:** ಹವಾಮಾನ ಇಲಾಖೆಯು ಏಪ್ರಿಲ್ 29 ಮತ್ತು 30 ರಂದು ಬೆಂಗಳೂರು ಸೇರಿದಂತೆ ಕರ್ನಾಟಕ ರಾಜ್ಯದ ವಿವಿಧೆಡೆ ಮಳೆಯಾಗುವುದಾಗಿ ಸೂಚನೆ ನೀಡಿತ್ತು. ಜೊತೆ ಆರೆಂಜ್ ಅಲರ್ಟ್ ಸಹ ಮಾಡಿತ್ತು. ಅಂತೆಯೇ ಇದೀಗ ಬೆಂಗಳೂರು ಸುತ್ತಮುತ್ತ ಮಳೆಯಾಗಿರುವುದರಿಂದ ವಾತಾವರಣ ತಂಪಾಗಿದೆ.

ಈ ತಿಂಗಳ ಆರಂಭದಲ್ಲಿ ಉಷ್ಣಾಂಶವು 36.8ಲಿಅ ವರೆಗೆ ಏರಿಕೆ ಕಂಡು ತೀವ್ರ ಬಿಸಿಲಿನ ತಾಪವಿತ್ತು, ಆದರೆ ಈಗ ಮಾನ್ಸೂನ್ ಪೂರ್ವ ಮಳೆ ಚುರುಕುಗೊಂಡಿರುವುದರಿಂದ ನಗರದಲ್ಲಿ ಹವಾಮಾನ ಬದಲಾಗಿದೆ. ಏಪ್ರಿಲ್ 29, ಬುಧವಾರದಿಂದ, ನಗರದ ಹಲವು ಭಾಗಗಳಲ್ಲಿ ಸಾಧಾರಣದಿಂದ ಭಾರಿ ಮಳೆಯಾಗುತ್ತಿದ್ದು, ಇಂದು ತಡರಾತ್ರಿಯವರೆಗೆ ಯೆಲ್ಲೋ ಅಲರ್ಟ್ ಮತ್ತು ಮಿಂಚಿನ ಮುನ್ನೆಚ್ಚರಿಕೆ ನೀಡಲಾಗಿದೆ.

ಬುಧವಾರ ಸಂಜೆ ವೇಳೆಗೆ ಉಷ್ಣಾಂಶವು ಇಳಿಕೆಯಾಗಿದೆ. ಮೋಡ ಕವಿದ ವಾತಾವರಣ ಮತ್ತು ಮಳೆಯಿಂದಾಗಿ ಕಳೆದ 16 ದಿನಗಳಲ್ಲೇ ಅತ್ಯಂತ ಕಡಿಮೆ ಗರಿಷ್ಠ ತಾಪಮಾನ ದಾಖಲಾಗಿದೆ.



ಬುಧವಾರ ಸಂಜೆ ಬೆಂಗಳೂರಿನಲ್ಲಿ ಮಳೆ ಸುರಿದ ಕಾರಣ ಶಾಂತಲಾ ನಗರ ಪ್ರದೇಶದಲ್ಲಿ ಗಮನಾರ್ಹ ಪ್ರಮಾಣದ ಆಲಿಕಲ್ಲು ಮಳೆಯಾಗಿದೆ.

### ಮುಂದಿನ ಆರು ತಿಂಗಳು ತಿರುಮಲಕ್ಕೆ ಪ್ರತಿದಿನ 12.5 ಟನ್ ತುಪ್ಪ ಪೂರೈಕೆ

# ತಿಮ್ಮಪ್ಪನ ಸನ್ನಿಧಿಯಲ್ಲಿ ಮತ್ತೆ ನಂದಿನಿ ತುಪ್ಪದ ಘಮಲು: ಲಡ್ಡು ತಯಾರಿಕೆಗೆ ಮತ್ತೆ ತುಪ್ಪ ಬಳಕೆ, ಟಿಟಿಡಿ ಜತೆಗಿನ ಬಮುಲ್ ಒಪ್ಪಂದಕ್ಕೆ ಮರುಜೀವ



**ಬೆಂಗಳೂರು, ಏ.29:** ವಿಶ್ವಪ್ರಸಿದ್ಧ ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ಮತ್ತೆ ನಂದಿನಿ ತುಪ್ಪದ ಸುಗಂಧ ಹರಡಲಿದ್ದು, ತಿರುಪತಿ ಲಡ್ಡು ತಯಾರಿಕೆಗೆ ಕರ್ನಾಟಕದ ಹೆಮ್ಮೆಯ ನಂದಿನಿ ತುಪ್ಪ ಮರುಪ್ರವೇಶ ಮಾಡಿದೆ.

ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ (ಬಮುಲ್) ವತಿಯಿಂದ ತಿರುಪತಿ ದೇವಸ್ಥಾನದ ಜೊತೆಗಿನ ಒಪ್ಪಂದಕ್ಕೆ ಮರುಜೀವ ಸಿಕ್ಕಿದ್ದು, ಒಟ್ಟು ಸುಮಾರು 20 ಲಕ್ಷ ಕೆಜಿ ನಂದಿನಿ ತುಪ್ಪವನ್ನು ತಿರುಪತಿಗೆ ರವಾನಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಡೇರಿ ಆವರಣದಲ್ಲಿ ಲಾರಿಗಳಿಗೆ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಲಾಯಿತು.

ಮುಂದಿನ ಆರು ತಿಂಗಳ ಕಾಲ ತಿರುಪತಿ ತಿರುಮಲ ಸನ್ನಿಧಾನಕ್ಕೆ ಬಮುಲ್‌ನಿಂದ 20 ಲಕ್ಷ ಕೆ.ಜಿ. ತುಪ್ಪವನ್ನು ಸರಬರಾಜು ಮಾಡಲಾಗುತ್ತದೆ. ಪ್ರತಿವರ್ಷ ಕೆಎಂಎಫ್ ನಿಂದ ತುಪ್ಪ ಸರಬರಾಜು ಮಾಡಲಾಗುತ್ತಿತ್ತು" ಎಂದು ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರು ತಿಳಿಸಿದರು.

ಬೆಂಗಳೂರು ಸಹಕಾರ ಹಾಲು ಒಕ್ಕೂಟ (ಬಮೂಲ್) ಕಚೇರಿಯಲ್ಲಿ ಸುರೇಶ್ ಅವರು ಬುಧವಾರ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿ, ತಿರುಪತಿಗೆ ನಂದಿನಿ ತುಪ್ಪ ಪೂರೈಕೆಗೆ ನಾವು ಟೆಂಡರ್ ಪಡೆದಿದ್ದು, ಇದರ ಮೊತ್ತ 136 ಕೋಟಿ ರೂಪಾಯಿಗಳು. ಪ್ರತಿನಿತ್ಯ 12.5 ಟನ್‌ನಂತೆ ಮುಂದಿನ ಆರು ತಿಂಗಳು ತುಪ್ಪ ಸರಬರಾಜಾಗಲಿದೆ. ಬಮುಲ್ ಒಕ್ಕೂಟ ಟಿಟಿಡಿ ಜೊತೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಂಡು ಈ ಸರಬರಾಜು ಮಾಡುತ್ತಿದೆ. ಗುಣಮಟ್ಟದಲ್ಲಿ, ರುಚಿಯಲ್ಲಿ ನಂದಿನಿ ತುಪ್ಪ ರಾಷ್ಟ್ರ ಮಟ್ಟದಲ್ಲಿ ಹೆಸರನ್ನು ಗಳಿಸಿದೆ ಎಂದರು.

ಸಾಗಾಣಿಕೆಗೆ ಡಿಜಿಟಲ್ ಲಾಕ್ ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ. ನಾವು ಕೊಟ್ಟ ಪಾಸ್‌ವರ್ಡ್ ಅಲ್ಲಿ ನಮೂದಿಸಿದರೆ ಮಾತ್ರ ತೆರೆಯಬಹುದು. ಗ್ರಾಹಕರಿಗೂ ಸಹ ಇದೆ ರೀತಿ ಗುಣಮಟ್ಟದ ಪದಾರ್ಥ ನೀಡುತ್ತಿದ್ದೇವೆ. ಶ್ರೀ ವೆಂಕಟೇಶ್ವರ ಸ್ವಾಮಿ , ಪದ್ಮಾವತಿ ಅಮ್ಮನವರ ಆಶೀರ್ವಾದ ನಮ್ಮ ನಂದಿನಿಯ ಮೇಲೆ ಇರುವ ಕಾರಣಕ್ಕೆ ಇದು ಸಾಧ್ಯವಾಗಿದೆ. ನಂದಿನಿ ಹೆಸರನ್ನು ದುರ್ಬಳಕೆ ಮಾಡಿಕೊಂಡು ಮಾರುಕಟ್ಟೆಯಲ್ಲಿ ಅಕ್ರಮ ಎಸಗುತ್ತಿರುವವರ ವಿರುದ್ಧ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಅಂತಹವರ ವಿರುದ್ಧ ಒಕ್ಕೂಟದಿಂದ ದೂರುಗಳನ್ನು ನೀಡಲಾಗಿದೆ" ಎಂದರು.

"ಗುಣಮಟ್ಟದ ಇಂತಹ ಉತ್ಪನ್ನಗಳ ಬಗ್ಗೆ ಮಾಧ್ಯಮಗಳು ಹೆಚ್ಚು ಪ್ರಚಾರ ನೀಡಬೇಕು. ಇದರಿಂದ ಕರ್ನಾಟಕದ ರೈತರಿಗೆ ಹೆಚ್ಚು ಅನುಕೂಲವಾಗಲಿದೆ. ನಾವು ಈಗ 1 ಕೋಟಿ ಲೀಟರ್ ಹಾಲಿನ ಸಂಗ್ರಹಣೆ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ವಿಶೇಷ ಹಾಲಿನ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುವ ಬಗ್ಗೆ ಆಲೋಚನೆಯಿದೆ" ಎಂದರು.

"ಕನಕಪುರ ಮೆಗಾ ಡೈರಿ ಪ್ಲಾಂಟ್ ಸತತ ಮೂರನೇ ಬಾರಿಗೆ ಸಿಐಐ ಅವಾರ್ಡ್ ಅನ್ನು ಪಡೆದುಕೊಂಡಿದೆ. ಸ್ವಚ್ಛತೆ, ಗುಣಮಟ್ಟ ಕಾಪಾಡಿದ ಒಕ್ಕೂಟದ ಎಲ್ಲಾ ಸಿಬ್ಬಂದಿಗಳಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ. ಹೆಚ್ಚಿನ ತಂತ್ರಜ್ಞಾನ ಬಳಸಿಕೊಂಡು ಗುಣಮಟ್ಟ ಉತ್ಪನ್ನಗಳನ್ನು ಜನರಿಗೆ ನೀಡಬೇಕು. ನಿರ್ದೇಶಕರು ಸೇರಿದಂತೆ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ" ಎಂದರು.

ದರ ಏರಿಕೆ ವಿಚಾರವಾಗಿ ಕೇಳಿದಾಗ, "ಸದ್ಯಕ್ಕೆ ದರ ಏರಿಕೆ ಪ್ರಸ್ತಾವನೆಗಳು ಇಲ್ಲ. ಹಾಲಿನ ದರ ಮಾರುಕಟ್ಟೆಯಲ್ಲಿ ಎಷ್ಟಿದೆ ಎಂದು ಅಧ್ಯಯನ ಮಾಡಲಾಗುವುದು. ನಮ್ಮಲ್ಲೇ ಒಂದಷ್ಟು ಲೋಪದೋಷಗಳಿವೆ. ಅದನ್ನು ಸರಿಪಡಿಸಲು ಸರ್ಕಾರದ ಮುಂದೆ ಅನುಮತಿ ಕೇಳುತ್ತೇವೆ. ಉತ್ಪನ್ನಗಳ ಪ್ಯಾಕಿಂಗ್ ಸಲಕರಣೆಗಳ ಖರೀದಿ ವೆಚ್ಚ ಹೆಚ್ಚಳವಾಗುತ್ತಿದೆ. ಉದಾಹರಣಗೆ ಪ್ಲಾಸ್ಟಿಕ್ ಕ್ರೇಟ್, ಪ್ಯಾಕಿಂಗ್ ಕವರ್. ಅಲ್ಲದೇ ಶುದ್ಧೀಕರಣ ರಾಸಾಯನಿಕಗಳನ್ನು ವಿದೇಶದಿಂದಲೇ ತರಿಸಿಕೊಳ್ಳಲಾಗುತ್ತಿದೆ. ಇದರ ಬಗ್ಗೆ ಕೆಎಂಎಫ್ ಜೊತೆ ಮಾತನಾಡಿ ಮುಂದಿನ ದಿನಗಳಲ್ಲಿ ಏನು ಮಾಡಬೇಕು ಎಂದು ಚಿಂತನೆ ಮಾಡುತ್ತೇವೆ. ಖಾಸಗಿಯವರು ಹಾಲಿನ ದರವನ್ನು 2 ರೂಪಾಯಿ ಹೆಚ್ಚಳ ಮಾಡಿದ್ದಾರೆ. ನಾವು ಸರ್ಕಾರದ ಅಧೀನದಲ್ಲಿ ಇರುವ ಕಾರಣಕ್ಕೆ ಇದನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ನಾವು ಗುಣಮಟ್ಟದ ಪದಾರ್ಥ ನೀಡಬೇಕು ಎನ್ನುವ ಗುರಿ ಹೊಂದಿದ್ದೇವೆ" ಎಂದರು.

"ಮಾರುಕಟ್ಟೆಯಲ್ಲಿ ಅರ್ಧ ಲೀಟರ್ ಹಾಲಿಗೆ ಬೇಡಿಕೆಯಿದೆ. ಅದರ ಬೆಲೆ ಹೆಚ್ಚಿದೆ. ಒಂದು ಲೀಟರ್ ಹಾಲಿನ ಬೆಲೆ ಕಡಿಮೆಯಿದೆ. ಹೊರೆ ಅನ್ನುವುದಿಲ್ಲ. ಏಕೆಂದರೆ ಒಂದೊಂದು ಒಕ್ಕೂಟದಲ್ಲಿ ಒಂದೊಂದು ಹಾಲಿನ ದರವಿದೆ. ಅಲ್ಲದೇ ಮಳೆಗಾಲ ಬಂದ ತಕ್ಷಣ 10–15 ಲಕ್ಷ ಲೀಟರ್ ಹಾಲಿನ ಸರಬರಾಜು ಹೆಚ್ಚಾಗಲಿದೆ. ಕಳೆದ ವರ್ಷ ರಾಜ್ಯದಲ್ಲಿ 1.5 ಕೋಟಿ ಲೀಟರ್ ಹಾಲು ಬರುತಿತ್ತು. ಬಮುಲ್ ನಿಂದ 14 ಲಕ್ಷ ಲೀಟರ್ ಹಾಲನ್ನು ತೆಗೆದುಕೊಳ್ಳುತ್ತಿದ್ದೇವೆ. ಬೇಸಿಗೆಯಲ್ಲಿ 17.5 ಲಕ್ಷ ಲೀಟರ್ ಹಾಲು ಬರುತ್ತಿದೆ. ನಮ್ಮ ಗುರಿ 21 ಲಕ್ಷ ಲೀಟರ್ ಹಾಲು. ನಾವು ಹಾಲಿಗಿಂತ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಮುಂದಾಗುತ್ತಿದ್ದೇವೆ" ಎಂದರು.

ಬಮುಲ್‌ನಿಂದ ತುಪ್ಪವನ್ನು ಏಕೆ ಸರಬರಾಜು ಮಾಡಲಾಗುತ್ತಿದೆ ಎಂದು ಕೇಳಿದಾಗ, "ಸಂಗ್ರಹಣೆ ಮುಖ್ಯವಾದುದು. ಇದಕ್ಕೆ ನಾವು ಕಳೆದ 6 ತಿಂಗಳಿನಿಂದ ತಯಾರಿ ಮಾಡಿಕೊಂಡಿದ್ದೆವು. ನಮ್ಮಲ್ಲಿ ಸರಬರಾಜು ಶಕ್ತಿ ಇಲ್ಲದೇ ಹೋದರೆ ಟೆಂಡರ್ ಪಡೆದ ಮೇಲೆ ಕಷ್ಟ ಪಡಬೇಕಾಗುತ್ತದೆ. ಅದಕ್ಕೆ ಸಿದ್ಧತೆ ಮಾಡಿಕೊಂಡು ನಾವು ಟೆಂಡರ್ ಪಡೆದೆವು" ಎಂದರು.

### ಗಣತಿ ಕಾರ್ಯದಲ್ಲಿ ಭಾಗಿಯಾಗುವಂತೆ ರಜೆಯಲ್ಲಿರುವ ಶಿಕ್ಷಕರಿಗೆ ತಿಳಿಸಿ

# ಬೆಂಗಳೂರಿನ ಶಾಲೆಗೆ ಹೈಕೋರ್ಟ್ ನಿರ್ದೇಶನ, ಶಾಲೆ ವಿರುದ್ಧ ಬಲವಂತದ ಕ್ರಮ ಬೇಡ




**ಬೆಂಗಳೂರು, ಏ.29:** ರಜೆಯಲ್ಲಿರುವ ಶಿಕ್ಷಕರನ್ನು ತಕ್ಷಣ ಕರ್ತವ್ಯಕ್ಕೆ ಹಿಂದಿರುಗಿ ಗಣತಿ ಕಾರ್ಯದಲ್ಲಿ ಭಾಗಿಯಾಗುವಂತೆ ನೋಡಿಕೊಳ್ಳುವಂತೆ ಬೆಂಗಳೂರಿನ ಬ್ರಿಗೇಡ್ ಶಾಲೆಗೆ ಕರ್ನಾಟಕ ಹೈ ಕೋರ್ಟ್ ನಿರ್ದೇಶಿಸಿದ್ದು, ಶಾಲೆಯ ವಿರುದ್ಧ ಬಲವಂತದ ಕ್ರಮಕೈಗೊಳ್ಳದಂತೆ ಜನಗಣತಿ ಆಯುಕ್ತರಿಗೆ ಆದೇಶಿಸಿದೆ.

ಜನಗಣತಿಗೆ ಶಿಕ್ಷಕರನ್ನು ನಿಯೋಜನೆ ಮಾಡದ ಹಿನ್ನೆಲೆಯಲ್ಲಿ ಜೆ ಪಿ ನಗರದ 7ನೇ ಹಂತದಲ್ಲಿರುವ ದಿ ಬ್ರಿಗೇಡ್ ಶಾಲೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಪ್ರಧಾನ ಜನಗಣತಿ ಅಧಿಕಾರಿ ಏ.9ರಂದು ಆದೇಶಿಸಿದ್ದನ್ನು ಪ್ರಶ್ನಿಸಿ ಶಾಲೆಯ ಪ್ರಾಂಶುಪಾಲರಾದ ಶುಭ್ರಾ ಜೈನ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ರಜೆಯಲ್ಲಿರುವ ಶಿಕ್ಷಕರು ಮುಂದಿನ ಒಂದು ವಾರದಲ್ಲಿ ಹಿಂದಿರುಗುವಂತೆ ಸೂಚನೆ ನೀಡಿ, ಜನಗಣತಿ ಆಯುಕ್ತರ ಮುಂದೆ ವರದಿ ಮಾಡಿಕೊಳ್ಳುವುದನ್ನು ಖಾತರಿಪಡಿಸಬೇಕು ಎಂಬ ಷರತ್ತಿನೊಂದಿಗೆ ಶಾಲೆಯ ಪ್ರಾಂಶುಪಾಲರ ವಿರುದ್ಧ ಜನಗಣತಿ ಕಾಯಿದೆಯ ಸೆಕ್ಷನ್ 11ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸುವಂತಹ ಕ್ರಮಕ್ಕೆ ಮುಂದಾಗ ಬಾರದು ಎಂದು ನ್ಯಾಯಾಲಯ ಆದೇಶಿಸಿದೆ.

ಜನಗಣತಿ 10 ರಿಂದ 11 ವರ್ಷಗಳಿಗೊಮ್ಮೆ ನಡೆಯುತ್ತದೆ. ಪ್ರತಿ ಮನೆಗೂ ಭೇಟಿ ನೀಡಿ ಮಾಹಿತಿ ಪಡೆದು ವಿವರಗಳನ್ನು ಲಿಖಿತವಾಗಿ ದಾಖಲಿಸಿ ಕೊಳ್ಳಬೇಕಾಗುತ್ತದೆ.

ಹೀಗಿರುವಾಗ, ಶಾಲೆಯ ಮುಖ್ಯಸ್ಥರೇ ಈ ರಿತಿಯಲ್ಲಿ ವರ್ತಿಸಲು ಪ್ರಾರಂಭಿಸಿದರೆ, ಸರ್ಕಾರ ಗಣತಿ ಕಾರ್ಯ ಪೂರ್ಣಗೊಳಿಸುವುದಾದರೂ ಹೇಗೆ ಎಂದು ಖಾರವಾಗಿ ಪ್ರಶ್ನಿಸಿದ ಪೀಠವು ಮುಂದಿನ ವಿಚಾರಣೆ ವೇಳೆಗೆ ಅರ್ಜಿದಾರರ ಶಾಲೆಯಲ್ಲಿ ಲಭ್ಯವಿರುವ ಶಿಕ್ಷಕರ ಪಟ್ಟಿಯನ್ನು ಒದಗಿಸಬೇಕು ಎಂದು ತಾಕೀತು ಮಾಡಿ ನೀಡಿ ವಿಚಾರಣೆ ಮುಂದೂಡಿದೆ.

# ತಕ್ಷಣ ನೋಡಿದರೂ ಬೆಂಗಳೂರಿನಲ್ಲಿ 25 ಸಾವಿರ ಗುಂಡಿಗಳಿವೆ: ಒಂದು ಗುಂಡಿ ಮುಚ್ಚಲು ಲಕ್ಷ ರೂ. ಖರ್ಚು: ಛಲವಾದಿ ನಾರಾಯಣಸ್ವಾಮಿ ಆಕ್ಷೇಪ

**ಬೆಂಗಳೂರು, ಏ.29:** ನಗರದ ಚಾಮರಾಜಪೇಟೆಯ ರಸ್ತೆಗಳಲ್ಲಿ 150 ಗುಂಡಿ ಇದ್ದು, 140 ಗುಂಡಿ ಮುಚ್ಚಲು 1.40 ಕೋಟಿ ಖರ್ಚು ಮಾಡಿದ್ದಾರೆ. ಒಂದು ಗುಂಡಿ ಮುಚ್ಚಲು 1 ಲಕ್ಷ ಖರ್ಚು ಮಾಡಿದ್ದಾಗಿ ತೋರಿಸಿದ್ದಾರೆ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಒಂದು ಗುಂಡಿ 20, 10 ಅಡಿ ಅಥವಾ 5 ಅಡಿ ಇರಬಹುದೇ. ಇವರಿಗೆ ನಾಚಿಕೆ ಆಗುವುದಿಲ್ಲವೇ ಎಂದು ಪ್ರಶ್ನಿಸಿದರು. ಜನ ಕಣ್ಮುಚ್ಚಿ ಕುಳಿತಿದ್ದಾರೆಂದು ತಿಳಿದಿದ್ದೀರಾ. ನೀವು ಹಾಕುವುದು ತೇಪೆ ಕೆಲಸ. ಗರಿಷ್ಠ 5 ಸಾವಿರ ಆದೀತು. ಒಂದು ಲಕ್ಷ ಲೆಕ್ಕ ತೋರಿಸಿದ್ದಾರೆ ಎಂದು ದೂರಿದರು. ರಾಜಾಜಿನಗರದಲ್ಲಿ 250 ಗುಂಡಿ ಪೈಕಿ 232 ಮುಚ್ಚಿದ್ದು, 60,344 ರೂ. ಸರಾಸರಿ ಲೆಕ್ಕ ತೋರಿಸಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಗೋವಿಂದರಾಜನಗರ– 374 ಗುಂಡಿಯಲ್ಲಿ 366 ಮುಚ್ಚಿದ್ದು, 1 ಕೋಟಿ 80 ಲಕ್ಷ ಅಂದರೆ ಪ್ರತಿ ಗುಂಡಿಗೆ 49 ಸಾವಿರ ಖರ್ಚು ತೋರಿಸಿದ್ದಾರೆ. ಜಯನಗರದಲ್ಲಿ 403ರ ಪೈಕಿ 382 ಮುಚ್ಚಿದ್ದಾಗಿ ತಿಳಿಸಿದ್ದು, 47 ಸಾವಿರ ಖರ್ಚಾದುದಾಗಿ ತಿಳಿಸಿದ್ದಾರೆ. ಇಲ್ಯಾಕೆ ಒಂದು ಲಕ್ಷಕ್ಕಿಂತ ಕಡಿಮೆ ಮಾಡಿದ್ದಾರೆ ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರು. ರಿಯಲ್ ಎಸ್ಟೇಟ್ ಮಾದರಿಯಲ್ಲಿ ಒಂದೊಂದು ಪ್ರದೇಶಕ್ಕೆ ಒಂದೊಂದು ದರ ನಿಗದಿ ಮಾಡಿದ್ದಾರಾ ಎಂದು ಕೇಳಿದರು.

ವಿಜಯನಗರ– 47 ಸಾವಿರ, ಗಾಂಧಿನಗರಕ್ಕೆ ಬಂದರೆ 31 ಸಾವಿರ, ಅಲ್ಲಿ ಸ್ಲಂಗಳಿವೆಯಲ್ಲವೇ ಅದಕ್ಕೆ ದರ ಕಡಿಮೆ ಎಂದು ತಿಳಿಸಿದರು. ಒಟ್ಟು 33.85 ಕೋಟಿ ಖರ್ಚಾಗಿದೆ. ಆದರೆ, ಈಗ ಹೋಗಿ ನೋಡಿದರೂ 25 ಸಾವಿರ ಗುಂಡಿಗಳಿವೆ ಎಂದು ಸವಾಲು ಹಾಕಿದರು.



ಗುಂಡಿಗಳ ಕಾರಣ ಅಪಘಾತಗಳಲ್ಲಿ ಎಷ್ಟು ಜನರು ಸತ್ತಿದ್ದಾರೆಂದು ಕೇಳಿದರೆ, ಇವರ ಪ್ರಕಾರ ಅದು ಸೊನ್ನೆ ಎಂದು ಟೀಕಿಸಿದರು. ಗಂಭೀರ ಗಾಯಾಳುಗಳ ಪ್ರಕರಣದ ಸಂಖ್ಯೆಯೂ ಸೊನ್ನೆ ಎಂದು ಗಮನ ಸೆಳೆದರು. ಪರಿಹಾರ ನೀಡಿದ ಪ್ರಕರಣಗಳ ಸಂಖ್ಯೆಯೂ ಸೊನ್ನೆ. ಅಂದರೆ ಏನೂ ಆಗಿಯೇ ಇಲ್ಲವೇ ಬೆಂಗಳೂರಿನಲ್ಲಿ ಎಂದು ಕೇಳಿದರು. ರಾಜ್ಯ ವಕ್ತಾರ ಮೋಹನ್ ವಿಶ್ವ, ಜಿಲ್ಲಾ ವಕ್ತಾರ ಬಿ.ವಿ.ಗಣೇಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದರು.

**ಕಣ್ಣು ಸರಿಮಾಡಿಸಿಕೊಳ್ಳಿ..**

ಕರ್ನಾಟಕದಲ್ಲಿ ಪ್ರತಿದಿನ ಸರಾಸರಿ 31 ಜನರು ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪುತ್ತಿದ್ದು, 86 ಮಂದಿ ಗಾಯಗೊಳ್ಳುತ್ತಿದ್ದಾರೆಂದು ಈಚಿನ ಅಧ್ಯಯನ ತಿಳಿಸಿದೆ. ಬೆಂಗಳೂರಿನಲ್ಲಿ ಈ ಗುಂಡಿಗಳಿಂದ 891 ಜನರು ಸಾವನ್ನಪ್ಪಿದ್ದಾರೆ ಎಂಬ ವರದಿಯ ಅಂಕಿಅಂಶಗಳನ್ನು ಗಮನಕ್ಕೆ ತಂದರು. ಅಧಿಕಾರಿಗಳೇ ನಿಮ್ಮ ಕಣ್ಣುಗಳಿಗೆ ತೊಂದರೆ ಇದ್ದರೆ ಚಿಕಿತ್ಸೆ ಪಡೆಯಿರಿ ಎಂದು ಚಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.

**ರಸ್ತೆಗಳಲ್ಲಿ ರಾಶಿ ಕಸ**

ಸುಳ್ಳು, ವಂಚನೆ ಈ ಸರಕಾರದ್ದು, ಕಸ ಸಂಗ್ರಹಕ್ಕೆ ಸೆಸ್ ಹಾಕಿದ್ದಾರೆ. ಕಸ ಸಂಗ್ರಹ ನಡೆಯುತ್ತಿಲ್ಲ. ಬೀದಿಬೀದಿಯಲ್ಲಿ ಕಸದ ರಾಶಿ ಬಿದ್ದಿದೆ ಎಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ತೋರಿಸಿ ಗಮನ ಸೆಳೆದರು. ಮೊದಲು 198 ವಾರ್ಡ್‌ಗಳಿದ್ದವು. 33 ತ್ಯಾಜ್ಯ ನಿರ್ವಹಣಾ ಪ್ಯಾಕೇಜ್ ಮಾಡಿದ್ದರು. ಈಗ ಬೆಂಗಳೂರನ್ನು 5 ಭಾಗ ಮಾಡಿದ್ದು ಪ್ಯಾಕೇಜ್ ಕೂಡ 5 ಭಾಗ ಆಗಬೇಕಲ್ಲವೇ? ಅದು ಯಾಕಿಲ್ಲ ಎಂದು ಕೇಳಿದರು.

**5 ವರ್ಷದ ಕಿಕ್‌ಬ್ಯಾಕ್ ಈಗಲೇ ಪಡೆದುಕೊಳ್ಳಲು ಮುಂದಾಗಿದ್ದಾರೆ**

ತ್ಯಾಜ್ಯ ನಿರ್ವಹಣೆ ವೆಚ್ಚ ಒಂದು ವರ್ಷಕ್ಕೆ 544 ಕೋಟಿ ಇದೆ. 33 ಪ್ಯಾಕೇಜಿಗೆ ಟೆಂಡರ್ ಹಾಕಿದ್ದಾರೆ. ಟೆಂಡರ್ ಹಾಕುವಾಗ ಶೇ.14ರಷ್ಟು ಹೆಚ್ಚು ಮಾಡಿದ್ದಾರೆ. ಅವಕಾಶ ಇಲ್ಲದೇ ಇದ್ದರೂ ಅದನ್ನೇ ಶಿಫಾರಸು ಮಾಡಿದ್ದಾರೆ. 33 ತ್ಯಾಜ್ಯ ನಿರ್ವಹಣಾ ಪ್ಯಾಕೇಜ್‌ಗಳಲ್ಲಿ 544 ಕೋಟಿಯನ್ನು ಶೇ.14 ಹೆಚ್ಚಿಸಿದರೆ 62 ಕೋಟಿ ಹೆಚ್ಚಾಗಲಿದೆ. ಇದನ್ನು 7 ವರ್ಷಕ್ಕೆ ಟೆಂಡರ್ ಕರೆದಿದ್ದಾರೆ. 7 ವರ್ಷಕ್ಕೆ ಟೆಂಡರ್ ಕರೆಯಲು ಇವರು ಯಾರು ಎಂದು ಪ್ರಶ್ನಿಸಿದ ಚಲವಾದಿ ನಾರಾಯಣಸ್ವಾಮಿ, ಕಾಂಗ್ರೆಸ್ ಸರಕಾರ ಇನ್ನೆರಡು ವರ್ಷ ಇರಲಿದೆ. ಮುಂದಿನ 5 ವರ್ಷದ ಕಿಕ್‌ಬ್ಯಾಕ್ ಅನ್ನು ಈಗಲೇ ಪಡೆದುಕೊಳ್ಳಲು ಮುಂದಾಗಿದ್ದಾರೆ ಎಂದು ದೂರಿದರು.

# ಸಿಇಟಿ: ವಿಶೇಷ ವರ್ಗಗಳ ದಾಖಲೆ ಸಲ್ಲಿಸಲು ಮೇ.5 ರಿಂದ ಅವಕಾಶ




**ಬೆಂಗಳೂರು, ಏ.29**: 2026ನೇ ಸಾಲಿನ ಸಿಇಟಿ ಅರ್ಜಿಯಲ್ಲಿ ಕ್ರೀಡೆ, ರಕ್ಷಣೆ, ಎನ್ ಸಿಸಿ ಇತ್ಯಾದಿ ವಿಶೇಷ ವರ್ಗಗಳನ್ನು ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ಮೇ 5ರಿಂದ 15 ರವರೆಗೆ ತಮ್ಮ ಮೂಲ ದಾಖಲೆಗಳನ್ನು ವೇಳಾಪಟ್ಟಿ ಪ್ರಕಾರ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಅವರು ಸೂಚಿಸಿದ್ದಾರೆ.

ಪ್ರತಿದಿನ ಬೆಳಿಗ್ಗೆ 9.30ರಿಂದ ಸಂಜೆ 5.30ರವರೆಗೆ ಬೆಂಗಳೂರಿನ ಮಲ್ಲೇಶ್ವರದಲ್ಲಿನ ಕೆಇಎ ಕಚೇರಿಗೆ ಬಂದು ಮೂಲ ದಾಖಲೆ ಹಾಗೂ ಎರಡು ಸೆಟ್ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಬೇಕು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೇ 5ರಿಂದ 7ರವರೆಗೆ ಕ್ರೀಡಾ ಕೋಟಾದ ಅಭ್ಯರ್ಥಿಗಳು ದಾಖಲೆ ಸಲ್ಲಿಸಬೇಕು. ಸಿಎಪಿಎಫ್, ಸಿಆರ್ ಪಿಎಫ್, ಸಿಐಎಸ್‌ಎಫ್, ಬಿಎಸ್‌ಎಫ್, ಐಟಿಬಿಪಿ ಕ್ಲೇಮ್ ಮಾಡಿರುವವರು ಮೇ 8 ರಂದು ಬರಬೇಕು. ಮಾಜಿ ಸೈನಿಕ/ಮಾಜಿ ಸಿಎಪಿಎಫ್ ಕ್ಲೇಮ್ ಮಾಡಿರುವವರು ಮೇ 9 ಮತ್ತು 10ರಂದು ಹಾಗೂ ಡಿಫೆನ್ಸ್ ಕೋಟಾ ಕ್ಲೇಮ್ ಮಾಡಿರುವವರು ಮೇ 11 ಮತ್ತು 12ರಂದು ದಾಖಲೆ ಸಲ್ಲಿಸಬೇಕು. ಮೇ 13ರಂದು ಸ್ಕೌಟ್ಸ್ ಆ?ಯಂಡ್ ಗೈಡ್ಸ್/ ಆಂಗ್ಲೋ–ಇಂಡಿಯನ್ ಹಾಗೂ ಮೇ 14 ಮತ್ತು 15ರಂದು ಎನ್ ಸಿಸಿ ಕ್ಲೇಮ್ ಮಾಡಿರುವರು ದಾಖಲೆ ಸಲ್ಲಿಸಬೇಕು ಎಂದು ಅವರು ವಿವರಿಸಿದ್ದಾರೆ.

ಹೆಚ್ಚಿನ ವಿವರಗಳಿಗೆ ಕೆಇಎ ವೆಬ್ ಸೈಟ್‌ಗೆ ಭೇಟಿ ನೀಡಲು ಅವರು ಕೋರಿದ್ದಾರೆ.



ಬೆಂಗಳೂರಿನ ಪ್ಯಾಲೇಸ್ ಗುಟ್ಟಹಳ್ಳಿ ರಸ್ತೆಯಲ್ಲಿ ಬುಧವಾರ ಬಿರುಸಿನ ಮಳೆಗೆ ಮರ ಉರುಳಿಬಿದ್ದಿದೆ.

# ಒಳಮೀಸಲಾತಿ ಗೊಂದಲ ಬಗೆಹರಿಯುವ ತನಕ ನೇಮಕಾತಿ ಸ್ಥಗಿತಗೊಳಿಸಿ

**ಬೆಂಗಳೂರು, ಏ.29:** ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಅನುಷ್ಠಾನಕ್ಕೆ ಸಂಬಂಧಿಸಿದ 400 ಬಿಂದುಗಳ ವರ್ತುಲ ಸ್ಪಷ್ಟೀಕರಣ ನೀಡುವ ಜೊತೆಗೆ ಶೇ 3ಕ್ಕಿಂತ ಕಡಿಮೆ ಹುದ್ದೆಗಳ ವಿಚಾರದಲ್ಲಿ ಕಾನೂನುಬದ್ಧ ತಿದ್ದುಪಡಿ ಮಾಡಿ ಸ್ಪಷ್ಟವಾಗಿ ನಿಯಮಗಳನ್ನು ರೂಪಿಸಿ ಜಾರಿಗೆ ತರಲು ಆದ್ಯತೆ ನೀಡಬೇಕೆಂದು ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರನ್ನು ಕರ್ನಾಟಕ ರಾಜ್ಯ ಯುವ ಸಮೂಹ ಒತ್ತಾಯಿಸಿದೆ.

ಈ ಸಂಬಂಧ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿರುವ ಕರ್ನಾಟಕ ರಾಜ್ಯ ಯುವ ಸಮೂಹದ ರಾಜ್ಯಾಧ್ಯಕ್ಷ ಎಸ್. ಸಂಗಮೇಶ್, ಗೊಂದಲಗಳು ಬಗೆಹರಿಯುವ ತನಕ ಒಳಮೀಸಲಾತಿ ಅನ್ವಯಿಸಿ ಯಾವುದೇ ನೇಮಕಾತಿ ನಡೆಸಬಾರದು. ಸಂವಿಧಾನದ 14, 15(4), 16(1), 16(4) ಹಾಗೂ 46ರಂತೆ, ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಒಂದು ಸಾಮಾಜಿಕ ನ್ಯಾಯದ ಅವಿಭಾಜ್ಯ ಅಂಗವಾಗಿದೆ. ರಾಜ್ಯ ಸರ್ಕಾರ ಈ ದಿಕ್ಕಿನಲ್ಲಿ ಆದೇಶ ಹೊರಡಿಸಿ ರುವುದು ಸ್ವಾಗತಾರ್ಹವಾದ ಹೆಜ್ಜೆಯಾಗಿದೆ ಎಂದಿದ್ದಾರೆ.

ಆದಾಗ್ಯೂ, ಪ್ರಸ್ತುತ ಆದೇಶದ ಕೆಲವು ವಿಧಾನಗಳು ಸ್ಪಷ್ಟತೆ ಕೊರತೆಯಿಂದ ಹಾಗೂ ಕಾನೂನುಬದ್ಧ ದುರ್ಬಲತೆಯಿಂದ, ಪರಿಣಾಮಕಾರಿ ಅನುಷ್ಠಾನಕ್ಕೆ ಅಡ್ಡಿಯಾಗುವ ಸಾಧ್ಯತೆ ಇದೆ. 400 ಬಿಂದುಗಳ ವರ್ತುಲದಲ್ಲಿ ಸ್ಪಷ್ಟ ಮಾರ್ಗಸೂಚಿ ಅಗತ್ಯವಾಗಿದೆ. ಆದೇಶದಲ್ಲಿ ?400 ಪಾಯಿಂಟ್ ರೋಸ್ಟರ್ ಶಲ್ ಬಿ ಫಾಲೋವ್ಡ್? ಎಂದು ಮಾತ್ರ ಉಲ್ಲೇಖವಾಗಿದ್ದು, ಅದರ ಕಾರ್ಯನಿರ್ವಹಣಾ ಚೌಕಟ್ಟು ಸ್ಪಷ್ಟಪಡಿಸಿಲ್ಲ ಎಂದು ಎಸ್. ಸಂಗಮೇಶ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಗೆ ಸಂಬಂಧಿಸಿದ 400–ಬಿಂದುಗಳ ವರ್ತುಲ ಸ್ಪಷ್ಟೀಕರಣ ಹಾಗೂ 3ಕ್ಕಿಂತ ಕಡಿಮೆ ಹುದ್ದೆಗಳು ನಿಯಮಗಳಿಗೆ ತಿದ್ದುಪಡಿ ಮಾಡಬೇಕು. ಈ ನಿಬಂಧನೆಗಳ ಮೂಲಕ ಹುದ್ದೆಗಳನ್ನು ಕೃತಕವಾಗಿ ವಿಭಜಿಸಿ ಒಳಮೀಸಲಾತಿಯನ್ನು ತಪ್ಪಿಸುವ ಆತಂಕವಿದೆ. ಇದು ಪರೋಕ್ಷ ಭೇದಭಾವಕ್ಕೆ ಕಾರಣವಾಗುವುದಷ್ಟೇ ಅಲ್ಲದೇ, ಕಾನೂನಿನ ಆತ್ಮವನ್ನೇ ಹಾಳುಮಾಡುವ ಲೋಪವಾಗಿ ಪರಿಣಮಿಸಬಹುದು. ಹೀಗಾಗಿ 400–ಬಿಂದುಗಳ ವರ್ತುಲಕ್ಕೆ ಸ್ಪಷ್ಟ ಎಸ್‌ಓಪಿ ಪ್ರಕಟಿಸಬೇಕು. ಪರಿಶಿಷ್ಟ ಜಾತಿಗಳ ಉಪವರ್ಗಗಳಿಗೆ ವೈಜ್ಞಾನಿಕವಾಗಿ ಹಂಚಿಕೆ ಮಾಡಬೇಕು. ರೋಟೇಷನ್, ಬ್ಯಾಕ್ಲಾಗ್ ಮತ್ತು ಕ್ಯಾರಿ–ಫಾರ್ವರ್ಡ್ ನಿಯಮಗಳನ್ನು ಸ್ಪಷ್ಟಪಡಿಸಬೇಕು ಎಂದು ಹೇಳಿದ್ದಾರೆ.

# ಜೇವರ್ಗಿ-ಯಡ್ರಾಮಿ ತಾಲ್ಲೂಕುಗಳ ಕುಡಿಯುವ ನೀರಿಗಾಗಿ 3.65 ಕೋಟಿ ತುರ್ತು ಅನುದಾನ: ಡಾ.ಅಜಯಸಿಂಗ್



**ಕಲಬುರಗಿ, ಏ. 29:** ಬೇಸಿಗೆಯ ಬಿಸಿಲ ತಾಪ ಹೆಚ್ಚುತ್ತಿರುವ ಹಿನ್ನೆಲೆ ಜಿಲ್ಲೆಯ ಜೇವರ್ಗಿ ಮತ್ತು ಯಡ್ರಾಮಿ ತಾಲ್ಲೂಕುಗಳಲ್ಲಿ ತೀವ್ರಗೊಳ್ಳುತ್ತಿರುವ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ತುರ್ತು ಕಾಮಗಾರಿಗಳಿಗಾಗಿ 3.65 ಕೋಟ ರೂ.ಗಳ ಅನುದಾನವನ್ನು ಮೀಸಲಿಡಲಾಗಿದೆ ಎಂದು ಕ್ಷೇತ್ರದ ಶಾಸಕರೂ ಆದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಹೇಳಿದರು.

ನಗರದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕಚೇರಿ ಸಭಾಂಗಣದಲ್ಲಿ ಜರುಗಿದ ಜೇವರ್ಗಿ ಮತ್ತು ಯಡ್ರಾಮಿ ತಾಲ್ಲೂಕು ಮಟ್ಟದ ಅಧಿಕಾರಿಗಳಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯು ಜೇವಗಿ ತಾಲ್ಲೂಕಿನಲ್ಲಿ ಹಮ್ಮಿಕೊಂಡಿರುವ 49 ಕಾಮಗಾರಿಗಳಿಗೆ 12.17 ತಾಲ್ಲೂಕಿನಲ್ಲಿ 33 ಕಾಮಗಾರಿಗಳಿಗೆ ಅಂದಾಜು 21.48 ಕೋಟಿ ವೆಚ್ಚ ಮಾಡಲಾಗುತ್ತಿದೆ. ಯಡ್ರಾಮಿ ತಾಲ್ಲೂಕಿನ 82 ಕಾಮಗಾರಿಗಳಿಗೆ 23.65 ಕೋಟಿ ಖರ್ಚು ಮಾಡಲಾಗುತ್ತಿದೆ ಎಂದರು.

ಬೇಸಿಗೆಯಲ್ಲಿ ಯಾವುದೇ ಗ್ರಾಮ, ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಉಂಟಾಗಬಾರದು. ಅಧಿಕಾರಿಗಳು ಮೊಬೈಲ್‌ಗಳನ್ನು ಸ್ವಿಚ್‌ಆಫ್ ಮಾಡದೆ ಕೇಂದ್ರ ಸ್ಥಾನದಲ್ಲಿದ್ದು ಸಾರ್ವ ಜನಿಕರ ಸಮಸ್ಯೆಗಳಿಗೆ ಸ್ಪಂದಿಸಬೇಕು. ರಾಜ್ಯ ಸರ್ಕಾರ ಕಲಬುರ್ಗಿ ಜಿಲ್ಲೆಗೆ 12 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿದ್ದು, ಹೆಚ್ಚಿನ ಅನುದಾನಕ್ಕಾಗಿ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ನೀರಿನ ತೀವ್ರ ಅಭಾವವಿರುವ ಪ್ರತಿ ತಾಲ್ಲೂಕಿನ 8 ಗ್ರಾಮಗಳಲ್ಲಿ ಖಾಸಗಿ ಬೋರವೆಲ್ಲುಗಳನ್ನು ಬಾಡಿಗೆಗೆ ಪಡೆಯಲು ತಲಾ 6 ಲಕ್ಷ ರೂ.ಗಳನ್ನು ಮೀಸಲಿಡಲಾಗಿದೆ. ಅಂದೋಲಾ, ಆಲೂರು ಮತ್ತು ಅರಳಗುಂಡಗಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಹೊಸ ಬೋರವೆಲ್ಲುಗಳನ್ನು ಕೊರೆಸಿ ಮೋಟಾರ್ ಅಳವಡಿಸಲು ಸಭೆಯಲ್ಲಿ ಶಾಸಕರು ನಿರ್ದೇಶನ ನೀಡಿದರು.

ಗ್ರಾಮಗಳಲ್ಲಿ ವಿದ್ಯುತ್ ಈ ಕಲ್ಪಿಸುವ ಕಾಮಗಾರಿ ಕೈಗೊಳ್ಳಬೇಕು. ಸೊನ್ನ ಗ್ರಾಮದಲ್ಲಿ ಬಾವಿ ಹೂಳೆತ್ತಲು 10 ಲಕ್ಷ ರೂ.ಗಳನ್ನು ಟ್ಯಾಂಕರ್ ಮೂಲಕ ನೀರು ಸರಬರಾಜು, ಪೈಪ್‌ಲೈನ್ ದುರಸ್ತಿ ಹಾಗೂ ಜಾನುವಾರುಗಳಿಗೆ ಗೋಕಟ್ಟೆ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು. ದಶಕಗಳಿಂದ ಕಾಡುತ್ತಿರುವ ನೀರಿನ ಸಮಸ್ಯೆ ಶಾಶ್ವತ ಪರಿಹರಿಸಲು ಆಲೂರ, ಕೂಡಿ ಮತ್ತು ಯಾಳವಾರ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು 2027ರ ಫೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ಅವರು ಸೂಚಿಸಿದರು.

ಸರ್ಕಾರದ ಇಟಗಾ-ಕೆ ಮತ್ತು ಇಟಗಾ ಯೋಜನೆಗಳನ್ನು ಪುನಶ್ಚೇತನಗೊಳಿಸಲು ಹಂತದಲ್ಲಿ ಅನುದಾನ ತರುವ ಕುರಿತು ಶಾಸಕರು ಭರವಸೆ ನೀಡಿದರು.



ಬೆಂಗಳೂರಿನಲ್ಲಿ ಬುಧವಾರ ಸುರಿದ ಭಾರಿ ಮಳೆಯಿಂದಾಗಿ ಎಂಎಸ್‌ಆರ್ ನಗರದಲ್ಲಿ ಮರವೊಂದು ಎಸ್‌ಯುವಿ ವಾಹನದ ಮೇಲೆ ಬಿದ್ದಿದೆ.

## ಪ್ರಸನ್ನಾನಂದ ಸ್ವಾಮೀಜಿಯವರು ತುಲಾಭಾರ ಕಾರ್ಯಕ್ರಮದಲ್ಲಿ ಭಾಗಿಯಾದ ಎಂ.ಎಸ್.ಸಿದ್ದಪ್ಪ



**ಬಳ್ಳಾರಿ ಏ.29:** ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ತೆಕ್ಕಲಕೋಟೆ ಪಟ್ಟಣದಲ್ಲಿ ವಾಲ್ಮೀಕಿ ನಗರದಲ್ಲಿ ನೂತನ ಆಂಜನೇಯ ಸ್ವಾಮಿಯ ದೇವಸ್ಥಾನ ಮತ್ತು ಮೂರ್ತಿ ಪ್ರತಿಷ್ಠಾಪನೆಗೆ ಶ್ರೀ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠ ರಾಜನಹಳ್ಳಿ ಪೀಠಾಧಿಪತಿಗಳಾದ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರು ತುಲಭಾರ ಕಾರ್ಯಕ್ರಮ ಮತ್ತು ಪ್ರತಿಷ್ಠಾಪನೆಯಲ್ಲಿ ಬಿಜೆಪಿ ಯುವಮೋರ್ಚಾ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪನವರು ಭಾಗವಹಿಸಿ ಆಂಜನೇಯ ಸ್ವಾಮಿಯ ದರ್ಶನ ಪಡೆದು ನಂತರ ಪೂಜ್ಯ ಗುರುಗಳ ಆಶೀರ್ವಾದ ಪಡೆದರು.

ವಾಲ್ಮೀಕಿ ಮಹಾಸಭಾ ತಾಲೂಕ್ ಅಧ್ಯಕ್ಷ ಉಡೆಗೋಳ ನರಸಿಂಹ ನಾಯಕ, ಸಮಾಜದ ಮುಖಂಡ ನರೇಂದ್ರ, ಸಿಂಹ, ಪಿ ತಿಮ್ಮಪ್ಪ, ನಾಗಪ್ಪ, ದೇವೇಂದ್ರ, ಚಿದಾನಂದಪ್ಪ, ಸಿದ್ದಪ್ಪ, ಲಚ್ಚಪ್ಪ, ಮಾರಪ್ಪ, ಚಿದಾನಂದ, ಪಂಪಣ್ಣ ಮತ್ತು ಸಮಾಜದ ಮುಖಂಡರು ಉಪಸ್ಥಿತರಿದ್ದರು.

## ಕಾರ್ಮಿಕರ ಹಿತಾಸಕ್ತಿಗೆ ಮಜ್ದೂರ ಸಂಘದ ಧ್ವನಿ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸಲಿ: ರಮೇಶ ಬಿರಾದಾರ




**ಬೀದರ್, ಏ. 29:** ಮಜದೂರ್ ಸಂಘವು ರಾಷ್ಟ್ರ ವ್ಯಾಪಿಯಾಗಿ ಪಸರಿಸಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಕಾರ್ಮಿಕರ ನೈಜ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸಿ, ಸಾಧ್ಯವಾದ ಮಟ್ಟಿಗೆ ಅವುಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಹಿರಿಯ ಸಾಹಿತಿ ರಮೇಶ್ ಬಿರಾದಾರ್ ಅವರು ಅಭಿಪ್ರಾಯಪಟ್ಟರು.

ದತ್ತೋಪಂಥ ಠೇಂಗಡಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕಾರ್ಯಕ್ರಮ ಉದ್ಘಾಟಿಸಿ, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್. ಎಲ್. ವಿಶ್ವನಾಥ್ ಅವರು ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತ ಹೋರಾಟದ ಅಗತ್ಯವನ್ನು ಒತ್ತಿ ಹೇಳಿದರು.

ಕಾರ್ಮಿಕರು ಒಗ್ಗಟ್ಟಿನಿಂದ ಸಂಘಟನೆಯಡಿ ಕಾರ್ಯ ನಿರ್ವಹಿಸಿದರೆ ಮಾತ್ರ ತಮ್ಮ ಹಕ್ಕುಗಳನ್ನು ಸಮರ್ಥವಾಗಿ ಸಾಧಿಸಬಹುದು. ಸಂಘಟನೆಯ ಬಲವರ್ಧನೆಗೆ ಸದಸ್ಯರ ಸಕ್ರಿಯ ಭಾಗವಹಿಸುವಿಕೆ, ಜಾಗೃತಿ ಕಾರ್ಯಕ್ರಮಗಳು ಮತ್ತು ನಾಯಕತ್ವದ ದೃಢ ನಿರ್ಧಾರಗಳು ಅವಶ್ಯಕವೆಂದು ಅವರು ಈ ಸಂದರ್ಭದಲ್ಲಿ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಕೀಲರಾದ ಬಸವರಾಜ್ ಬುಳ್ಳಾ ಕಂಗನಕೋಟ ಅವರು ಮಾತನಾಡಿ ಕಾರ್ಮಿಕರ ಸಂಘವು ಅವರ ಹಕ್ಕುಗಳ ರಕ್ಷಣೆಗೆ ಪ್ರಮುಖ ವೇದಿಕೆಯಾಗಿದ್ದು, ಸಂಘಟಿತ ಶಕ್ತಿಯೇ ಕಾರ್ಮಿಕರ ಬಲ ಎಂದು ಹೇಳಿದರು. ಸಮಾಜದ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಅವರ ಶ್ರಮವೇ ದೇಶದ ಆರ್ಥಿಕ ಪ್ರಗತಿಗೆ ಬುನಾದಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಂಘದ ಮೂಲಕ ಕಾರ್ಮಿಕರಿಗೆ ನ್ಯಾಯಸಮ್ಮತ ಹಕ್ಕುಗಳು ದೊರಕುವಂತೆ ಎಲ್ಲರೂ ಒಗ್ಗಟ್ಟಿನಿಂದ ಪ್ರಯತ್ನಿಸಬೇಕು ಎಂದು ಅಧ್ಯಕ್ಷೀಯ ನುಡಿಯಲ್ಲಿ ಕರೆ ನೀಡಿದರು. ಸತ್ಯಕುಮಾರ್ ಚಾಂಡಾಸುರ್, ಇತರರು ಅನೇಕರು ವೇದಿಕೆ ಮೇಲಿದ್ದರು. ಇದಕ್ಕೂ ಮುನ್ನ ಗಣೇಶ್ ಮೈದಾನದಿಂದ ಸರಸ್ವತಿ ಶಾಲೆಯವರೆಗೆ ನಡೆದ ಶೋಭಾಯಾತ್ರೆ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು. ವಿವಿಧ ಧ್ವಜಗಳ ಘೋಷಣೆಗಳೊಂದಿಗೆ ಮೆರವಣಿಗೆ ಗಮನಸೆಳೆಯಿತು.

# ಎಸ್‌ಟಿ ಪ್ರಮಾಣಪತ್ರಕ್ಕಾಗಿ ಹೋರಾಟ, ಕೇಸ್ ಹಾಕಿ ಹೋರಾಟ ಹತ್ತಿಕ್ಕುವ ಪ್ರಯತ್ನ: ರಾಜಕುಮಾರ ಪಾಟೀಲ್



**ಕಲಬುರಗಿ, ಏ. 29:** ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ತಳವಾರ ಸಮುದಾಯದವರಿಗೆ ಎಸ್‌ಟಿ ಪ್ರಮಾಣಪತ್ರ ನೀಡುವ ಕುರಿತಂತೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಆರಂಭಿಸಿದ್ದ ಮಾಡು ಇಲ್ಲವೇ ಮಡಿ ಹೋರಾಟವನ್ನು ಹತ್ತಿಕ್ಕಲು, ಜಿಲ್ಲಾ ಉಸ್ತುವರಿ ಸಚಿವರು ಪೋಲಿಸರ ಮೂಲಕ ಹೋರಾಟಗಾರರನ್ನು ಅತ್ಯಂತ ಅಮಾನವೀಯ ರೀತಿಯಲ್ಲಿ ರಾತ್ರಿ ಬಂಧಿಸಿದ್ದಾರೆ. ಇದು ಖಂಡನೀಯ. ಎಷ್ಟೇ ಹೋರಾಟ ಹತ್ತಿಕ್ಕಿದರೂ ಸಹ ನಾವು ಮಾತ್ರ ಹೋರಾಟ ಬಿಡೆವು. ಈ ಸಂಬಂಧ ನಗರದ ಕೋಲಿ ಭವನದಲ್ಲಿ ಉಭಯ ಜಿಲ್ಲೆಗಳ ಸಮಾಜದ ಮುಖಂಡರ ಉನ್ನತ ಸಭೆಯನ್ನು ಗುರುವಾರ ಬೆಳಗ್ಗೆ 11 ಗಂಟಗೆ ಕರೆಯಲಾಗಿದೆ ಎಂದು ಸಮಾಜದ ಹಿರಿಯ

ಮುಖಂಡ ಹಾಗೂ ಬಿಜೆಪಿ ಓಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅವ್ವಣ್ಣ ಮ್ಯಾಕೇರಿ, ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೇಲ್ಕೂರ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೋರಾಟವನ್ನು ಹತ್ತಿಕ್ಕುವಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರ ನೇರ ಕೈವಾಡವಿದೆ. ಅನಿರ್ಧಿಷ್ಟ ಅವಧಿಯವರೆಗೆ ಸುಮಾರು (351 ದಿನ ಗಳಿಂದ) ಹೋರಾಟಕ್ಕಾಗಿ ಹಾಕಿದ ಟೆಂಟ್ ಕಿತ್ತೆಸೆಯಲಾಗಿದೆ. ಹೋರಾಟಗಾರರನ್ನು ರಾತೋರಾತ್ರಿ ಎಳೆದೆಳೆದು ಪೋಲಿಸ್ ವಾಹನಕ್ಕೆ ತಳ್ಳಲಾಗಿದೆ. ಪೋಲಿಸರು ಹೋರಾಟಗಾರರ ಮೇಲೆ ಗೂಂಡಾ ವರ್ತನೆ ತೋರಿಸಿದ್ದಾರೆ. ಲಜ್ಜೆಗೆಟ್ಟ ಜಿಲ್ಲಾಡಳಿತದ ನಡೆ ಖಂಡನೀಯ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಸಹ ತಳವಾರ ಸಮುದಾಯಕ್ಕೆ ಎಸ್‌ಟಿ ಪ್ರಮಾಣಪತ್ರ ನೀಡಲಾಗುತ್ತಿದೆ. ಆದಾಗ್ಯೂ, ಕೇವಲ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮಾತ್ರ ಎಸ್‌ಟಿ ಪ್ರಮಾಣಪತ್ರ ಕೊಡುವಲ್ಲಿ ತಡೆಹಿಡಿಯಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಬೇಡಿಕೆಗಳಿಗೆ ಸ್ಪಂದಿಸದೇ ರಾತ್ರಿ 11-15ಕ್ಕೆ ಪೋಲಿಸರು ಅಮಾನವೀಯ ರೀತಿಯಲ್ಲಿ ಬಂಧಿಸಿದ್ದು ಸರಿಯಲ್ಲ ಎಂದು ಕಿಡಿಕಾರಿದರು.

ನಾವು ನಮ್ಮ ಬೇಡಿಕೆಗೆ ಸ್ಪಂದಿಸುವವರೆಗೂ ಹೋರಾಟ ಮುಂದುವರಿಯಲಿದೆ. ನಮ್ಮ ಹೋರಾಟವನ್ನು ಯಾವುದೇ ಕಾರಣಕ್ಕೂ ಬೇರೆ ಸ್ಥಳಗಳಿಗೆ ಒಯ್ಯುವುದಿಲ್ಲ. ಈಗ ಜಿಲ್ಲಾಡಳಿತವು ಜಿಲ್ಲಾಧಿಕಾರಿಗಳ ಕಚೇರಿಯ ಸುತ್ತಮುತ್ತ ನಿಷೇಧಾಜ್ಞೆ ಜಾರಿ ಮಾಡಿದೆ. ಮುಂದಿನ ಹೋರಾಟದ ಕುರಿತು ಏಪ್ರಿಲ್ 30ರ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ನಾಟೀಕಾರ್ ಅವರು ಮಾತನಾಡಿ, ನಾನೂ ಸಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಭಿಮಾನಿ. ಅವರೊಂದಿಗೆ ಈ ಹಿಂದೆ ಕಾರ್ಯಕ್ರಮ ಮಾಡಿರುವೆ. ಆದಾಗ್ಯೂ, ಈಗ ತಳವಾರ ಸಮಾಜದವರಿಗೆ ಎಸ್‌ಟಿ ಪ್ರಮಾಣಪತ್ರ ಕೊಡುವ ಕುರಿತು ಸಚಿವ ಪ್ರಿಯಾಂಕ್ ಖರ್ಗೆಯವರೇ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಇದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಬೇಡಿಕೆಗಳಿಗೆ ಆಗ್ರಹಿಸಿ ಹೋರಾಟ ನಿರಂತರವಾಗಿ ನಡೆದುಕೊಂಡು ಬರಲಾಗುತ್ತಿದೆ. ಈ ಕುರಿತು ಮೂರು ಸಭೆಗಳನ್ನು ಮಾಡಲಾಗಿದೆ ಎಂದು ಸುದೀರ್ಘ ಹೇಳಿಕೆಯನ್ನು ಸಚಿವ ಪ್ರಿಯಾಂಕ್ ಖರ್ಗೆಯವರು ಕೊಟ್ಟಿದ್ದು, ಅದು ನಿಜವೇ ಆಗಿದ್ದರೆ ಯಾಕೆ ಎಸ್‌ಟಿ ಪ್ರಮಾಣಪತ್ರ ಕೊಟ್ಟಿಲ್ಲ ಎಂದು ಖಾರವಾಗಿ ಪ್ರಶ್ನಿಸಿದರು.

ನಮ್ಮ ಹೋರಾಟವನ್ನು ನಿರಂತರವಾಗಿ ಹತ್ತಿಕ್ಕಲು ಜಿಲ್ಲಾಡಳಿತ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರು ಹತ್ತಿಕ್ಕುತ್ತ ಬಂದಿದ್ದಾರೆ. ಹಿಂದಿನ ಹೋರಾಟಗಳನ್ನು ವಿಫಲಗೊಳಿಸಲು ಅಂಬುಲೆನ್ಸ್‌ನ್ನು ಎರಡು ಬಾರಿ ಹೋರಾಟದ ಸ್ಥಳಕ್ಕೆ ತರಲಾಗಿತ್ತು. ಈ ಬಾರಿಯೂ ಸಹ ಅಂಬುಲೆನ್ಸ್ ಮೂಲಕ ಹೋರಾಟಕ್ಕೆ ಅಡ್ಡಿಯುಂಟು ಮಾಡುವ ಯತ್ನ ನಡೆಯಿತು ಎಂದು ಅವರು ದೂರಿದರು.

ಅಂಬುಲೆನ್ಸ್‌ಗೆ ಕಲ್ಲು ಒಗೆದ ಘಟನೆಗೆ ನಾವು ವಿಷಾಧಿಸುತ್ತೇವೆ. ನಮ್ಮ ಕಾರ್ಯಕರ್ತರು ಆ ಕೆಲಸವನ್ನು ಮಾಡಿಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಸಿಸಿಟಿವಿ ದೃಶ್ಯಾವಳಿಗಳನ್ನು ಪೋಲಿಸರು ಪರಿಶೀಲಿಸಲಿ ಎಂದು ಒತ್ತಾಯಿಸಿದ ಅವರು, ಬ್ಯಾರಿಕೇಡ್‌ಗಳನ್ನು ಹೋರಾಟಗಾರರನ್ನು ನಿಯಂತ್ರಿಸಲು ಹಾಗೂ ಹೋರಾಟವನ್ನು ವಿಫಲಗೊಳಿಸಲು ಬಳಕೆ ಮಾಡಿದ್ದನ್ನು ಪ್ರತಿಭಟನೆಕಾರರು ವಿರೋಧಿಸಿದರೇ ಹೊರತು ಬ್ಯಾರಿಕೇಡ್‌ಗಳನ್ನು ಕಿತ್ತೆಸೆದು ರಸ್ತೆ ಮೇಲೆ ಹಾಕಿ, ಸಾರ್ವಜನಿಕರಿಗೆ ತೊಂದರೆ ಕೊಡುವ ಕೆಲಸ ಮಾಡಿಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಹೋರಾಟದ ಸ್ಥಳಕ್ಕೆ ಆಗಮಿಸಿದ ರಾಜ್ಯ ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ್ ಅವರು ಹೋರಾಟಗಾರರೊಂದಿಗೆ ಸಮಾಲೋಚನೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಕೆಲವರು ಆವೇಷದ ಹೇಳಿಕೆಗಳನ್ನು ಕೊಡುವ ಸಂದರ್ಭದಲ್ಲಿ ತಮ್ಮವರೇ ಆದ ಬಸವರಾಜ್ ಬೂದಿಹಾಳ್ ಅವರನ್ನು ಸ್ಥಳದಿಂದ ಸರಿಸಿದರು. ಅದರಲ್ಲಿ **ಯಾವುದೇ ವಿವಾದ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ನಾಟೀಕಾರ್ ಅವರು ಪ್ರತಿಕ್ರಿಯಿಸಿದರು.**

ಕಾಂಗ್ರೆಸ್ ಮುಖಂಡ ಬಸವರಾಜ್ ಬೂದಿಹಾಳ್ ಅವರು ಮಾತನಾಡಿ, ರಾಜ್ಯ ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ್ ಅವರು ನಮ್ಮ ಸಮಾಜದ ಹಾಗೂ ನಮ್ಮ ಪಕ್ಷದ ಹಿರಿಯ ಮುಖಂಡರು. ಅವರಿಂದ ಯಾವುದೇ ರೀತಿಯಲ್ಲಿ ನನ್ನ ಮೇಲೆ ಹಲ್ಲೆ ಆಗಿಲ್ಲ. ಸ್ಥಳದಲ್ಲಿ ಇದ್ದ ಬಿಗುವಿನ ವಾತಾವರಣ ನಿಯಂತ್ರಿಸಲು ಅವರಿಗೆ ಅತ್ಯಂತ ಆತ್ಮೀಯವಾಗಿರುವ ನನಗೆ ಆ ಸ್ಥಳದಿಂದ ಸರಿಸಿದರು ಎಂದು ಸ್ಪಷ್ಟಪಡಿಸಿದರು. ಡಾ. ಸರ್ದಾರ್ ರಾಯಪ್ಪ ಅವರು ಮಾತನಾಡಿ, ಬೇಡಿಕೆ ಈಡೇರುವವರೆಗೂ ಹೋರಾಟ ಕೈಬಿಡುವುದಿಲ್ಲ ಎಂದರು.

# ವಿಜಯಪುರ ಜಿಲ್ಲೆಯ 16367.83ಕೋಟಿ ರೂ.ಗಳ ವಾರ್ಷಿಕ ಸಾಲ ಯೋಜನೆ



## ಕೃಷಿ ಮತ್ತು ಉದ್ಯಮಿ ವಲಯಕ್ಕೆ ಹೆಚ್ಚಿನ ಒತ್ತು

**ವಿಜಯಪುರ ಏ.29**-ಜಿಲ್ಲೆಯ ಆರ್ಥಿಕ ಪ್ರಗತಿಗೆ ಪೂರಕವಾಗಿರುವ 2026-2027ನೇ ಹಣಕಾಸು ವರ್ಷದ ಜಿಲ್ಲಾ ವಾರ್ಷಿಕ ಸಾಲ ಯೋಜನೆಯನ್ನು ಬುಧವಾರ ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ಬಿಡುಗಡೆ ಮಾಡಲಾಯಿತು. ಜಿಲ್ಲೆಯ ಅಗ್ರಣೀಯ ಬ್ಯಾಂಕ್ ಆಗಿರುವ ಕೆನರಾಬ್ಯಾಂಕ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ಅವರು ಈ ಸಾಲಿನ ವಾರ್ಷಿಕ ಸಾಲ ಯೋಜನೆ ಕೈಪಿಡಿ ಬಿಡುಗಡೆಗೊಳಿಸಿದರು.

ಪ್ರಸಕ್ತ ವರ್ಷದ ಸಾಲ ಯೋಜನೆಯ 16367.83 ಕೋಟಿ ರೂ. ವಿತರಣೆಯ ಗುರಿಯನ್ನು ಹೊಂದಿದೆ. ಇದು ಕಳೆದ ವರ್ಷದ ವಾರ್ಷಿಕ ಸಾಲ ಯೋಜನೆಯ ಶೇಕಡಾ 10.90 ಪಟ್ಟು ಹೆಚ್ಚಿನ ಗುರಿಯಾಗಿದೆ. ಆದ್ಯತಾ ವಲಯಕ್ಕೆ ಒಟ್ಟು ಯೋಜನೆ ಶೇ:69.59 ರಷ್ಟು ಅಂದರೆ ರೂ11389.96 ಕೋಟಿ ಮೀಸಲಿಡಲಾಗಿದೆ. ಕೃಷಿ ವಲಯಕ್ಕೆ ಒಟ್ಟು ಯೋಜನೆ ಶೇ: 51.46 ರಷ್ಟು ಅಂದರೆ 8422.71 ಕೋಟಿ ರೂಪಾಯಿ ಮೀಸಲಿಡಲಾಗಿದೆ. ಉದ್ಯಮಿ ವಲಯಕ್ಕೆ: ಒಟ್ಟು ಯೋಜನೆ ಯೋಜನೆಯ ಶೇ:16.90 ಅಂದರೆ ರೂ2765.48 ಕೋಟಿ ಮೀಸಲಿಡಲಾಗಿದೆ. ಶಿಕ್ಷಣ ಸಾಲ ರೂ 53.43 ಕೋಟಿ, ವಸತಿ ಸಾಲ ರೂ 94.07 ಕೋಟಿ ಮತ್ತು ಇತರೆ ಸಾಲ ರೂ 28.84 ಕೋಟಿ ಸಾಲದ ಗುರಿ ಹೊಂದಲಾಗಿದೆ.

ಈ ಸಮಯದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ಅವರು ಬ್ಯಾಂಕುಗಳು ಸಕಾಲದಲ್ಲಿ ಮೇಲಾಧಾರ ರಹಿತ ಸಣ್ಣ ಸಾಲುಗಳನ್ನು ನಿರುದ್ಯೋಗಿಗಳಿಗೆ ಕೊಟ್ಟರೆ, ನಿರುದ್ಯೋಗ ನಿರ್ಮೂಲನೆಗೆ ಸಹಕಾರಿ ಯಾಗುವದು ಎಂದು ತಿಳಿಸಿದರು.

ಕಳೆದ ಸಾಲಿನ ವಾರ್ಷಿಕ ಯೋಜನೆಯ ಪ್ರಗತಿಯ ಅಂಕಿ ಅಂಶಗಳನ್ನು ಅಗ್ರಣಿ ಬ್ಯಾಂಕ್ ಮುಖ್ಯ ಪ್ರಬಂಧಕರಾದ ಕೆ ಸಿದ್ದಯ್ಯ ಅವರು ವಿವರವಾಗಿ ತಿಳಿಸಿದರು. ಸಾಲ ಮತ್ತು ಠೇವಣಿಯ ಅನುಪಾತ ಶೇಕಡಾ 106 ಆಗಿದ್ದು, ಅತ್ಯುತ್ತಮ ಗುರಿ ಸಾಧನೆ ಎಂದು ಅವರು ತಿಳಿಸಿದರು.

ಈ ವೇಳೆ ನಬಾರ್ಡ್ ಡಿ.ಡಿ ವಿಕಾಸ ರಾಠೋಡ, ಕೆನರಾ ಬ್ಯಾಂಕ್ ವಿಭಾಗಿಯ ಪ್ರಬಂಧಕ ದೀಪಕ್ ಕುಮಾರ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಅಶೋಕ ಸೋಂಗರಿ ಮುಖ್ಯ ವ್ಯವಸ್ಥಾಪಕ ವಿ.ಬಿ.ಕುಲಕರ್ಣಿ, ಎಸ್ ಬಿ ಐ ಮುಖ್ಯವಸ್ಥಾಪಕ ಹರೀಶ್ ನಾಯಕ ವಿನೋದ್ ಮಾದರ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಪ್ರಬಂಧಕ ಅನಿಲ ಮಹಾಕಾಳಿ, ಡಿಸಿಸಿ ಬ್ಯಾಂಕ್ ಪ್ರಬಂಧಕ ರಮೇಶ್ ಹಿಟ್ಟನಹಳ್ಳಿ, ಐಸಿಐಸಿಐ ಬ್ಯಾಂಕ್ ಪ್ರಬಂಧಕ ಶಿವಪುತ್ರ ನಿಂಬಾಳ, ಸೂರ್ಯೋದಯ ಎಫ್ ಬಿ ಪ್ರಬಂಧಕ ಪ್ರದೀಪ್, ಕೋಟಕ್ ಮಹೀಂದ್ರಾ ಬ್ಯಾಂಕ್ ಪ್ರಬಂಧಕ ರವೀಂದ್ರ ಅಂಗಡಿ ಸೇರಿದಂತೆ ವಿವಿಧ ಬ್ಯಾಂಕುಗಳ ಜಿಲ್ಲಾ ಸಂಯೋಜಕರು ಮತ್ತು ಲೈನ್ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಮೇ 15ರಂದು ಶಿಖಂಡಿ ಕನ್ನಡ ಚಿತ್ರ ರಾಜ್ಯಾದ್ಯಂತ ಬಿಡುಗಡೆ: ಪೋಲಾ ಪ್ರವೀಣ್



**ಬಳ್ಳಾರಿ, ಏ.29:** ಪೋಲಾ ಮೂವೀಸ್ ಪ್ರೊಡಕ್ಷನ್‌ನ ಬಹು ನಿರೀಕ್ಷಿತ ಶಿಖಂಡಿ ಕನ್ನಡ ಚಲನಚಿತ್ರವು ಮೇ 15ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಕನ್ನಡದ ಜೊತೆಗೆ ತೆಲುಗು ಸೇರಿದಂತೆ ಹಲವು ಭಾಷೆಗಳಲ್ಲಿ ಸುಮಾರು 100ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನ ಕಾಣಲಿದೆ.

ನಗರದ ಪೋಲಾ ಪ್ಯಾರಡೈಸ್ ಹೋಟೆಲ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರದ ಟೀಸರ್ ಮತ್ತು ಹಾಡುಗಳನ್ನು ಬಿಡುಗಡೆ ಮಾಡಲಾಯಿತು. ಈ ವೇಳೆ ಮಾತನಾಡಿದ ನಿರ್ಮಾಪಕ ಪೋಲಾ ಪ್ರವೀಣ್ ಇದು ತಮ್ಮ ಮೊದಲ ಚಿತ್ರ ನಿರ್ಮಾಣವಾಗಿದ್ದು, ಪ್ರೇಕ್ಷಕರ ನಿರೀಕ್ಷೆಗೆ ತಕ್ಕಂತೆ ಅದ್ದೂರಿಯಾಗಿ ಚಿತ್ರ ನಿರ್ಮಿಸಲಾಗಿದ್ದು 2 ಗಂಟೆ 20 ನಿಮಿಷಗಳ ಅವಧಿಯ ಈ ಚಿತ್ರದಲ್ಲಿ ಬಳ್ಳಾರಿ ಜಿಲ್ಲೆಯ 22ಕ್ಕೂ ಹೆಚ್ಚು ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಲಾಗಿದೆ. ಬಳ್ಳಾರಿ, ಬೆಂಗಳೂರು, ಮೈಸೂರು ಹಾಗೂ ಮಾಗಡಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಚಿತ್ರೀಕರಣ ನಡೆದಿದೆ.

ಸಮಾಜದಲ್ಲಿ ಮಂಗಳಮುಖಿಯರ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಸರಿಪಡಿಸುವ ಸಂದೇಶವನ್ನು ಚಿತ್ರ ಒಳಗೊಂಡಿದ್ದು, ಸವದತ್ತಿ ಯಲ್ಲಮ್ಮ ದೇವಿಯ ದೈವಗೀತೆ ವಿಶೇಷ ಆಕರ್ಷಣೆಯಾಗಲಿದೆ ಎಂದು ಹೇಳಿದರು.

ನಿರ್ದೇಶಕ ಸುನಾಮಿ ಗುರುಮೂರ್ತಿ ಮಾತನಾಡಿ, 'ಶಿಖಂಡಿ' ಎಂಬುದು ಕೇವಲ ಹೆಸರು ಮಾತ್ರವಲ್ಲ, ಮಹಾಭಾರತದ ಪಾತ್ರದಿಂದ ಪ್ರೇರಿತವಾಗಿರುವ ವಿಶಿಷ್ಟ ಕಥಾಹಂದರ ಹೊಂದಿದ ಸಿನಿಮಾ ಇದಾಗಿದೆ. ಸಸ್ಪೆನ್ಸ್, ಥ್ರಿಲ್ಲರ್, ಹಾರರ್ ಹಾಗೂ ಫ್ಯಾಮಿಲಿ ಡ್ರಾಮಾ ಅಂಶಗಳನ್ನು ಒಳಗೊಂಡಿರುವ ಈ ರಿವೇಂಜ್ ಸ್ಟೋರಿ ಪ್ರೇಕ್ಷಕರಿಗೆ ಹೊಸ ಅನುಭವ ನೀಡಲಿದೆ ಎಂದು ಹೇಳಿದರು.

ಯುವರಾಜ್ ಗೌಡ ಹಾಗೂ ಖ್ಯಾತಿ ಮುಖ್ಯಭೂಮಿಕೆಯಲ್ಲಿ ಅಭಿನಯಿಸಿದ್ದು, ದೀಪಕ್ ಶೆಟ್ಟಿ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ.

ಜೋಗತಿ ಮಂಜಮ್ಮ ಸೇರಿದಂತೆ ಹಲವರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ದಯಾಶಂಕರ್ ಜಿ.ಎಂ. ಅವರು ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಸಹ ನಿರ್ದೇಶನದ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

ಚಿತ್ರದ ಛಾಯಾಗ್ರಹಣವನ್ನು ಮೈಸೂರು ಸ್ವಾಮಿ ನಿರ್ವಹಿಸಿದ್ದು, ಸಂಗೀತವನ್ನು ಮಂಜು ಕವಿ ಹಾಗೂ ಪ್ರಧ್ಯುತ್ತಾನ್ ನೀಡಿದ್ದಾರೆ.

ನೃತ್ಯ ನಿರ್ದೇಶನ ಜಗ್ಗು ಮಾಸ್ಟರ್, ಸಾಹಸ ನಿರ್ದೇಶನ ಮಾರುತಿ ಕೈಗೊಂಡಿದ್ದಾರೆ. ಬಳ್ಳಾರಿಯ ಮಂಗಳಮುಖಿ ಚಾಂದಿನಿಯು ಈ ಚಿತ್ರದಲ್ಲಿ ನಟಿಸಿದ್ದು ವಿಶಿಷ್ಟವಾಗಿದೆ. ಚಿತ್ರದ ನಾಲ್ಕು ಹಾಡುಗಳು ಈಗಾಗಲೇ ಗಮನ ಸೆಳೆದಿವೆ ಎಂದು ಚಿತ್ರತಂಡ ತಿಳಿಸಿದೆ.

# ಬೀದರ ಜಿಲ್ಲೆ ಮಲೇರಿಯಾ ಮುಕ್ತದೆಡೆ ಸಾಗಿದೆ: ಡಾ.ರಾಜಶೇಖರ ಪಾಟೀಲ್



**ಬೀದರ, ಏ. 29 :** ಜಿಲ್ಲೆಯು ಮಲೇರಿಯಾ ಮುಕ್ತದೆಡೆಗೆ ಸಾಗಿದೆ ಎಂದು ಬೀದರ ಜಿಲ್ಲಾ ರೋಗವಹಾಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ರಾಜಶೇಖರ ಪಾಟೀಲ್ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ ವಿಶ್ವ ಮಲೇರಿಯಾ ದಿನಾಚರಣೆ ಅಂಗವಾಗಿ ಆಯೋಜಿಸಿದ ಕಚೇರಿ ಆವರಣದಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಹಮ್ಮಿಕೊಂಡಿದ್ದ ಬೃಹತ್ ಜನಜಾಗೃತಿ ರ್‍ಯಾಲಿಗೆ ರಿಬ್ಬನ್ ಕತ್ತರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಜಲ್ಲೆಯಲ್ಲಿ ಮಲೇರಿಯಾ ರೋಗವು ಇಳಿಮುಖವಾಗಿದ್ದು, ಕಳೆದ 2025ನೇ ಸಾಲಿನಲ್ಲಿ ಕೇವಲ 05 ಮಲೇರಿಯಾ ಪ್ರಕರಣಗಳು ಪತ್ತೆಯಾಗಿದ್ದು, ಅವು ಹೊರ ರಾಜ್ಯಗಳಿಂದ 05 ಜನ ವಲಸಿಗರಿಗೆ ಮಲೇರಿಯಾ ಧೃಡಪಟ್ಟಿದ್ದು, ಎಲ್ಲಾ ಮಲೇರಿಯಾ ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಲಾಗಿದೆ. ಜಿಲ್ಲೆಯಲ್ಲಿ ಮಲೇರಿಯಾದಿಂದ ಇಲ್ಲಿಯವರೆಗೆ ಯಾವುದೇ ಸಾವು ಸಂಭವಿಸಿರುವುದಿಲ್ಲ

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಶಂಕ್ರೆಪ್ಪಾ ಬೋಮಾ ಮಾತನಾಡಿ, ಜಿಲ್ಲೆಯಲ್ಲಿ ಅಲ್ಲಲ್ಲಿ ಮಳೆಯಾಗುತ್ತಿರುವುದರಿಂದ ಹಾಗೂ ನಿಂತ ನೀರಿನಲ್ಲಿ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿರುತ್ತದೆ ನಾಗರಿಕರು ಮಲೇರಿಯ ರೋಗವನ್ನು ನಿಯಂತ್ರಿಸಲು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಿ ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆ ಮತ್ತು ಸೊಳ್ಳೆ ಕಡಿತದಿಂದ ರಕ್ಷಣೆ ಮಾಡಿಕೊಳ್ಳುವದು, ಸೊಳ್ಳೆ ನಿಯಂತ್ರಣ ವಿಧಾನಗಳನ್ನು ಅಳವಡಿಸಿಕೊಂಡು ಸೊಳ್ಳೆಗಳಿಂದ ಹರಡುವ ರೋಗಗಳನ್ನು ತಡೆಗಟ್ಟಲು ಸಾರ್ವಜನಿಕರಲ್ಲಿ ಮನವಿ ಮಾಡುತ್ತಾ ಮಲೇರಿಯಾ ರೋಗ ಲಕ್ಷಣಗಳು ಕಂಡುಬಂದಲ್ಲಿ ತಮ್ಮ ಸಮಿಪದ ಸರಕಾರಿ ಆಸ್ಪತ್ರೆಯಲ್ಲಿ ಪರೀಕ್ಷಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಬೇಕು, ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಎಂದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮಹ್ಮದ ಮಹೆಬೂಬ ಮಾತನಾಡಿ, ಜಿಲ್ಲೆಯಲ್ಲಿ 2026ನೇ ವರ್ಷದಲ್ಲಿ ಇಲ್ಲಿಯವರೆಗೆ 1 ಮಲೇರಿಯಾ ಪಿ ವಿ ಪ್ರಕರಣ ವಲಸಿಗರಿಗೆ ಪತ್ತೆಯಾಗಿದ್ದು, ತೀವ್ರ ಚಿಕಿತ್ಸೆ ನೀಡುವುದರ ಮೂಲ ಗುಣಪಡಿಸಲಾಗಿದೆ. ಮಲೇರಿಯಾ ರೋಗ ಹರಡದಂತೆ ಎಲ್ಲಾ ಸೂಕ್ತ ಮುಂಜಾಗ್ರತಾ ಕ್ರಮಗಳಾದ ಜ್ವರ ಪೀಡುತರ ಸಮೀಕ್ಷೆ, ಸೊಳ್ಳೆಗಳ ಉತ್ಪತ್ತಿ ತಾಣಗಳ ನಿರ್ಮೂಲನೆ

ಕಾರ್ಯ ಕೈಕೊಳ್ಳಲಾಗಿದೆ ಸೊಳ್ಳೆಗಳ ಉತ್ಪತಿಯ ಬಗ್ಗೆ ಹಾಗೂ ಸೊಳ್ಳೆಗಳ ಜೀವನಚಕ್ರದ ಬಗ್ಗೆ ವೈಜ್ಞಾನಿಕ ಸ್ವರೂಪ ಮತ್ತು ಅಂಕಿ ಅಂಶ ತಿಳಿಸಿದರು.

# ಯುಎಇ ನಿರ್ಗಮನ, ಒಪೆಕ್ ಅಂತ್ಯದ ಆರಂಭ
# ಜಾಗತಿಕ ತೈಲ ಮಾರುಕಟ್ಟೆ ಚಿತ್ರಣ ಬದಲಾವಣೆ ಸಾಧ್ಯತೆ

ಅಬುಧಾಬಿ, ಏ.29: ಮುಂದಿನ ತಿಂಗಳು ಒಪೆಕ್ ಮತ್ತು ಅದರ ಮಿತ್ರಕೂಟದಿಂದ ಹೊರಬರಲು ಯುಎಇ (ಸಂಯುಕ್ತ ಅರಬ್ ಎಮಿರೇಟ್ಸ್) ಸಜ್ಜಾಗಿದೆ. ಸುಮಾರು ಆರು ದಶಕಗಳ ಕಾಲದ ಸದಸ್ಯತ್ವವನ್ನು ಅಂತ್ಯಗೊಳಿಸುವ ಯುಎಇಯ ಈ ನಿರ್ಧಾರ ಜಾಗತಿಕ ತೈಲ ಮಾರುಕಟ್ಟೆಯ ಚಲನಶೀಲತೆಯನ್ನು ಮರುರೂಪಿಸುವ ಸಾಧ್ಯತೆಯಿದೆ. ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲು ಭಾರಿ ಹೂಡಿಕೆಗಳನ್ನು ಮಾಡಿರುವ ಹಿನ್ನೆಲೆಯಲ್ಲಿ, ದೀರ್ಘಕಾಲೀನ ರಾಷ್ಟ್ರೀಯ ಗುರಿಗಳಿಗೆ ಆದ್ಯತೆ ನೀಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅಬುಧಾಬಿಯ ಅಧಿಕಾರಿಗಳು ತಿಳಿಸಿದ್ದಾರೆ.

ಕೋಟಾ ವ್ಯವಸ್ಥೆಯಿಂದ ಹೊರಬರುವುದರಿಂದ, ಯುಎಇ ತನ್ನ ತೈಲ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಜಾಗತಿಕ ಬೇಡಿಕೆಯಲ್ಲಿನ ಬದಲಾವಣೆಗಳಿಗೆ ತಕ್ಷಣ ಸ್ಪಂದಿಸಲು ಸಾಧ್ಯವಾಗುತ್ತದೆ.

ಇಂಧನ ವಿಶ್ಲೇಷಕರ ಪ್ರಕಾರ, ಈ ನಿರ್ಗಮನವು ಈ ಒಕ್ಕೂಟದ ಅತ್ಯಂತ ಪ್ರಮುಖ ಮತ್ತು ವಿಶ್ವಾಸಾರ್ಹ ಸದಸ್ಯನ ನಿರ್ಗಮನವನ್ನು ಸೂಚಿಸುತ್ತದೆ. ಸೌದಿ ಅರೇಬಿಯಾದ ಜೊತೆಗೆ ಗಮನಾರ್ಹ ಪ್ರಮಾಣದ ಹೆಚ್ಚುವರಿ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುವ ಕೇವಲ ಎರಡು ದೇಶಗಳಲ್ಲಿ ಅಬುಧಾಬಿ ಕೂಡ ಒಂದು. ತನ್ನ ಶ್ರೀಮಂತಿಕೆಯಿಂದಾಗಿ ಮಾರುಕಟ್ಟೆಯ ಏರಿಳಿತದ ಸಮಯದಲ್ಲಿ ಬೆಲೆಗಳನ್ನು ಸ್ಥಿರಗೊಳಿಸಲು ಪೂರೈಕೆಯನ್ನು ಸರಿಹೊಂದಿಸುವ ಸಾಮರ್ಥ್ಯ ಹೊಂದಿದ್ದ ಯುಎಇ, ಸೌದಿ ಅರೇಬಿಯಾದ ಜೊತೆಗೆ ಪ್ರಮುಖ "ಸ್ವಿಂಗ್ ಪ್ರೊಡ್ಯೂಸರ್" ಎಂದು ಪರಿಗಣಿಸಲ್ಪಟ್ಟಿತ್ತು.

ಯುಎಇಯ ಈ ನಡೆಯನ್ನು "ಒಪೆಕ್ ಅಂತ್ಯದ ಆರಂಭ" ಎಂದು ಕೆಲವರು ಬಣ್ಣಿಸಿದ್ದಾರೆ. ಅಬುಧಾಬಿಯ ನಷ್ಟವಷ್ಟೇ ಅಲ್ಲದೆ, ಇದು ಇತರ ಸದಸ್ಯರಿಗೂ ದಾರಿದೀಪವಾಗುವ ಸಾಧ್ಯತೆಯಿದೆ. ರಷ್ಯಾ ಮತ್ತು ಸೌದಿ ಅರೇಬಿಯಾದಂತಹ ಪ್ರಮುಖ ಉತ್ಪಾದಕರು ತಮ್ಮ ಕಾರ್ಯತಂತ್ರಗಳನ್ನು ಬದಲಾಯಿಸಿದರೆ, ಜಾಗತಿಕ ತೈಲ ಪೂರೈಕೆಯ ಮೇಲೆ ಈ ಗುಂಪಿನ ಪ್ರಭಾವವು ದುರ್ಬಲಗೊಳ್ಳಬಹುದು.

ಇರಾನ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿಯ ಮೂಲಕ ತೈಲ ಮತ್ತು ಅನಿಲ ಪೂರೈಕೆಯಲ್ಲಿ ಅಡಚಣೆಯಾಗಿರುವ ಮತ್ತು ತೈಲ ಬೆಲೆಗಳು ಪ್ರತಿ ಬ್ಯಾರೆಲ್ಗೆ 110 ಡಾಲರ್ಗಿಂತ (ಯುದ್ಧಕ್ಕೂ ಮೊದಲು 70 ಡಾಲರ್ ಇತ್ತು) ಹೆಚ್ಚಾಗಿರುವ ಈ ಸಂದರ್ಭದಲ್ಲೇ ಯುಎಇ ಈ ನಿರ್ಧಾರ ಕೈಗೊಂಡಿದೆ. ಹಾರ್ಮುಜ್ ಮೂಲಕ ಹಡಗು ಸಂಚಾರಕ್ಕೆ ನಿರ್ಬಂಧವಿರುವುದರಿಂದ ತಕ್ಷಣವೇ ಪೂರೈಕೆ ಹೆಚ್ಚಾಗುವ ಸಾಧ್ಯತೆಯಿಲ್ಲ. ಆದಾಗ್ಯೂ, ಸಾರಿಗೆ ವ್ಯವಸ್ಥೆ ಸುಧಾರಿಸಿದ ನಂತರ ಉತ್ಪಾದನೆಯು ದಿನಕ್ಕೆ 10 ಲಕ್ಷ ಬ್ಯಾರಲ್ಗಳಷ್ಟು ಹೆಚ್ಚಾಗಬಹುದು ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಉತ್ಪಾದನಾ ಮಿತಿಯ ಬಗ್ಗೆ ವರ್ಷಗಳಿಂದ ನಡೆಯುತ್ತಿದ್ದ ಘರ್ಷಣೆಯ ಫಲಶ್ರುತಿಯೇ ಈ ನಿರ್ಗಮನ. ಯುಎಇ ತನ್ನ ಸಾಮರ್ಥ್ಯವನ್ನು 50 ಲಕ್ಷ ಬ್ಯಾರಲ್ಗಳಿಗೆ ಏರಿಸಲು ಹೂಡಿಕೆ ಮಾಡಿದ್ದರೂ, ಒಪೆಕ್ ನಿಯಮಗಳಿಂದಾಗಿ ಅದರ ಉತ್ಪಾದನೆಯು ದಿನಕ್ಕೆ 3 ರಿಂದ 3.5 ದಶಲಕ್ಷ ಬ್ಯಾರಲ್ಗಳಿಗೆ ಸೀಮಿತವಾಗಿತ್ತು. ಕಡಿಮೆ ಉತ್ಪಾದನಾ ವೆಚ್ಚವನ್ನು ಹೊಂದಿರುವ ಯುಎಇ, ಬೆಲೆಗಳು ಇಳಿಕೆಯಾದರೂ ಲಾಭದಾಯಕವಾಗಿರಲು ಶಕ್ತವಾಗಿದೆ.

ಈ ನಿರ್ಧಾರವು ಸೌದಿ ಅರೇಬಿಯಾದ ಕಾರ್ಯತಂತ್ರದಿಂದ ಭಿನ್ನವಾಗಿರಲಿದೆ. ಸೌದಿ ಸಾಮಾನ್ಯವಾಗಿ ಪೂರೈಕೆಯನ್ನು ನಿಯಂತ್ರಿಸಿ ಹೆಚ್ಚಿನ ಬೆಲೆಗೆ ಬೆಂಬಲ ನೀಡುವ ಪ್ರಯತ್ನವನ್ನು ಮುನ್ನಡೆಸುತ್ತಾ ಬಂದಿದೆ.

ಈ ಎರಡು ದೇಶಗಳ ಕಾರ್ಯತಂತ್ರದ ಭಿನ್ನತೆಯು ಮಾರುಕಟ್ಟೆಯ ವಿಘಟನೆಗೆ ಕಾರಣವಾಗಬಹುದು.

ಹಾರ್ಮುಜ್ ಜಲಸಂಧಿಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಅಬುಧಾಬಿಯಿಂದ ಫುಜೈರಾ ಬಂದರಿಗೆ ಪೈಪ್ಲೈನ್ ಸಾಮರ್ಥ್ಯವನ್ನು ವಿಸ್ತರಿಸುವ ಬಗ್ಗೆಯೂ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

# ಇರಾನ್‌ನ ಬಹುಪಾಲು ಪುಷ್ಟೀಕರಿಸಿದ ಯುರೇನಿಯಂ
# ಇಸ್ಫಹಾನ್ ಪರಮಾಣು ಸಂಕೀರ್ಣದಲ್ಲಿ ಭೂಸ್ಥಾಪಿತ



ವಿಯೆನ್ನಾ, ಏ.29: ಇರಾನ್‌ನ ಬಹುಪಾಲು ಪುಷ್ಟೀಕರಿಸಿದ ಯುರೇನಿಯಂ ಇನ್ನೂ ಅದರ ಇಸ್ಫಹಾನ್ ಪರಮಾಣು ಸಂಕೀರ್ಣದಲ್ಲಿದೆ ಎಂದು ನಂಬಲಾಗಿದೆ. ಕಳೆದ ವರ್ಷ 12 ದಿನಗಳ ಯುದ್ಧದ ಸಮಯದಲ್ಲಿ ಅಮೆರಿಕ ಮತ್ತು ಇಸ್ರೇಲ್ ಈ ಸಂಕೀರ್ಣದ ಮೇಲೆ ವೈಮಾನಿಕ ದಾಳಿ ನಡೆಸಿದ್ದವು ಮತ್ತು ಪ್ರಸ್ತುತ ಇರಾನ್ ಯುದ್ಧದಲ್ಲಿ ಈ ವರ್ಷ ಕಡಿಮೆ ತೀವ್ರತೆಯ ದಾಳಿಗಳನ್ನು ಎದುರಿಸಿದೆ ಎಂದು ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ ನಿರ್ದೇಶಕ ರಾಫೆಲ್ ಗ್ರೋಸಿ ತಿಳಿಸಿದ್ದಾರೆ.

ಗ್ರೋಸಿ ಅವರ ಪ್ರಕಾರ, ಇರಾನ್ ವಿರುದ್ಧ ಇತ್ತೀಚೆಗೆ ನಡೆದ ಅಮೆರಿಕ–ಇಸ್ರೇಲ್ ಸಂಯೋಜಿತ ವೈಮಾನಿಕ ದಾಳಿಯ ಪರಿಣಾಮಗಳನ್ನು ತೋರಿಸುವ ಉಪಗ್ರಹ ಚಿತ್ರಗಳನ್ನು ವಿಶ್ವಸಂಸ್ಥೆಯ ಪರಮಾಣು ಕಣ್ಗಾವಲು ಸಂಸ್ಥೆ ನಿರಂತರವಾಗಿ ಪಡೆದುಕೊಳ್ಳುತ್ತಿದೆ. ಕಳೆದ ಜೂನ್‌ನಲ್ಲಿ ಇಸ್ರೇಲ್ ಟೆಹ್ರಾನ್ ಮೇಲೆ 12 ದಿನಗಳ ಯುದ್ಧವನ್ನು ಪ್ರಾರಂಭಿಸಿದಾಗ ಇಸ್ಫಹಾನ್‌ನಲ್ಲಿ ಐಎಇಎ ತಪಾಸಣೆಗಳು ಕೊನೆಗೊಂಡವು. ನಂತರ ಅಮೆರಿಕ ಕೂಡ ಈ ಯುದ್ಧದಲ್ಲಿ ಭಾಗಿಯಾಗಿ ಫೋರ್ಡೋ, ಇಸ್ಫಹಾನ್ ಮತ್ತು ನಟಾಂಜ್‌ನಲ್ಲಿರುವ ಇರಾನ್‌ನ ಮೂರು ಪ್ರಮುಖ ಪರಮಾಣು ನೆಲೆಗಳ ಮೇಲೆ ಬಾಂಬ್ ದಾಳಿ ನಡೆಸಿತ್ತು.

ಕಣ್ಗಾವಲು ಸಂಸ್ಥೆಯ ಪ್ರಕಾರ, ಜೂನ್ 2025ರಲ್ಲಿ 12 ದಿನಗಳ ಯುದ್ಧ ಪ್ರಾರಂಭವಾದಾಗ ಇರಾನ್‌ನ ಹೆಚ್ಚಿನ ಶೇಕಡಾವಾರು ಪುಷ್ಟೀಕರಿಸಿದ ಯುರೇನಿಯಂ ಅನ್ನು ಅಲ್ಲಿ ಸಂಗ್ರಹಿಸಲಾಗಿತ್ತು ಮತ್ತು ಅಂದಿನಿಂದ ಅದು ಅಲ್ಲಿಯೇ ಹೂತುಹೋಗಿದೆ. ಇರಾನ್ ಪ್ರವೇಶ ನೀಡಲು ನಿರಾಕರಿಸುತ್ತಿರುವುದರಿಂದ ಆ ಸ್ಥಳಗಳನ್ನು ಪರಿಶೀಲಿಸಲು ಸಾಧ್ಯವಾಗುತ್ತಿಲ್ಲ ಎಂದು ಐಎಇಎ ಅಸಹಾಯಕತೆ ವ್ಯಕ್ತಪಡಿಸಿದೆ.

ಏರ್ಬಸ್ ಉಪಗ್ರಹದ ಚಿತ್ರಗಳು ಜೂನ್ 9, 2025 ರಂದು (ಯುದ್ಧ ಪ್ರಾರಂಭವಾಗುವ ಮೊದಲು) ಇಸ್ಫಹಾನ್ ಪರಮಾಣು ತಂತ್ರಜ್ಞಾನ ಕೇಂದ್ರದ ಸುರಂಗದೊಳಗೆ 18 ನೀಲಿ ಕಂಟೈನರ್‌ಗಳನ್ನು ಹೊತ್ತ ಟ್ರಕ್ ಹೋಗುತ್ತಿರುವುದನ್ನು ತೋರಿಸಿವೆ. ಹೆಚ್ಚಿನ ಪ್ರಮಾಣದಲ್ಲಿ ಪುಷ್ಟೀಕರಿಸಿದ ಯುರೇನಿಯಂ ಹೊಂದಿರಬಹುದು ಎಂದು ನಂಬಲಾದ ಆ ಕಂಟೈನರ್‌ಗಳು ಬಹುಶಃ ಅಲ್ಲಿಯೇ ಉಳಿದಿವೆ.

ನಟಾಂಜ್ ಮತ್ತು ಫೋರ್ಡೋದಲ್ಲಿರುವ ಇರಾನ್‌ನ ಪರಮಾಣು ಸೌಲಭ್ಯಗಳನ್ನು ಸಹ ಪರಿಶೀಲಿಸಲು ಐಎಇಎ ಬಯಸಿದೆ, ಅಲ್ಲಿಯೂ ಕೆಲವು ಪರಮಾಣು ವಸ್ತುಗಳಿವೆ ಎಂದು ಐಎಇಎ ಮಹಾನಿರ್ದೇಶಕರು ಸೇರಿಸಿದ್ದಾರೆ.

ಇರಾನ್ ಯುರೇನಿಯಂನ ಬೃಹತ್ ದಾಸ್ತಾನು ಹೊಂದಿದೆ ಎಂದು ನಂಬಲಾಗಿದೆ, ಇದು ಶಸ್ತ್ರಾಸ್ತ್ರ ದರ್ಜೆಯ ಮಟ್ಟಕ್ಕಿಂತ ಸ್ವಲ್ಪವೇ ಕಡಿಮೆಯಿದೆ. ಇತ್ತೀಚಿನ ವರದಿಗಳ ಪ್ರಕಾರ, ಇಸ್ಲಾಮಿಕ್ ರಿಪಬ್ಲಿಕ್ ತನ್ನ ಯುರೇನಿಯಂ ಅನ್ನು ಶೇ. 60 ರವರೆಗೆ ಪುಷ್ಟೀಕರಿಸುವಲ್ಲಿ ಯಶಸ್ವಿಯಾಗಿದೆ, ಇದು ಶಸ್ತ್ರಾಸ್ತ್ರ ದರ್ಜೆಯ ಶುದ್ಧತೆಗೆ ಅಗತ್ಯವಿರುವ ಶೇ. 90 ಕ್ಕಿಂತ ಸ್ವಲ್ಪವೇ ಕಡಿಮೆಯಾಗಿದೆ.

# ಅಮೆರಿಕದ ಪಾಸ್‌ಪೋರ್ಟ್‌ಗಳಲ್ಲಿ ಡೊನಾಲ್ಡ್ ಟ್ರಂಪ್ ಚಿತ್ರ




**ವಾಷಿಂಗ್ಟನ್, ಏ.29:** ಅಮೆರಿಕ ಸಂಯುಕ್ತ ಸಂಸ್ಥಾನದ ಸ್ವಾತಂತ್ರ್ಯ ಘೋಷಣೆಯ 250ನೇ ವಾರ್ಷಿಕೋತ್ಸವ ಆಚರಿಸುವ ಸಂದರ್ಭದಲ್ಲಿ ವಿಶೇಷ ಆವೃತ್ತಿಯ ಅಮೆರಿಕದ ಪಾಸ್‌ಪೋರ್ಟ್‌ಗಳಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚಿತ್ರವನ್ನು ಸೇರಿಸಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದು, ಅಮೆರಿಕದ ವಿದೇಶಾಂಗ ಇಲಾಖೆ ಈ ಮಾಹಿತಿಯನ್ನು ದೃಢಪಡಿಸಿದೆ.

ಜುಲೈನಲ್ಲಿ 250ನೇ ವರ್ಷದ ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಸೀಮಿತ ಸಂಖ್ಯೆಯಲ್ಲಿ ವಿಶೇಷ ವಿನ್ಯಾಸದ ಪಾಸ್‌ಪೋರ್ಟ್‌ಗಳನ್ನು ಬಿಡುಗಡೆ ಮಾಡಲು ತಯಾರಿ ನಡೆಯುತ್ತಿದೆ ಎಂದು ವಿದೇಶಾಂಗ ಇಲಾಖೆಯ ವಕ್ತಾರ ಟಾಮಿ ಪಿಗಾಟ್ ಹೇಳಿದ್ದಾರೆ.

ಈ ವಿಶೇಷ ಪಾಸ್‌ಪೋರ್ಟ್‌ಗಳಲ್ಲಿ ಟ್ರಂಪ್ ಅವರ ಅಧಿಕೃತ ಭಾವಚಿತ್ರವನ್ನು ಸ್ವಾತಂತ್ರ್ಯ ಘೋಷಣೆ ಪತ್ರದ ಮೇಲೆ ಹಾಕಲಾಗುವುದು. ಅದರ ಕೆಳಗೆ ಅವರ ಸಹಿ ಚಿನ್ನದ ಬಣ್ಣದಲ್ಲಿ ಮುದ್ರಿಸಲಾಗುವುದು. ಇನ್ನೊಂದು ಪುಟದಲ್ಲಿ ಅಮೆರಿಕದ ಸಂಸ್ಥಾಪಕ ಪಿತಾಮಹರ ಐತಿಹಾಸಿಕ ಚಿತ್ರವನ್ನು ಸಹ ಸೇರಿಸಲಾಗುವುದು.

ಈ ವಿಶೇಷ ಪಾಸ್‌ಪೋರ್ಟ್‌ಗಳು ಕೇವಲ ವಾಷಿಂಗ್ಟನ್‌ನಲ್ಲಿ ಮಾತ್ರ ಲಭ್ಯವಿರುತ್ತವೆ, ಸೀಮಿತ ಸಂಖ್ಯೆಯಲ್ಲಿ ಮಾತ್ರ ಬಿಡುಗಡೆಯಾಗುವುದರಿಂದ, ಸ್ಟಾಕ್ ಇರುವವರೆಗೆ ಮಾತ್ರ ದೊರೆಯುತ್ತವೆ ಇದಕ್ಕಾಗಿ ಹೆಚ್ಚುವರಿ ಶುಲ್ಕ ಏನೂ ಇರುವುದಿಲ್ಲ, ಸಾಮಾನ್ಯ ಅರ್ಜಿದಾರರು ಈ ವಿಶೇಷ ಆವೃತ್ತಿಯನ್ನು ನಿರಾಕರಿಸಬಹುದೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ

ಪ್ರಸ್ತುತ ಅಮೆರಿಕದ ಪಾಸ್‌ಪೋರ್ಟ್‌ಗಳಲ್ಲಿ ಚಂದ್ರನ ಮೇಲಿನ ಇಳಿಯುವಿಕೆ, ಸ್ವಾತಂತ್ರ್ಯ ಪ್ರತಿಮೆಯಂತಹ ಐತಿಹಾಸಿಕ ದೃಶ್ಯಗಳು ಇವೆ. ಆದರೆ ಪ್ರಸ್ತುತ ಅಧ್ಯಕ್ಷರ ಚಿತ್ರವನ್ನು ಪಾಸ್‌ಪೋರ್ಟ್‌ನಲ್ಲಿ ಸೇರಿಸುವುದು ಇದೇ ಮೊದಲಾಗಿದೆ. ಟ್ರಂಪ್ ಅವರು ಕಳೆದ ವರ್ಷ ಅಧಿಕಾರಕ್ಕೆ ಮರಳಿದ ನಂತರ ಸರ್ಕಾರಿ ಸಂಸ್ಥೆಗಳಲ್ಲಿ ತಮ್ಮ ಹೆಸರು ಮತ್ತು ಚಿತ್ರವನ್ನು ಸೇರಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದಕ್ಕೂ ಮುನ್ನ ಕೆನ್ನೆಡಿ ಸೆಂಟರ್, ಅಮೆರಿಕದ ಶಾಂತಿ ಸಂಸ್ಥೆಯ ಹೆಸರು ಬದಲಾವಣೆ, ಸರ್ಕಾರಿ ಕಟ್ಟಡಗಳಲ್ಲಿ ಬ್ಯಾನರ್‌ಗಳು ಮತ್ತು ಡಾಲರ್ ನೋಟುಗಳಲ್ಲಿ ತಮ್ಮ ಸಹಿಯನ್ನು ಸಹ ಸೇರಿಸಿದ್ದಾರೆ.

# ಇರಾನ್‌ನ ಶಾಡೋ ಬ್ಯಾಂಕಿಂಗ್ ಜಾಲದ ಮೇಲೆ
# ಅಮೆರಿಕ ಕಣ್ಣು: 35 ಸಂಸ್ಥೆ, ವ್ಯಕ್ತಿಗಳ ಮೇಲೆ ನಿರ್ಬಂಧ

ವಾಷಿಂಗ್ಟನ್, ಏ.29: ಇರಾನ್‌ನ ಗುಪ್ತ "ಹಣಕಾಸು ಮೂಲಸೌಕರ್ಯ (ಶಾಡೋ ಬ್ಯಾಂಕಿಂಗ್) ವ್ಯವಸ್ಥೆ ವಿರುದ್ಧ ಅಮೇರಿಕ ಕ್ರಮಕ್ಕೆ ಮುಂದಾಗಿದೆ. ನಿರ್ಬಂಧಗಳಿಂದ ತಪ್ಪಿಸಿಕೊಳ್ಳಲು ಶತಕೋಟಿ ಡಾಲರ್‌ಗಳ ಅಕ್ರಮ ವಹಿವಾಟುಗಳಿಗೆ ನೆರವು ನೀಡಿದ ಆರೋಪದ ಮೇಲೆ 35 ಸಂಸ್ಥೆಗಳು ಮತ್ತು ವ್ಯಕ್ತಿಗಳ ಮೇಲೆ ನಿರ್ಬಂಧ ಹೇರಿದೆ. ಅಮೆರಿಕದ ಹಿತಾಸಕ್ತಿಗಳಿಗೆ ಬೆದರಿಕೆ ಹಾಕದಂತೆ ಇರಾನ್ ಆಡಳಿತವನ್ನು ತಡೆಯಲು ಮತ್ತು ಅದನ್ನು ಹೊಣೆಗಾರರನ್ನಾಗಿ ಮಾಡಲು ಅಮೆರಿಕವು ಪ್ರತಿಯೊಂದು ಕ್ಷೇತ್ರದಲ್ಲೂ ಗರಿಷ್ಠ ಒತ್ತಡವನ್ನು ಹೇರುತ್ತಿದೆ.


ಅಧಿಕೃತ ಪತ್ರಿಕಾಗೋಷ್ಠಿಯಲ್ಲಿ ಇಲಾಖೆಯ ವಕ್ತಾರ ಥಾಮಸ್ "ಟಾಮಿ" ಪಿಗೋಟ್ ಈ ಕಾರ್ಯಾಚರಣೆಯ ವಿವರ ನೀಡಿದರು. ಅಕ್ರಮ ಹಣಕಾಸು ಹರಿವಿಗೆ ನೆರವು ನೀಡಿದ 35 ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ಗುರುತಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ಖಚಿತಪಡಿಸಿದರು. ಈ ಕ್ರಮಗಳು ಟೆಹ್ರಾನ್ನ ಪ್ರಾದೇಶಿಕ ಅಸ್ಥಿರತೆ ಮತ್ತು ಅಮೆರಿಕದ ಅವರು ತಿಳಿಸಿದರು.

ಶಾಡೋ ಬ್ಯಾಂಕಿಂಗ್ ಜಾಲಗಳು, ಅಂತರಾಷ್ಟ್ರೀಯ ನಿರ್ಬಂಧಗಳನ್ನು ಮೀರಿ ಇರಾನ್‌ನ ಹತ್ತಾರು ಶತಕೋಟಿ ಡಾಲರ್‌ಗಳನ್ನು ಗಡಿಯಾಚೆ ಸಾಗಿಸಲು ಅನುವು ಮಾಡಿಕೊಟ್ಟಿವೆ ಎಂದು ಆರೋಪಿಸಲಾಗಿದೆ. ಈ ಜಾಲವು ಇರಾನ್ ನಿರ್ಬಂಧಗಳನ್ನು ಬೈಪಾಸ್ ಮಾಡಲು, ಅಕ್ರಮ ತೈಲ ಮಾರಾಟದಿಂದ ಹಣವನ್ನು ವರ್ಗಾಯಿಸಲು ಮತ್ತು ಕ್ಷಿಪಣಿ ಹಾಗೂ ಶಸ್ತ್ರಾಸ್ತ್ರ ಕಾರ್ಯಕ್ರಮಗಳಿಗೆ ಬೇಕಾದ ಸೂಕ್ಷ್ಮ ಘಟಕಗಳನ್ನು ಖರೀದಿಸಲು ನೆರವಾಗುತ್ತಿದೆ. ಈ ಹಣಕಾಸು ಮಾರ್ಗಗಳು ಮಧ್ಯಪ್ರಾಚ್ಯದಾದ್ಯಂತ ಇರಾನ್ ಬೆಂಬಲಿತ ಗುಂಪುಗಳಿಗೆ ನೆರವು ನೀಡುತ್ತಿವೆ ಎಂದೂ ಆರೋಪಿಸಲಾಗಿದೆ.

ಅಸ್ತಿತ್ವದಲ್ಲಿರುವ ನಿರ್ಬಂಧಗಳ ನಡುವೆಯೂ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ಗೆ ಸಂಬಂಧಿಸಿದ ಸಂಸ್ಥೆಗಳು ಜಾಗತಿಕ ಹಣಕಾಸು ವ್ಯವಸ್ಥೆಯನ್ನು ಪ್ರವೇಶಿಸಲು ಇಂತಹ ವ್ಯವಸ್ಥೆಗಳು ಅವಕಾಶ ನೀಡುತ್ತವೆ ಎಂದು ಥಾಮಸ್ ಹೇಳಿದ್ದಾರೆ. ಪ್ರಸ್ತುತ ಉದ್ವಿಗ್ನತೆಗಳ ನಡುವೆ ಈ ಮಾರ್ಗಗಳನ್ನು ನಿಷ್ಕ್ರಿಯಗೊಳಿಸುವುದು ಧ್ವಂಸಗೊಳಿಸುವುದು ತಂತ್ರದ ಪ್ರಮುಖ ಭಾಗವಾಗಿದೆ ಎಂದು ಥಾಮಸ್ ಪ್ರತಿಪಾದಿಸಿದ್ದಾರೆ. ಹೆಜ್ಬೊಲ್ಲಾ ಮತ್ತು ಹಮಾಸ್‌ನಂತಹ ಗುಂಪುಗಳಿಗೆ ಇರಾನ್ ಬೆಂಬಲ ನೀಡುತ್ತಿರುವುದು ಮತ್ತು ಅಂತಾರಾಷ್ಟ್ರೀಯ ಹಡಗು ಮಾರ್ಗಗಳ ಮೇಲೆ ಇತ್ತೀಚೆಗೆ ನಡೆದ ದಾಳಿಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಇರಾನ್ನ ಪರಮಾಣು ಮಹತ್ವಾಕಾಂಕ್ಷೆಗಳ ಬಗ್ಗೆಯೂ ಅಮೆರಿಕ ಕಳವಳ ವ್ಯಕ್ತಪಡಿಸಿದೆ. ಜೊತೆಗೆ, ಅಮೆರಿಕದ ಖಜಾನೆ ಇಲಾಖೆಯು ಜಾಗತಿಕ ವ್ಯವಹಾರಗಳಿಗೆ ಎಚ್ಚರಿಕೆ ನೀಡಿದ್ದು, ಇರಾನ್ ಸಂಯೋಜಿತ ಸಂಸ್ಥೆಗಳೊಂದಿಗೆ, ವಿಶೇಷವಾಗಿ ತೈಲ ಕ್ಷೇತ್ರದಲ್ಲಿ ವ್ಯವಹರಿಸುವ ಅಪಾಯಗಳ ಬಗ್ಗೆ ತಿಳಿಸಿದೆ. ಚೀನಾದಲ್ಲಿನ ಟೀಪಾಟ್ ರಿಫೈನರಿಗಳು ನಿರ್ಬಂಧಗಳನ್ನು ಉಲ್ಲಂಘಿಸಿ ಇರಾನ್‌ನ ಕಚ್ಚಾತೈಲವನ್ನು ಸಂಸ್ಕರಿಸುತ್ತಿರುವ ಬಗ್ಗೆ ನಿರ್ದಿಷ್ಟ ಎಚ್ಚರಿಕೆ ನೀಡಲಾಗಿದೆ.

ಶಿಪ್ಪಿಂಗ್, ವಿಮೆ ಮತ್ತು ಇಂಧನ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಕಂಪನಿಗಳು ಇನ್ನು ಮುಂದೆ ಕಠಿಣ ತಪಾಸಣೆಯನ್ನು ಎದುರಿಸಬೇಕಾಗುತ್ತದೆ. ಇರಾನ್ ತನ್ನ ಅಸ್ಥಿರಗೊಳಿಸುವ ಚಟುವಟಿಕೆಗಳನ್ನು ನಿಲ್ಲಿಸುವವರೆಗೆ ಮತ್ತು ಅಂತಾರಾಷ್ಟ್ರೀಯ ಮಾನದಂಡಗಳನ್ನು ಪಾಲಿಸುವವರೆಗೆ ಈ ನಿರ್ಣಾಯಕ ಕ್ರಮಗಳು ಮುಂದುವರಿಯಲಿವೆ ಎಂದು ಪಿಗೋಟ್ ತಿಳಿಸಿದ್ದಾರೆ.

# ಭಾರತಕ್ಕೆ ಬೇಕಿದ್ದ ಮತ್ತೊಬ್ಬ ಉಗ್ರ ಫಿನಿಷ್



ಇಸ್ಲಾಮಾಬಾದ್, ಏ.29: ಪಾಕಿಸ್ತಾನದಲ್ಲಿ ಮತ್ತೊಬ್ಬ ಭಯೋತ್ಪಾದಕನ ಅನುಮಾನಾಸ್ಪದ ಸಾವು ಸಂಭವಿಸಿದೆ. ಜೈಶ್–ಎ–ಮೊಹಮ್ಮದ್ (ಜೆಇಎಂ)ನ ಉನ್ನತ ಭಯೋತ್ಪಾದಕ ಕಮಾಂಡರ್ ಮೌಲಾನಾ ಸಲ್ಮಾನ್ ಅಜರ್ ಬಹಾವಲ್ಪುರದಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಸಾವನ್ನಪ್ಪಿದ್ದಾನೆ ಎಂದು ಹೇಳಲಾಗುತ್ತಿದೆ.

ಭಾರತದ ವಿರುದ್ಧ ಸಂಚು ರೂಪಿಸುತ್ತಿದ್ದ ಜೈಶ್–ಎ–ಮೊಹಮ್ಮದ್ ನ ಪ್ರಮುಖ ಕಮಾಂಡರ್ ಸಾವು, ಭಯೋತ್ಪಾದಕ ಸಂಘಟನೆಗೆ ದೊಡ್ಡ ಹಿನ್ನಡೆಯಾಗಿದೆ. ಭಾರತದ ನೆರೆಯ ರಾಷ್ಟ್ರ ಪಾಕಿಸ್ತಾನವು ಬಹಳ ಹಿಂದಿನಿಂದಲೂ ಭಯೋತ್ಪಾದಕ ಸಂಘಟನೆಗಳಿಗೆ ಸುರಕ್ಷಿತ ತಾಣವಾಗಿದೆ. ಪಾಕಿಸ್ತಾನವು ಭಾರತ ಮತ್ತು ಪ್ರಪಂಚದಾದ್ಯಂತದ ಮೋಸ್ಟ್ ವಾಂಟೆಡ್ ಭಯೋತ್ಪಾದಕರಿಗೆ ನೆಲೆಯಾಗಿದೆ. ಆದಾಗ್ಯೂ, ಕೆಲವು ಸಮಯದಿಂದ, ಭಯೋತ್ಪಾದಕರು ಪಾಕಿಸ್ತಾನದಲ್ಲಿ ಭಯದಿಂದ ಬದುಕುತ್ತಿದ್ದಾರೆ. ಅಪರಿಚಿತರ ಟಾರ್ಗೆಟ್ ದಾಳಿಯಿಂದಾಗಿ ಭಯೋತ್ಪಾದಕರು ಆತಂಕದಲ್ಲೇ ಬದುಕುತ್ತಿದ್ದಾರೆ. ಪಾಕಿಸ್ತಾನದಲ್ಲಿ ಭಯೋತ್ಪಾದಕರು ಒಬ್ಬರ ನಂತರ ಒಬ್ಬರಂತೆ ಹತ್ಯೆಗೀಡಾಗುತ್ತಿದ್ದಾರೆ.

# ಕಚ್ಚಾತೈಲ ಬೆಲೆ ಬ್ಯಾರಲ್‌ಗೆ 115 ಡಾಲರ್‌ಗೆ ಏರಿಕೆ
# ಸಾಧ್ಯತೆ: ಜಾಗತಿಕ ಆರ್ಥಿಕತೆ ಮೇಲೂ ಪರಿಣಾಮ



**ವಾಷಿಂಗ್ಟನ್, ಏ.28:** ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಜಂಟಿ ಯುದ್ಧವು ಜಾಗತಿಕ ಬೆಲೆಗಳನ್ನು ಮತ್ತಷ್ಟು ಏರಿಸುವ ನಿರೀಕ್ಷೆಯಿದೆ. ಈ ಬೆಲೆ ಏರಿಕೆಯು 2022ರ ರಷ್ಯಾ–ಉಕ್ರೇನ್ ಯುದ್ಧದ ಆರಂಭಿಕ ತಿಂಗಳುಗಳ ನಂತರ ಕಂಡಿರದ ಅತಿ ದೊಡ್ಡ ಮಟ್ಟದ್ದಾಗಿರಲಿದೆ ಎಂದು ವಿಶ್ವ ಬ್ಯಾಂಕ್ ಎಚ್ಚರಿಸಿದೆ. ತನ್ನ ಇತ್ತೀಚಿನ ಕಮಾಡಿಟಿ ಮಾರ್ಕೆಟ್ಸ್ ಔಟ್‌ಲುಕ್ ವರದಿಯಲ್ಲಿ ಈ ವಿಷಯ ತಿಳಿಸಿದೆ.

ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿಗಳು ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಹಡಗು ಸಂಚಾರಕ್ಕೆ ಉಂಟಾಗಿರುವ ಅಡೆತಡೆಗಳು ಈವರೆಗೆ ಕಂಡಿರದ ಅತಿದೊಡ್ಡ ತೈಲ ಪೂರೈಕೆ ಆಘಾತಕ್ಕೆ ಕಾರಣವಾಗಿವೆ. ಈ ಮಾರ್ಗವು ಈ ಹಿಂದೆ ವಿಶ್ವದ ಸಮುದ್ರ ಮಾರ್ಗದ ಕಚ್ಚಾತೈಲ ಸಾಗಣೆಯ ಸುಮಾರು ನಾಲ್ಕನೇ ಒಂದು ಭಾಗವನ್ನು ನಿರ್ವಹಿಸುತ್ತಿತ್ತು.

ಇದರ ಪರಿಣಾಮವು ಈಗಾಗಲೇ ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬರುತ್ತಿದೆ. ತೈಲ ಬೆಲೆಗಳು ಗಗನಕ್ಕೇರಿದ್ದು, ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 112 ಡಾಲರ್‌ಗಿಂತ ಹೆಚ್ಚಾಗಿದೆ. ಒಂದು ವೇಳೆ ಬಿಕ್ಕಟ್ಟು ಹೀಗೆಯೇ ಮುಂದುವರಿದರೆ, 2026ರ ವೇಳೆಗೆ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 115 ಡಾಲರ್ ತಲುಪಬಹುದು ಎಂದು ಬ್ಯಾಂಕ್ ಎಚ್ಚರಿಸಿದೆ.


ಆದರೆ, ಇದರ ಪರಿಣಾಮ ಕೇವಲ ಇಂಧನಕ್ಕೆ ಮಾತ್ರ ಸೀಮಿತವಾಗಿಲ್ಲ. ವಿಶ್ವ ಬ್ಯಾಂಕ್ ಸಮೂಹದ ಮುಖ್ಯ ಅರ್ಥಶಾಸ್ತ್ರಜ್ಞ ಇಂದರ್‌ಮಿತ್ ಗಿಲ್ ಮಾತನಾಡಿ, ಈ ಸಂಘರ್ಷವು ಜಾಗತಿಕ ಆರ್ಥಿಕತೆಯ ಮೇಲೆ ಹಂತಹಂತವಾಗಿ ಪರಿಣಾಮ ಬೀರುತ್ತಿದೆ – ಮೊದಲು ಇಂಧನ, ನಂತರ ಆಹಾರ ಮತ್ತು ಅಂತಿಮವಾಗಿ ಹಣದುಬ್ಬರ ರೂಪದಲ್ಲಿ ಇದು ಕಾಡುತ್ತಿದೆ ಎಂದು ಹೇಳಿದರು.

"ಈ ಯುದ್ಧವು ಜಾಗತಿಕ ಆರ್ಥಿಕತೆಯನ್ನು ಸರಣಿ ಅಲೆಗಳಂತೆ ಅಪ್ಪಳಿಸುತ್ತಿದೆ," ಎಂದು ಎಚ್ಚರಿಸಿದ್ದಾರೆ. ಹೆಚ್ಚುತ್ತಿರುವ ವೆಚ್ಚಗಳು ಬಡ್ಡಿದರಗಳನ್ನು ಹೆಚ್ಚಿಸುತ್ತವೆ ಮತ್ತು ಸಾಲವನ್ನು ದುಬಾರಿ ಮಾಡುತ್ತವೆ, ವಿಶೇಷವಾಗಿ ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ದೇಶಗಳಿಗೆ ಇದು ದೊಡ್ಡ ಹೊರೆಯಾಗಲಿದೆ ಎಂದು ಸಿಬಿಎಸ್ ನ್ಯೂಸ್ ವರದಿ ಮಾಡಿದೆ. ಶ್ರೀಮಂತ ಆರ್ಥಿಕತೆಗಳು ಸಹ ಈ ಒತ್ತಡವನ್ನು ಅನುಭವಿಸುತ್ತಿವೆ – ಅಮೆರಿಕದಲ್ಲಿ ಗ್ಯಾಸೋಲಿನ್ ಬೆಲೆ ಪ್ರತಿ ಗ್ಯಾಲನ್‌ಗೆ 4 ಡಾಲರ್‌ಗಿಂತ ಹೆಚ್ಚಾಗಿದೆ ಮತ್ತು ಹಣದುಬ್ಬರ ಏರುತ್ತಿದೆ. ಆದರೆ, ಬಡ ರಾಷ್ಟ್ರಗಳು ಇದರ ಅತಿ ಹೆಚ್ಚಿನ ಬೆಲೆಯನ್ನು ತೆರಬೇಕಾಗುತ್ತದೆ. ಆದಾಯದ ಹೆಚ್ಚಿನ ಪಾಲನ್ನು ಆಹಾರ ಮತ್ತು ಇಂಧನಕ್ಕಾಗಿ ಖರ್ಚು ಮಾಡುವ ಬಡ ದೇಶಗಳ ಕುಟುಂಬಗಳು, ಇಂತಹ ಸುದೀರ್ಘ ಬೆಲೆ ಏರಿಕೆಯ ಹೊಡೆತಕ್ಕೆ ತೀವ್ರವಾಗಿ ತುತ್ತಾಗುತ್ತವೆ.

ಇದರ ದುಷ್ಪರಿಣಾಮ ಈಗಾಗಲೇ ಆಹಾರ ವ್ಯವಸ್ಥೆಗಳಲ್ಲಿ ಕಂಡುಬರುತ್ತಿದೆ. ಹೆಚ್ಚಿನ ಇಂಧನ ವೆಚ್ಚಗಳು ರಸಗೊಬ್ಬರ ಬೆಲೆಗಳನ್ನು ಹೆಚ್ಚಿಸುತ್ತಿವೆ, ಇದು ಕೃಷಿ ಉತ್ಪನ್ನ ಮತ್ತು ಕೈಗೆಟುಕುವ ದರಗಳ ಬಗ್ಗೆ ಆತಂಕ ಮೂಡಿಸಿದೆ.

ರಸಗೊಬ್ಬರ ವೆಚ್ಚಗಳು ಹೆಚ್ಚಾಗುತ್ತಿರುವುದರಿಂದ, "ಆಹಾರ ಪೂರೈಕೆ ಮತ್ತು ದರಗಳ ಮೇಲಿನ ಈ ಒತ್ತಡವು ಈ ವರ್ಷ ಸುಮಾರು 45 ಮಿಲಿಯನ್ ಹೆಚ್ಚುವರಿ ಜನರನ್ನು ತೀವ್ರ ಆಹಾರ ಅಭದ್ರತೆಗೆ ತಳ್ಳಬಹುದು" ಎಂದು ವಿಶ್ವ ಆಹಾರ ಕಾರ್ಯಕ್ರಮ ಮಾರ್ಚ್‌ನಲ್ಲಿ ಎಚ್ಚರಿಸಿದೆ.

# ಉಳಿದ ಎಲ್ಲ ಪಂದ್ಯ ಗೆದ್ದರಷ್ಟೇ ಮುಂಬೈ ಪ್ಲೇಆಫ್ ಆಸೆ ಜೀವಂತ



ತಂಡದ ಅಸ್ಥಿರ ಫಾರ್ಮ್ ಬಗ್ಗೆ ಮಾಜಿ ಕ್ರಿಕೆಟಿಗ ಸುನಿಲ್ ಗವಾಸ್ಕರ್ ಕಳವಳ

ಮುಂಬೈ, ಏ.29: ಐಪಿಎಲ್ 2026ನೇ ಆವೃತ್ತಿಯಲ್ಲಿ ಮುಂಬೈ ಇಂಡಿಯನ್ಸ್ ತಂಡದ ಅಸ್ಥಿರ ಫಾರ್ಮ್ ಬಗ್ಗೆ ಲೆಜೆಂಡರಿ ಕ್ರಿಕೆಟಿಗ ಸುನೀಲ್ ಗವಾಸ್ಕರ್ ಕಳವಳ ವ್ಯಕ್ತಪಡಿಸಿದ್ದಾರೆ. ಐದು ಬಾರಿಯ ಚಾಂಪಿಯನ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಸೋಲು ಅನುಭವಿಸಿದ ನಂತರ ಪ್ಲೇಆಫ್ ಆಸೆಯನ್ನು ಜೀವಂತವಾಗಿಟ್ಟುಕೊಳ್ಳಲು ಉಳಿದ ಎಲ್ಲ ಪಂದ್ಯಗಳನ್ನು ಗೆಲ್ಲಬೇಕು ಎಂದು ಎಚ್ಚರಿಸಿದ್ದಾರೆ.

ಸಂಜು ಸ್ಯಾಮ್ಸನ್ ಅವರ ಶತಕ ಮತ್ತು ಅಕೀಲ್ ಹೊಸೇನ್ ಅವರ ನಾಲ್ಕು ವಿಕೆಟ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ (ಅಖಎ) ತಂಡವು ತನ್ನ ಸಾಂಪ್ರದಾಯಿಕ ಎದುರಾಳಿ ಮುಂಬೈ ವಿರುದ್ಧ 103 ರನ್ಗಳ ಭರ್ಜರಿ ಜಯ ಸಾಧಿಸಿತು.

ಗುರುವಾರ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸ್ಯಾಮ್ಸನ್ 54 ಎಸೆತಗಳಲ್ಲಿ 10 ಬೌಂಡರಿ ಮತ್ತು ಆರು ಸಿಕ್ಸರ್ಗಳ ಸಹಾಯದಿಂದ ಅಜೇಯ 101 ರನ್ ಗಳಿಸುವ ಮೂಲಕ ಐಪಿಎಲ್ 2026ನೇ ಆವೃತ್ತಿಯಲ್ಲಿ ಎರಡನೇ ಶತಕ ಗಳಿಸಿದರು. ಇದು ಸಿಎಸ್ಕೆ ಮುಂಬೈ ತಂಡಕ್ಕೆ 208 ರನ್ಗಳ ದೊಡ್ಡ ಗುರಿಯನ್ನು ನೀಡಲು ಸಹಾಯ ಮಾಡಿತು.

ಇದಕ್ಕೆ ಪ್ರತಿಕ್ರಿಯೆಯಾಗಿ, ಹೊಸೇನ್ ನಾಲ್ಕು ವಿಕೆಟ್ ಗೊಂಚಲು (4/17) ಪಡೆದರು. ನೂರ್ ಅಹ್ಮದ್, ಮುಖೇಶ್ ಚೌಧರಿ, ಜೇಮೀ ಓವರ್ಟನ್, ಅನ್ಶುಲ್ ಕಾಂಬೋಜ್ ಮತ್ತು ಗುರ್ಜಪ್ನೀತ್ ಸಿಂಗ್ ಕೂಡ ಉತ್ತಮ ಪ್ರದರ್ಶನ ನೀಡಿದರು. ಮುಂಬೈ ತಂಡವು 104 ರನ್ಗಳಿಗೆ ಆಲೌಟ್ ಆಗುವ ಮೂಲಕ ಸೋಲು ಕಂಡಿತು.

ಏಪ್ರಿಲ್ 29 ರಂದು ಸನ್ರೈಸರ್ಸ್ ಹೈದರಾಬಾದ್ (ಖಖಊ) ವಿರುದ್ಧದ ಪಂದ್ಯಕ್ಕೂ ಮುನ್ನ ಸ್ಟಾರ್ ಸ್ಪೋರ್ಟ್ಸ್‌ನಲ್ಲಿ ಮಾತನಾಡಿದ ಗವಾಸ್ಕರ್, ಸದ್ಯದ ಆವೃತ್ತಿಯಲ್ಲಿ ಒಖ ತಂಡದ ಅಸಮರ್ಥತೆ ಮತ್ತು ಅಖಎ ವಿರುದ್ಧದ ಅವರ ಇತ್ತೀಚಿನ ಬ್ಯಾಟಿಂಗ್ ಕುಸಿತವನ್ನು ಎತ್ತಿ ತೋರಿಸಿದರು.

'ಒಖ ಇಲ್ಲಿಂದ ಮುಂದಿನ ಪ್ರತಿಯೊಂದು ಪಂದ್ಯವನ್ನು ಗೆಲ್ಲಬೇಕಾಗಿದೆ ಮತ್ತು ಅವರು ಅದನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಆದರೆ ಅವರಿಗೆ ಎಲ್ಲವೂ ಪರಿಪೂರ್ಣವಾಗಿ ಒಟ್ಟಿಗೆ ಬರಬೇಕು' ಎಂದು ಗವಾಸ್ಕರ್ ಹೇಳಿದರು.

'ಇತ್ತೀಚಿನ ಸೋಲು, ವಿಶೇಷವಾಗಿ ಅಖಎ ವಿರುದ್ಧ 100 ರನ್ಗಳಿಗೆ ಆಲೌಟ್ ಆಗುವುದು ನಿರಾಶಾದಾಯಕವಾಗಿತ್ತು. ಇಂತಹ ಭಾರಿ ಸೋಲುಗಳು ನಂತರ ಅವರಿಗೆ ನೋವುಂಟು ಮಾಡಬಹುದು, ವಿಶೇಷವಾಗಿ ನಾಲ್ಕನೇ ಪ್ಲೇಆಫ್ ಸ್ಥಾನಕ್ಕಾಗಿ ಇರುವ ಬಿಗಿಯಾದ ಸ್ಪರ್ಧೆಯಲ್ಲಿ ಇದು ಸಾಕಾಗುವುದಿಲ್ಲ' ಎಂದರು.

ಬುಧವಾರ ಸಂಜೆ ನಾಲ್ಕು ಪಂದ್ಯಗಳ ಸರಣಿ ಗೆಲುವಿನ ಖುಷಿಯಲ್ಲಿರುವ ಸನ್ರೈಸರ್ಸ್ ಹೈದರಾಬಾದ್ (ಖಖಊ) ತಂಡಕ್ಕೆ ಆತಿಥ್ಯ ವಹಿಸುವ ಮೂಲಕ ಮುಂಬೈ ತಂಡವು ಮತ್ತೆ ಪುಟಿದೇಳುವ ಗುರಿಯನ್ನು ಹೊಂದಿದೆ. ಈ ಹೈ–ವೋಲ್ಟೇಜ್ ಪಂದ್ಯವು ಐತಿಹಾಸಿಕ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದೆ.

ಈಮಧ್ಯೆ, ಸದ್ಯ ನಡೆಯುತ್ತಿರುವ ಐಪಿಎಲ್ 2026ನೇ ಆವೃತ್ತಿಯ ಇತ್ತೀಚಿನ ನವೀಕರಣದ ಪ್ರಕಾರ, ಪಾಯಿಂಟ್ ಟೇಬಲ್ ಬಿಗಿಯಾದ ಸ್ಪರ್ಧೆಯಾಗಿ ರೂಪುಗೊಳ್ಳುತ್ತಿದೆ. ಇತ್ತೀಚೆಗೆ ರಾಜಸ್ಥಾನ್ ರಾಯಲ್ಸ್ ವಿರುದ್ಧ ಸೋತಿದ್ದರೂ ಪಂಜಾಬ್ ಕಿಂಗ್ಸ್ ಅಂಕಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ. ಎರಡನೇ ಸ್ಥಾನದಲ್ಲಿ ಆರ್ಸಿಬಿ ಮತ್ತು ಮೂರನೇ ಸ್ಥಾನದಲ್ಲಿ ರಾಜಸ್ಥಾನ್ ರಾಯಲ್ಸ್ ಸ್ಥಾನ ಪಡೆದಿವೆ.

# ಅಧ್ಯಕ್ಷ ಶಮ್ಮಿ ಸಿಲ್ವಾ ರಾಜೀನಾಮೆ:
# ಸರ್ಕಾರದ ವಶಕ್ಕೆ ಶ್ರೀಲಂಕಾ ಕ್ರಿಕೆಟ್ ಮಂಡಳಿ




ಕೊಲಂಬೊ, ಏ.29: ಶ್ರೀಲಂಕಾ ಕ್ರಿಕೆಟ್ ಮಂಡಳಿ ಅಧ್ಯಕ್ಷ ಶಮ್ಮಿ ಸಿಲ್ವಾ ಮತ್ತು ಕಾರ್ಯಕಾರಿ ಸಮಿತಿಯ ರಾಜೀನಾಮೆ ನಂತರ ಶ್ರೀಲಂಕಾ ಸರ್ಕಾರ ಬುಧವಾರ ದೇಶದ ಕ್ರಿಕೆಟ್ ಮಂಡಳಿಯ ಆಡಳಿತವನ್ನು ವಹಿಸಿಕೊಳ್ಳಲು ನಿರ್ಧರಿಸಿದೆ. ಹಣಕಾಸಿನ ದುರುಪಯೋಗ ಆರೋಪಗಳು ಹೆಚ್ಚುತ್ತಿರುವ ಕಾರಣ, ಶ್ರೀಲಂಕಾದ ಅಧ್ಯಕ್ಷ ಅನುರ ಕುಮಾರ ದಿಸಾನಾಯಕೆ ಅವರು ಶಾಂತಿಯುತವಾಗಿ ನಿರ್ಗಮಿಸಲು ಮಾತುಕತೆ ನಡೆಸಿದ ನಂತರ ಶ್ರೀಲಂಕಾ ಕ್ರಿಕೆಟ್ ಮುಖ್ಯಸ್ಥ ಶಮ್ಮಿ ಸಿಲ್ವಾ ಮತ್ತು ಇತರ ಅಧಿಕಾರಿಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

'1973ರ ಕ್ರೀಡಾ ಕಾನೂನು ಸಂಖ್ಯೆ 25ರ ಸೆಕ್ಷನ್ 31 ಮತ್ತು 34ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರದ ಅಡಿಯಲ್ಲಿ, ಶ್ರೀಲಂಕಾ ಕ್ರಿಕೆಟ್ನ ಎಲ್ಲ ಆಡಳಿತಾತ್ಮಕ ಕಾರ್ಯಗಳನ್ನು ತಾತ್ಕಾಲಿಕವಾಗಿ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ಅಡಿಯಲ್ಲಿ ತರಲಾಗುತ್ತದೆ' ಎಂದು ಕ್ರೀಡಾ ಸಚಿವ ಸುನೀಲ್ ಕುಮಾರ್ ಗಮಗೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಸ್ತಿತ್ವದಲ್ಲಿರುವ ಪದಾಧಿಕಾರಿಗಳ ರಾಜೀನಾಮೆಗಳನ್ನು ಅಂಗೀಕರಿಸಲಾಗಿದೆ ಎಂದು ಗಮಗೆ ಹೇಳಿದರು.ಲಂಕಾ ಕ್ರಿಕೆಟ್ನಲ್ಲಿನ ಸದ್ಯದ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಮತ್ತು ರಚನಾತ್ಮಕ ಸುಧಾರಣೆಗಳನ್ನು ಜಾರಿಗೆ ತರಲು ಶೀಘ್ರದಲ್ಲೇ ಮಧ್ಯಂತರ ಸಮಿತಿಯನ್ನು ನೇಮಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮಂಗಳವಾರ ಶ್ರೀಲಂಕಾ ಕ್ರಿಕೆಟ್ ಕಾರ್ಯಕಾರಿ ಸಮಿತಿಯು ಸುದೀರ್ಘ ಸುಮಾರು ಮೂರು ಗಂಟೆಗಳ ವಿಶೇಷ ಸಭೆ ನಡೆಸಿ ಪರಿಸ್ಥಿತಿಯ ಬಗ್ಗೆ ಚರ್ಚಿಸಿದ ನಂತರ ಶಮ್ಮಿ ಸಿಲ್ವಾ ರಾಜೀನಾಮೆ ನೀಡಲು ನಿರ್ಧರಿಸಿದರು. ಆದಾಗ್ಯೂ, ತಮ್ಮ ರಾಜೀನಾಮೆಗೆ ಯಾವುದೇ ಕಾರಣಗಳನ್ನು ಬಹಿರಂಗಪಡಿಸಿಲ್ಲ.ಆಟಗಾರರಿಂದ ಬಂದ ದೂರುಗಳು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶ್ರೀಲಂಕಾ ರಾಷ್ಟ್ರೀಯ ತಂಡದ ಕಳಪೆ ಪ್ರದರ್ಶನದ ಹಿನ್ನೆಲೆಯಲ್ಲಿ ಮಾರ್ಚ್ ಆರಂಭದಿಂದಲೂ, ಶ್ರೀಲಂಕಾ ಕ್ರಿಕೆಟ್ ಮುಖ್ಯಸ್ಥ ಶಮ್ಮಿ ಸಿಲ್ವಾ ಅವರನ್ನು ತೆಗೆದುಹಾಕುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ. 2019ರಲ್ಲಿ ಸದಸ್ಯ ಕ್ಲಬ್‌ಗಳ ಬಹುಮತದಿಂದ ಮೊದಲ ಬಾರಿಗೆ ಅಧ್ಯಕ್ಷ ಸ್ಥಾನವನ್ನು ಗೆದ್ದ ನಂತರ ಸಿಲ್ವಾ ಏಳು ವರ್ಷಗಳ ಕಾಲ ಎಸ್‌ಎಲ್‌ಸಿಯ ಅಧ್ಯಕ್ಷತೆ ವಹಿಸಿದ್ದರು. 2021, 2023 ಮತ್ತು 2025 ರಲ್ಲಿ ಅವರು ಅವಿರೋಧವಾಗಿ ಮರು ಆಯ್ಕೆಯಾದರು. 2025ರಲ್ಲಿ ಜಯ್‌ಶಾ ಅವರ ನಂತರ ಸಿಲ್ವಾ ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

# ಪಾಕ್ ಕ್ರಿಕೆಟ್‌ತಜ್ಞನ ಹೇಳಿಕೆಗೆ ಸೂರ್ಯವಂಶಿ ತಿರುಗೇಟು




ಮುಂಬೈ, ಏ.29: 2026ರ ಐಪಿಎಲ್‌ನಲ್ಲಿ ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಬ್ಯಾಟಿಂಗ್ ಎಲ್ಲರನ್ನೂ ಸಂಪೂರ್ಣವಾಗಿ ಬೆರಗುಗೊಳಿಸಿದೆ. ರಾಜಸ್ಥಾನ್ ರಾಯಲ್ಸ್‌ನ ಯುವ ಆಟಗಾರ ಪ್ರಸ್ತುತ 9 ಪಂದ್ಯಗಳಿಂದ 238.09 ರ ಅದ್ಭುತ ಸ್ಟ್ರೈಕ್ ರೇಟ್‌ನಲ್ಲಿ 400 ರನ್‌ಗಳೊಂದಿಗೆ ಆರೆಂಜ್ ಕ್ಯಾಪ್ ಹೊಂದಿದ್ದಾರೆ. ಜಸ್ಪ್ರೀತ್ ಬುಮ್ರಾ ಮತ್ತು ಜೋಶ್ ಹ್ಯಾಜಲ್‌ವುಡ್‌ರಂತಹ ಸ್ಟಾರ್ ಬೌಲರ್‌ಗಳ ವಿರುದ್ಧ ಆತನ ಪ್ರದರ್ಶನ ಹೇಗಿತ್ತೆಂದರೆ, ಪಾಕಿಸ್ತಾನ ಕ್ರಿಕೆಟ್ ತಜ್ಞ ನೌಮನ್ ನಿಯಾಜ್ ತಮಾಷೆಯಾಗಿ 15 ವರ್ಷದ ಬಾಲಕನಲ್ಲಿ ಕೃತಕ ಬುದ್ಧಿಮತ್ತೆ (ಎಐ) ಚಿಪ್ ಅಳವಡಿಸಲಾಗಿದ್ದು, ಅದು ಅವನಿಗೆ ಅಂತಹ ದೊಡ್ಡ ಸಿಕ್ಸರ್‌ಗಳನ್ನು ಹೊಡೆಯಲು ಸಹಾಯ ಮಾಡುತ್ತದೆ. ಆತನನ್ನು ಡೋಪಿಂಗ್ ಟೆಸ್ಟ್‌ಗೆ ಒಳಪಡಿಸಬೇಕು, ಆತ ಸಂಪೂರ್ಣವಾಗಿ ಅವಾಸ್ತವಿಕ ಮನುಷ್ಯ ಎಂದು ಕಾಮೆಂಟ್ ಮಾಡಿದ್ದರು.

ಮಂಗಳವಾರ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಸೂರ್ಯವಂಶಿ ಅವರು 16 ಎಸೆತಗಳಲ್ಲಿ 43 ರನ್ ಗಳಿಸಿದ ನಂತರ, ಅವರನ್ನು 'ನಿಯಾಜ್ ಹೇಳಿಕೆಗಳ ಬಗ್ಗೆ ಪ್ರಶ್ನಿಸಿದಾಗ, ದೇವರು ಅದನ್ನು ನನ್ನ ಬ್ಯಾಟ್‌ಗೆ ಜೋಡಿಸಿದ್ದಾನೆ. ದೇವರು ಸ್ವರ್ಗದಲ್ಲಿ ನಿಮ್ಮ ಬ್ಯಾಟ್‌ಗೆ ಏನನ್ನೋ ಜೋಡಿಸಿದ್ದೇನೆ ಎಂದು ಹೇಳಿದನು. ನಾನು ಅದನ್ನು ಬಳಸುತ್ತಿದ್ದೇನೆ ಅಷ್ಟೇ ಎಂದು ಪ್ರತಿಕ್ರಿಯಿಸಿದ್ದಾರೆ. ಏತನ್ಮಧ್ಯೆ, ಸೂರ್ಯವಂಶಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2026 ರಲ್ಲಿ ಒಂದೇ ಸೀಸನ್ ನಲ್ಲಿ 400 ರನ್ (ಎದುರಿಸಿದ ಎಸೆತಗಳ ಆಧಾರದಲ್ಲಿ) ತಲುಪುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಕೇವಲ 167 ಎಸೆತಗಳಲ್ಲಿ ಸೂರ್ಯವಂಶಿ ಈ ಮೈಲಿಗಲ್ಲು ಸಾಧಿಸಿದ್ದಾರೆ.